ದೆಹಲಿ ಕರ್ನಾಟಕ ಸಂಘದ

ಅಭಿಮತ

ಅಕ್ಟೋಬರ್ 2026 । ಬೆಲೆ ರೂ.1

ಸಂಘದಿಂದ ಸರ್ಕಾರದೆಡೆಗೆ ಸೌಹಾರ್ದ ನಡಿಗೆ

ದೆಹಲಿ ಕನ್ನಡಿಗರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ



ಅಡಳಿತ ಕ್ಷೇತ್ರ (ಹೊರನಾಡು)
◀ ಡಾ. ಕೆ.ಎಸ್. ಸೋಮಶೇಖರ್
ರಾಜ್ಯಸಭಾ ಕಾರ್ಯದರ್ಶಿ

ಮಾಧ್ಯಮ ಕ್ಷೇತ್ರ
ಶ್ರೀ ಡಿ. ಉಮಾಪತಿ ▶
ಹಿರಿಯ ಪತ್ರಕರ್ತರು



ಅಭಿನಂದನೆ



ದೆಹಲಿ ಕರ್ನಾಟಕ ಸಂಘಕ್ಕೆ ದಿನಾಂಕ 10.10.2026ರಂದು ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾದ ಶ್ರೀ ಯು.ಟಿ. ಖಾದರ್ ಅವರು ಭೇಟಿ ನೀಡಿದ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಆತ್ಮೀಯವಾಗಿ ಸ್ವಾಗತಿಸಿ ಸಂಘದ ಪರವಾಗಿ ಅಭಿನಂದಿಸಿದರು. ಇದೇ ಸಂದರ್ಭದಲ್ಲಿ ಯಕ್ಷಧ್ರುವ ಪಟ್ಲ ಫೌಂಡೇಶನ್‌ನ ಸಂಸ್ಥಾಪಕರು ಮತ್ತು ಖ್ಯಾತ ಭಾಗವತರಾದ ಶ್ರೀ ಪಟ್ಲ ಸತೀಶ್ ಶೆಟ್ಟಿ, ಯಕ್ಷಧ್ರುವ ಪಟ್ಲ ಫೌಂಡೇಶನ್ ಬಂಟ್ವಾಳ ಘಟಕದ ಗೌರವಾಧ್ಯಕ್ಷ ಶ್ರೀ ಚಂದ್ರಹಾಸ ಶೆಟ್ಟಿ ರಂಗೋಲಿ ಹಾಗೂ ಯಕ್ಷಗಾನ ಕಲಾವಿದರು ಉಪಸ್ಥಿತರಿದ್ದರು.

ಶ್ರೀ ಬಸವರಾಜ ದೇಸಳ್ಳಿ ದಂಪತಿಗಳಿಗೆ ಆತ್ಮೀಯ ಅಭಿನಂದನೆ ಹಾಗೂ ಬೀಳ್ಕೊಡುಗೆ



ದಿನಾಂಕ 17.10.2026ರಂದು ದೆಹಲಿ ಕರ್ನಾಟಕ ಸಂಘದ ವಿಚಾರ ಸಂಕಿರಣ ಕೊಠಡಿಯಲ್ಲಿ ಕರ್ಣಾಟಕ ಬ್ಯಾಂಕ್ ಲಿಮಿಟೆಡ್‌ನ ಜನರಲ್ ಮ್ಯಾನೇಜರ್ ಆಗಿ ಬಡ್ತಿ ಪಡೆದ ಶ್ರೀ ಬಸವರಾಜ ದೇಸಳ್ಳಿ ಅವರು ದೆಹಲಿಯಿಂದ ತಾಯ್ನಾಡಿನಲ್ಲಿರುವ ಬ್ಯಾಂಕಿನ ಮುಖ್ಯ ಕಚೇರಿಗೆ ಮರಳುತ್ತಿರುವ ಸಂದರ್ಭದಲ್ಲಿ, ಅವರಿಗೆ ಹಾಗೂ ಅವರ ಧರ್ಮಪತ್ನಿಯವರಿಗೆ ಆತ್ಮೀಯ ಅಭಿನಂದನೆ ಮತ್ತು ಬೀಳ್ಕೊಡುಗೆ ಸಮಾರಂಭವನ್ನು ಆಯೋಜಿಸಲಾಗಿತ್ತು.

ಈ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ದೆಹಲಿ ಘಟಕ, ಕಲ್ಯಾಣ ಕನ್ನಡಿಗರ ಸಾಂಸ್ಕೃತಿಕ ಟ್ರಸ್ಟ್, ದೆಹಲಿ ಒಕ್ಕಲಿಗ ಗೌಡ ಸಂಘ, ದೆಹಲಿ ತುಳು ಸಿರಿ, ಜನಕಪುರಿ ಕನ್ನಡ ಕೂಟ, ಕರ್ಣಾಟಕ ಬ್ಯಾಂಕ್ ಆರ್.ಕೆ. ಪುರಂ ಶಾಖೆಯ ಸಿಬ್ಬಂದಿ ಹಾಗೂ ಎನ್‌ಸಿಆರ್ ಕನ್ನಡಿಗರ ಪರವಾಗಿ ಶ್ರೀ ಬಸವರಾಜ ದೇಸಳ್ಳಿ ದಂಪತಿಗಳನ್ನು ಆತ್ಮೀಯವಾಗಿ ಅಭಿನಂದಿಸಿ, ಅವರ ಮುಂದಿನ ವೃತ್ತಿಜೀವನ ಹಾಗೂ ಜೀವನ ಪಯಣ ಸುಖಮಯವಾಗಿರಲೆಂದು ಹೃತ್ಪೂರ್ವಕ ಶುಭ ಹಾರೈಸಲಾಯಿತು.

ಶ್ರೀ ಬಸವರಾಜ ದೇಸಳ್ಳಿ ಅವರು ದೆಹಲಿಯಲ್ಲಿ ಸಲ್ಲಿಸಿದ ಸೇವೆ ಹಾಗೂ ಕನ್ನಡಿಗರೊಂದಿಗೆ ಹೊಂದಿದ್ದ ಆತ್ಮೀಯ ಒಡನಾಟವನ್ನು ಸ್ಮರಿಸಲಾಯಿತು. ಅವರ ಮುಂದಿನ ವೃತ್ತಿಜೀವನ ಹಾಗೂ ಜೀವನ ಪಯಣ ಸುಖಮಯವಾಗಿರಲೆಂದು ಹೃತ್ಪೂರ್ವಕ ಶುಭ ಹಾರೈಸಲಾಯಿತು.❑

ಸಂಘದ ಮುಂಬರುವ ಕಾರ್ಯಕ್ರಮಗಳು

14 ನವೆಂಬರ್ 2026 ಶನಿವಾರ ಸಂಜೆ : 4.30 ಗಂಟೆಗೆ

ದೆಹಲಿಯ ಕನ್ನಡದ ಮಕ್ಕಳ ಸಾಹಿತ್ಯ ಸಾಂಸ್ಕೃತಿಕ ಸಮ್ಮಿಲನ

15 ನವೆಂಬರ್ 2026 ಭಾನುವಾರ ಸಂಜೆ : 4.30 ಗಂಟೆಗೆ

ಚಲನಚಿತ್ರ ನಟ ದತ್ತಣ್ಣ ಅವರೊಂದಿಗೆ ಸಂವಾದ ಕಾರ್ಯಕ್ರಮ ಮತ್ತು "ಮನದ ಕಡಲು" ಜನಪ್ರಿಯ ಕನ್ನಡ ಚಲನಚಿತ್ರ ಪ್ರದರ್ಶನ

21–22 ನವೆಂಬರ್ 2026

ಕರ್ನಾಟಕ ನಾಟಕ ಅಕಾಡೆಮಿ ಬೆಂಗಳೂರು ಸಹಯೋಗದಲ್ಲಿ ನಾಟಕೋತ್ಸವ–ಶನಿವಾರ
ಲಂಕೇಶ್‌ರವರ ನಾಟಕ "ಈಡಿಪಸ್" ನಿರ್ದೇಶನ : ಶಶಿಧರ ಬಳಗಾರ,
ಪ್ರಸ್ತುತಿ : ಪ್ರಯೋಗರಂಗ
ಭಾನುವಾರ–ಅನಂತಮೂರ್ತಿಯವರ "ಮೌನಿ", ನಿರ್ದೇಶನ: ನಾಗರಾಜ ಮೂರ್ತಿ
ಪ್ರಸ್ತುತಿ : ರಂಗ ಸೌರಭ

29 ನವೆಂಬರ್ 2026

ಶ್ರೀಮತಿ ರಂಗಮಣಿ ರಾವ್, ಶ್ರೀ ಶಿವಾನಂದ ಇಂಗಳೇಶ್ವರ ಮತ್ತು ಶ್ರೀ ಸುಧೀರ್ ವಿ. ಫಡ್ನೀಸ್ 2026ನೇ ಸಾಲಿನ ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪ್ರದಾನ, ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು

ದೆಹಲಿ ಕರ್ನಾಟಕ ಸಂಘದ
ಅಭಿಮತ

ಪ್ರಧಾನ ಸಂಪಾದಕರು
ರೇಣುಕಾ ನಿಡಗುಂದಿ
ಸಂಪಾದಕ ಮಂಡಳಿ
ಚಂದ್ರಶೇಖರ ಎನ್.ಪಿ.
ಸಂತೋಷ್ ಕುಮಾರ್ ಉಪಾಧ್ಯಾಯ
ಪ್ರಕಾಶ್ ಶೆಟ್ಟಿ ಉಳೆಪಾಡಿ, ಹರಿಪ್ರಿಯ ಎಸ್.
ಪ್ರಸಾದ್ ನಾಯ್ಕ್, ನಟರಾಜ್ ಸಿ.

ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ–2026–28

ಅಧ್ಯಕ್ಷರು
ರೇಣುಕುಮಾರ್ ಆರ್.
9868393953
ಉಪಾಧ್ಯಕ್ಷರು
ವಸಂತ ಶೆಟ್ಟಿ ಬೆಳ್ಳಾರೆ
9958697823
ಶೋಭಾ ಗೌಡ
8800588150
ಪ್ರಧಾನ ಕಾರ್ಯದರ್ಶಿ
ರಾಧಾಕೃಷ್ಣ
9818252183
ಖಜಾಂಚಿ
ಆಶಾಲತಾ ಎಂ.
9891249149
ಜಂಟಿ ಕಾರ್ಯದರ್ಶಿಗಳು
ಸಂತೋಷ ಜೆ.
9911235783
ಅಶ್ವಿನಿ ಬಿ.ಎಸ್.
9036235665
ಸಮಿತಿ ಸದಸ್ಯರು
ಪೂಜಾ ಪಿ. ರಾವ್
9810882498
ಶಿವಪ್ಪ ಎಂ.
9868159328
ಡಾ. ವೆಂಕಟಾಚಲ ಜಿ. ಹೆಗಡೆ
9312712476
ಡಾ. ಎಂ.ಎಸ್. ಶಶಿ ಕುಮಾರ್
9811689327
ನಾರಾಯಣ ಬಿ.
9868393978
ಕೃಷ್ಣಪ್ಪ ಎಂ.
9911156695
ಜಯಶ್ರೀ ಬಸವರಾಜು ಬಿ.ಕೆ.
9560760341
ಶುಭಾ ದೇವಿಪ್ರಸಾದ್
9319762969
ಆರ್. ಹರಿಕೃಷ್ಣ
9971518457
ರಾಜಕುಮಾರ್
9911150475

ಸಂಪುಟ 37 । ಸಂಚಿಕೆ 1
ಅಕ್ಟೋಬರ್–2026

ಸಂಪಾದಕೀಯ...

"ಎಲ್ಲಾದರು ಇರು, ಎಂತಾದರು ಇರು, ಎಂದೆಂದಿಗೂ ನೀ ಕನ್ನಡವಾಗಿರು..."

ಅಕ್ಟೋಬರ್ ತಿಂಗಳ "ಅಭಿಮತ"ವು ನವೆಂಬರ್ ಕರ್ನಾಟಕ ರಾಜ್ಯೋತ್ಸವದ ಸಂಭ್ರಮಾಚರಣೆಯ ಸಂದರ್ಭದಲ್ಲಿ ತಮ್ಮ ಕೈಸೇರುತ್ತಿದೆ. "ಕರ್ನಾಟಕ ರಾಜ್ಯೋತ್ಸವ"–ಅದು ಕನ್ನಡಿಗರ ಹಬ್ಬ. ಕನ್ನಡಿಗರ ಮಹಾಪರ್ವ. ಕರ್ನಾಟಕದ ಏಕೀಕರಣಕ್ಕಾಗಿ ತಮ್ಮ ಸರ್ವವನ್ನೂ ತ್ಯಾಗ ಮಾಡಿದ ಧೀರರನ್ನು ಸ್ಮರಿಸುತ್ತಾ, ಮಾತೃಭಾಷೆಯ ಉಳಿವಿಗೆ, ಅಳಿವಿಲ್ಲದ ಬೆಳವಣಿಗೆಗೆ ಶ್ರಮಿಸುವ ಪವಿತ್ರ ಘಳಿಗೆ ಇದು.

71ನೇ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ನಾಡಿನ 71 ಸಾಧಕರನ್ನು ಪ್ರಶಸ್ತಿಗೆ ಆಯ್ಕೆ ಮಾಡಿದ ಕರ್ನಾಟಕ ಸರಕಾರಕ್ಕೆ ಹಾಗೂ ಎಲ್ಲ ಸಾಧಕರಿಗೆ ಅಭಿನಂದನೆಗಳು. ಅದರಲ್ಲಿ ನಮ್ಮ ದೆಹಲಿ ಕನ್ನಡಿಗರೂ ಹಿರಿಯ ಪತ್ರಕರ್ತರೂ ಆದ ಶ್ರೀಯುತ ಡಿ. ಉಮಾಪತಿ ಹಾಗೂ ರಾಜ್ಯಸಭೆಯ ಕಾರ್ಯದರ್ಶಿಗಳಾದ ಡಾ. ಕೆ.ಎಸ್. ಸೋಮಶೇಖರ್ ಅವರಿಗೆ 2026 ಸಾಲಿನ ರಾಜ್ಯೋತ್ಸವ ಪ್ರಶಸ್ತಿ ಸಂದಿದೆ. ನಮ್ಮೆಲ್ಲರಿಗೂ ಸಂತಸದ ಕ್ಷಣ. ನಮ್ಮ ಹೆಮ್ಮೆಯ ಸಾಧಕರಿಗೆ ಹಾರ್ದಿಕ ಅಭಿನಂದನೆಗಳು. ಇದೇ ಅಕ್ಟೋಬರ್ 26ರಂದು ವರಕವಿ ದ.ರಾ. ಬೇಂದ್ರೆ ಅವರ 45ನೇ ಪುಣ್ಯತಿಥಿಯಾಗಿದ್ದು ಅವರಿಗೆ ಮರಣೋತ್ತರ "ಕರ್ನಾಟಕ ರತ್ನ" ಪ್ರಶಸ್ತಿಯನ್ನು ನೀಡಬೇಕೆಂಬ ದ.ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ಅಧ್ಯಕ್ಷರ ಅಭಿಪ್ರಾಯ–ಆಶಯ ಸರಿಯಾಗಿಯೇ ಇದೆ. ಸರಕಾರ ಈ ಬಗ್ಗೆ ಚಿತ್ತ ಹರಿಸಬೇಕು.

ಅಕ್ಟೋಬರ್ 2ರಂದು ಜನಿಸಿದ ಗಾಂಧೀಜಿಯವರ ಬದುಕಿನಲ್ಲಿ ದಕ್ಷಿಣ ಆಫ್ರಿಕಾದ ಫೀನಿಕ್ಸ್ ಆಶ್ರಮದ ದಿನಗಳು ಅತ್ಯಂತ ಮಹತ್ವದವು. ಅಲ್ಲಿ ಅವರು ಮೈಗೂಡಿಸಿಕೊಂಡ ಸರಳತೆ, ಸಮಾನತೆ, ಕಾಯಕಯೋಗ ಹಾಗೂ ಅಹಿಂಸೆಯ ಮೌಲ್ಯಗಳೇ ಮುಂದೆ ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ದಾರಿದೀಪವಾಗಿ, ಅವರನ್ನು ವಿಶ್ವದ 'ಮಹಾತ್ಮ'ನನ್ನಾಗಿ ರೂಪಿಸಿದವು. ಗಾಂಧೀಜಿಯವರನ್ನು ಅಲ್ಲಗಳೆಯುವ, ದ್ವೇಷಿಸುವ ಇಂದಿನ ಹೊತ್ತಿನಲ್ಲೂ, ಅವರ ಸಾರ್ವಕಾಲಿಕ ಮೌಲ್ಯಗಳು ಮತ್ತೆ ಮತ್ತೆ ಪ್ರಸ್ತುತವೆನಿಸುತ್ತವೆ.

ಅಕ್ಟೋಬರ್ 2ರಂದೇ ಜನ್ಮ ತಾಳಿದ ಮತ್ತೊಬ್ಬ ಮಹಾನ್ ನಾಯಕ ಲಾಲ್ ಬಹದ್ದೂರ್ ಶಾಸ್ತ್ರಿಯವರು. ಅವರ "ಜೈ ಜವಾನ್, ಜೈ ಕಿಸಾನ್" ಕರೆ ದೇಶದ ರೈತರು ಮತ್ತು ಸೈನಿಕರಲ್ಲಿ ಅಭೂತಪೂರ್ವ ಶಕ್ತಿಯನ್ನು ತುಂಬಿತು. ಅವರ ಆ ಜನ್ಮ ಸರಳತೆ, ಪ್ರಾಮಾಣಿಕತೆ ಮತ್ತು ನಿಷ್ಠೆ ಇಂದಿನ ರಾಜಕೀಯ ರಂಗಕ್ಕೆ ಅತ್ಯಗತ್ಯವಾದ ನೈತಿಕ ದಾರಿದೀಪವಾಗಿದೆ.

ಕನ್ನಡಿಗರ "ನಾಡಹಬ್ಬವಾದ ದಸರೆ, ಭವ್ಯ ಜಂಬೂಸವಾರಿಯು ನಾಡಿನ ಸಾಹಿತ್ಯ, ಕಲೆ ಹಾಗೂ ಜನಪದ ಸೌಂದರ್ಯವನ್ನು ಜಗತ್ತಿನ ಕಣ್ಮುಂದೆ ನಿಲ್ಲಿಸಿದರೆ, ರಾಜಧಾನಿ ದೆಹಲಿಯಲ್ಲಿ ಬಂಗಾಲಿಗಳ ಪ್ರಮುಖ ಜನಪದೀಯ ಹಬ್ಬವಾದ 'ದುರ್ಗಾಪೂಜೆ'ಯ ವೈಭವವು ಅನನ್ಯವಾದುದು. ಅನ್ಯಾಯದ ಮೇಲೆ ನ್ಯಾಯದ ವಿಜಯದ ಸಂಕೇತವಾಗಿ ರಾವಣ, ಮೇಘನಾಥ ಮತ್ತು ಕುಂಭಕರ್ಣನ ಪ್ರತಿಮೆಗಳನ್ನು ದಹಿಸುತ್ತಾರೆ. "ದುರ್ಗಾ ಪೂಜೆಯು ಕೇವಲ ಬಾಹ್ಯ ಸಂಭ್ರಮದ ಆಚರಣೆಯಾಗದೇ ಬದುಕಿನ ಜಂಜಾಟಗಳಿಂದ ಸೋತ ಮನಸ್ಸನ್ನು ಸಾತ್ವಿಕತೆಯ ಮಳೆಯಲ್ಲಿ ತೊಳೆದು, ಹಸನುಗೊಳಿಸುವ ಅಧ್ಯಾತ್ಮಿಕ ಪರ್ವ." ಭಾರತದ ಸಾಂಸ್ಕೃತಿಕ ವೈವಿಧ್ಯತೆಯ ಮತ್ತೊಂದು ಅಪೂರ್ವ ಸಂಗಮದಂತೆ–ಛತ್ತೀಸ್‌ಗಢದ ಬಸ್ತರ್‌ನಂತಹ ಬುಡಕಟ್ಟು ಪ್ರದೇಶಗಳಲ್ಲಿ ರಾವಣನನ್ನು ಸುಡುವ ಬದಲು ಆತನ ಅಸಾಧಾರಣ ಜ್ಞಾನ ಹಾಗೂ ಪಾಂಡಿತ್ಯಕ್ಕಾಗಿ ಗೌರವದಿಂದ ಪೂಜಿಸುತ್ತಾರೆ. ಹೀಗೆ ವಿಭಿನ್ನ ಆಚರಣೆಗಳ ಮೂಲಕ ಈ ಹಬ್ಬಗಳು ದೇಶದ ಬಹುಸಂಸ್ಕೃತಿಯ ಸೌಂದರ್ಯಕ್ಕೆ ಸದಾ ಕನ್ನಡಿ ಹಿಡಿಯುತ್ತವೆ. ನವದೆಹಲಿಯ ಸಂಸತ್ ಭವನದ ಆವರಣದಲ್ಲಿರುವ ಕಿತ್ತೂರು ಚೆನ್ನಮ್ಮನ ಪ್ರತಿಮೆಗೆ ಅವರ ಜಯಂತಿಯಂದು ಕನ್ನಡಿಗರು ಪುಷ್ಪವಂದನೆ ಸಲ್ಲಿಸಿದ್ದು ವಿಶೇಷ. ದೇಶದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಮುಂಚೂಣಿ ಹೋರಾಟಗಾರ್ತಿ ಚೆನ್ನಮ್ಮಳ ಅಚಲ ದೇಶಪ್ರೇಮ ಹಾಗೂ ಇದೇ ಸಂದರ್ಭದಲ್ಲಿ ಆಚರಿಸಲಾದ ಮಹರ್ಷಿ ವಾಲ್ಮೀಕಿಯವರ ಸಾರ್ವಕಾಲಿಕ ಮೌಲ್ಯಗಳು ಮುಂಬರುವ ತಲೆಮಾರುಗಳಿಗೆ ಸ್ಫೂರ್ತಿಯ ಚಿಲುಮೆಯಾಗಿವೆ.

ಕರ್ನಾಟಕ ರಾಜ್ಯೋತ್ಸವದಂದು ಭಾಷಾಭಿಮಾನ, ನಮ್ಮ 'ಕನ್ನಡತನ' ಮತ್ತು 'ಭಾರತೀಯತೆ' ಬಗ್ಗೆ ಮಾತಾಡುವಾಗ ಹೊರನಾಡ ಕನ್ನಡಿಗರಾಗಿ ನಾವು ಕಟ್ಟಿಕೊಂಡ ಬದುಕು, ಸಾಗಿ ಬಂದ ಹಾದಿ, ದಿಲ್ಲಿಯ ಬಿರು ಬಿಸಿಲು ಕಡು ಚಳಿಗೆ ಒಗ್ಗಿ ಹೋದ ಪ್ರತಿಯೊಬ್ಬರ ಬದುಕೂ ವಿಶಿಷ್ಟವಿಲ್ಲಿ. ಹೊರನಾಡ ಕನ್ನಡಿಗರ ಸಂಘಟನೆ–ಸಾಧನೆಗಳ ಇತಿಹಾಸದ ಸುವರ್ಣ ಪುಟಗಳನ್ನು ತಿರುವಿ ಹಾಕುತ್ತಾ, ಭವಿಷ್ಯದ ಹೆಜ್ಜೆಗಳಿಗೆ ಸ್ಫೂರ್ತಿ ತುಂಬುವ ಪ್ರಯತ್ನವನ್ನು ಸಂಘದ ಮುಖವಾಣಿ ಪತ್ರಿಕೆ "ಅಭಿಮತ" ಮಾಡುತ್ತಾ ಬಂದಿದೆ. 2026ರ ಅಕ್ಟೋಬರ್‌ಗೆ 36 ಸಂವತ್ಸರಗಳನ್ನು ಯಶಸ್ವಿಯಾಗಿ ಪೂರೈಸಿ ಪ್ರಬುದ್ಧವಾಗಿದೆ. ಇಂತಹ ಸಾಂಸ್ಕೃತಿಕ ಹಾಗೂ ಚಿಂತನೆಯ ಪ್ರವಾಹದಲ್ಲಿ, ಕನ್ನಡ ನುಡಿ, ಸಾಹಿತ್ಯ ಮತ್ತು ವಿಚಾರಧಾರೆಯ ಸೇವೆಯಲ್ಲಿ ಸತತ 36 ವಸಂತಗಳನ್ನು ಯಶಸ್ವಿಯಾಗಿ ಪೂರೈಸಿರುವ 'ಅಭಿಮತ' ಪತ್ರಿಕೆಯು ಅಕ್ಷರ ಲೋಕದ ಧ್ರುವತಾರೆಯಾಗಿ ಬೆಳೆದಿರುವುದು ಕನ್ನಡಿಗರೆಲ್ಲರಿಗೂ ಅತ್ಯಂತ ಹೆಮ್ಮೆಯ ಸಂಗತಿ. "ಪ್ರೀತಿ ಇಲ್ಲದ ಮೇಲೆ ಹೂವು ಅರಳೀತು ಹೇಗೆ?" ಎಂಬ ಕವಿವಾಣಿಯಂತೆ ಇಷ್ಟುಕಾಲ ಅಕ್ಷರ ಪ್ರೀತಿಯಿಂದ ಅಭಿಮತವನ್ನು ನಡೆಸಿಕೊಂಡು ಬಂದ ಎಲ್ಲಾ ಅಕ್ಷರಪ್ರೇಮಿಗಳಿಗೆ ಕೃತಜ್ಞತೆಗಳು. ನಿಮ್ಮೆಲ್ಲರ ಪ್ರೀತಿ ಹೀಗೇ ಇರಲಿ. ಈ ಕನ್ನಡದ ನಂದಾದೀಪದ ಬೆಳಕು ಎಂದೆಂದಿಗೂ ಹೀಗೆಯೇ ಪ್ರಜ್ವಲಿಸುತ್ತಿರಲಿ, ನಮ್ಮ ಅಸ್ಮಿತೆಯ ಧ್ವನಿ ಸದಾ ಮೊಳಗುತ್ತಿರಲಿ.

ಸಮಸ್ತ ಕನ್ನಡಿಗರಿಗೆ ಕರ್ನಾಟಕ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು. ❑

ರೇಣುಕಾ ನಿಡಗುಂದಿ

ಕಾವಲು ಸಮಿತಿ ಶ್ರೀ ಎನ್.ಎ. ಮಾಧವ । ಶ್ರೀ ಎಂ.ವಿ. ವೆಂಕಟೇಶ್ । ಶ್ರೀಮತಿ ರಾಧಾ ಕೌಜಲಗಿ

ನಾವು–ನೀವು

ನಲ್ಮೆಯ ದೆಹಲಿ ಮಿತ್ರರೇ

ಕನ್ನಡದ ಕೊಂಡಿ, ಸಹಬಾಳ್ವೆಯ ನಡಿಗೆ

ನವದೆಹಲಿಯಲ್ಲಿ ಕನ್ನಡ ಭಾಷೆ, ಸಂಸ್ಕೃತಿ ಮತ್ತು ಪರಂಪರೆಯನ್ನು ಜೀವಂತವಾಗಿರಿಸುವುದು ದೆಹಲಿ ಕರ್ನಾಟಕ ಸಂಘದ ನಿರಂತರ ಪ್ರಯತ್ನ. ಸಂಘದ ಚಟುವಟಿಕೆಗಳು ಕೇವಲ ಹಬ್ಬ, ಉತ್ಸವ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸೀಮಿತವಾಗದೆ, ಕನ್ನಡಿಗರ ನಡುವೆ ಪ್ರೀತಿ, ವಿಶ್ವಾಸ, ಸಹಕಾರ ಹಾಗೂ ಸಾಮಾಜಿಕ ಹೊಣೆಗಾರಿಕೆಯನ್ನು ಬೆಸೆಯುವ ವೇದಿಕೆಯಾಗಬೇಕು ಎಂಬುದು ನಮ್ಮ ಆಶಯ.

ಈ ಆಶಯದ ಭಾಗವಾಗಿ ನವೆಂಬರ್ 1ರಂದು "ಸರ್ಕಾರದೆಡೆಗೆ ಸೌಹಾರ್ದ ನಡಿಗೆ"ಯನ್ನು ಹಮ್ಮಿಕೊಳ್ಳಲು ಉದ್ದೇಶಿಸಿದ್ದೇವೆ. ದೆಹಲಿ ಕರ್ನಾಟಕ ಸಂಘದಿಂದ ಕರ್ನಾಟಕ ಭವನದವರೆಗೆ ನಡೆಯಲಿರುವ ಈ ನಡಿಗೆಯ ಮೂಲಕ ಸಂಘ ಮತ್ತು ಸರ್ಕಾರದ ನಡುವಿನ ಬಾಂಧವ್ಯವನ್ನು ವೃದ್ಧಿಸುವ ಹಾಗು ಸರ್ಕಾರದ ಸಹಕಾರಕ್ಕೆ ಧನ್ಯವಾದಗಳನ್ನರ್ಪಿಸಲು ಉದ್ದೇಶಿಸಲಾಗಿದೆ. ಸಂಘದ ಸಾಮಾಜಿಕ ಕಾಳಜಿ ಮತ್ತು ಸಾಮುದಾಯಿಕ ಸೌಹಾರ್ದದ ಆಶಯವನ್ನು ಅಭಿವ್ಯಕ್ತಿಸುವ ಪ್ರಯತ್ನವಾಗಿದೆ.

ಕನ್ನಡ ರಂಗಭೂಮಿಗೆ ತಮ್ಮದೇ ಆದ ವಿಶಿಷ್ಟ ಕೊಡುಗೆ ನೀಡಿರುವ ಹಿರಿಯ ಕಲಾವಿದ ದತ್ತಣ್ಣ ಅವರಿಗೆ 'ದೆಹಲಿ ಕರ್ನಾಟಕ ಸಂಘದ ಕನ್ನಡ ಭಾರತೀ ರಂಗ ಪ್ರಶಸ್ತಿ' ಘೋಷಣೆಯಾಗಿರುವುದು ಸಂತಸದ ಸಂಗತಿ. ರಂಗಭೂಮಿಯ ಬದ್ಧತೆ, ಕಲಾಸಾಧನೆ ಮತ್ತು ಸಾಂಸ್ಕೃತಿಕ ಸೇವೆಯನ್ನು ಗುರುತಿಸಿ ಗೌರವಿಸುವುದು ಕಲಾಪ್ರಪಂಚಕ್ಕೆ ನಾವು ಸಲ್ಲಿಸುವ ಗೌರವವೂ ಹೌದು. ಅವರ ಸುದೀರ್ಘ ಕಲಾಯಾನಕ್ಕೆ ಈ ಪ್ರಶಸ್ತಿ ಮತ್ತಷ್ಟು ಮೆರುಗು ನೀಡಲಿ ಎಂದು ಹಾರೈಸುತ್ತೇನೆ.

ಅದೇ ರೀತಿ, ರಾಷ್ಟ್ರ ರಾಜಧಾನಿಯಲ್ಲಿ ನೆಲೆಸಿ ಕನ್ನಡ ಭಾಷೆ, ಸಾಹಿತ್ಯ, ಕಲೆ ಮತ್ತು ಸಂಸ್ಕೃತಿಯ ಸೇವೆ ಸಲ್ಲಿಸಿರುವ ದೆಹಲಿ ಕನ್ನಡಿಗರನ್ನು ಗುರುತಿಸಿ ಗೌರವಿಸುವ 'ವಿಶಿಷ್ಟ ಕನ್ನಡಿಗ ಪ್ರಶಸ್ತಿ' ಪ್ರಶಸ್ತಿ ಕೂಡ ಘೋಷಣೆಯಾಗಿದೆ. ದೆಹಲಿ ಕರ್ನಾಟಕ ಸಂಘವು ಬಹುಕಾಲದಿಂದ ನವೆಂಬರ್ ತಿಂಗಳಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಆಯೋಜಿಸಿಕೊಂಡು ಬರುತ್ತಿದೆ. ಹೀಗಾಗಿ ಸಾಧಕರಿಗೆ ಗೌರವ ಸಲ್ಲಿಸುವ ಈ ಸಮಾರಂಭಕ್ಕಾಗಿ ಕನ್ನಡಿಗರೆಲ್ಲರೂ ಕಾತರದಿಂದ ಕಾಯುತ್ತಾರೆ.

ಇದೇ ಸಂದರ್ಭದಲ್ಲಿ ಜನಕಪುರಿಯ ಸುವರ್ಣಮಹೋತ್ಸವದ ಆಚರಣೆಯೂ ವಿಶೇಷ ಮಹತ್ವ ಪಡೆದಿದೆ. ಐದು ದಶಕಗಳ ಸಾಂಘಿಕ ಬದುಕಿನ ನೆನಪುಗಳನ್ನು ಮೆಲುಕು ಹಾಕುವುದರ ಜೊತೆಗೆ, ಮುಂದಿನ ಪೀಳಿಗೆಗೆ ಕನ್ನಡದ ಸಾಂಸ್ಕೃತಿಕ ಪರಂಪರೆಯನ್ನು ಪರಿಚಯಿಸುವ ಮಹತ್ವದ ಅವಕಾಶವೂ ಇದಾಗಿದೆ.

ನಾಡಪ್ರಭು ಕೆಂಪೇಗೌಡರ ಜಯಂತಿಯ ಆಚರಣೆಯ ಮೂಲಕ ಕರ್ನಾಟಕದ ಇತಿಹಾಸ, ನಗರ ನಿರ್ಮಾಣದ ದೂರದೃಷ್ಟಿ ಮತ್ತು ನಾಡಿನ ಅಸ್ಮಿತೆಯನ್ನು ಸ್ಮರಿಸಿದ್ದೇವೆ. ಭಾರತ ಸರ್ಕಾರದ ರೈಲ್ವೇ ಹಾಗೂ ಜಲಶಕ್ತಿ ಮಂತ್ರಾಲಯದ ಸಚಿವರಾದ ಶ್ರೀ ವಿ. ಸೋಮಣ್ಣನವರ ಮಾರ್ಗದರ್ಶನ ಹಾಗೂ ಮುಂದಾಳತ್ವದಲ್ಲಿ ಆಯೋಜಿಸಿದ ಬ್ರಿಟಿಷರ ವಿರುದ್ಧ ಕೆಚ್ಚೆದೆಯ ಹೋರಾಟ ನಡೆಸಿದ ವೀರರಾಣಿ ಕಿತ್ತೂರು ಚೆನ್ನಮ್ಮನ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಿದ್ದೇವೆ.

ಬರುವ ನವೆಂಬರ್ ತಿಂಗಳು ಕನ್ನಡಿಗರ ಪಾಲಿಗೆ ಸಂಭ್ರಮದ ಹಬ್ಬದ ತಿಂಗಳು. ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಹಲವು ವೈವಿಧ್ಯಮಯ ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದೇವೆ. ಈ ಕಾರ್ಯಕ್ರಮಗಳು ನಾಡಿನ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿ ಮತ್ತು ಪರಂಪರೆಯ ವೈಭವವನ್ನು ದೆಹಲಿಯ ನೆಲದಲ್ಲಿ ಅನಾವರಣಗೊಳಿಸಲಿವೆ. ಕನ್ನಡದ ಹಿರಿಮೆ ಮತ್ತು ವೈಶಿಷ್ಟ್ಯವನ್ನು ಸಾರುವ ಇಂತಹ ಆಚರಣೆಗಳು ನಮ್ಮೊಳಗಿನ ಕನ್ನಡತನವನ್ನು ಮತ್ತಷ್ಟು ಗಟ್ಟಿಗೊಳಿಸುವುದರ ಜೊತೆಗೆ, ನಮ್ಮ ಭಾಷೆ ಮತ್ತು ಸಂಸ್ಕೃತಿಯನ್ನು ಇತರ ಭಾಷಿಕ ಸಮುದಾಯಗಳಿಗೂ ಪರಿಚಯಿಸುವ ಸೇತುವೆಗಳಾಗಲಿವೆ.

ಈ ಎಲ್ಲ ಕಾರ್ಯಕ್ರಮಗಳ ಯಶಸ್ಸಿನ ಹಿಂದೆ ಸಂಘದ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು, ಸಾಂಸ್ಕೃತಿಕ ಸಂಸ್ಥೆಗಳು, ಕಲಾವಿದರು, ಸ್ವಯಂಸೇವಕರು ಹಾಗೂ ಕನ್ನಡಾಭಿಮಾನಿಗಳ ಸಹಕಾರ ಮತ್ತು ಪರಿಶ್ರಮವಿದೆ. ಸಂಘದ ಪ್ರತಿಯೊಂದು ಚಟುವಟಿಕೆಯ ಹಿಂದೆಯೂ ಅನೇಕ ಕೈಗಳ ಶ್ರಮ, ಹೃದಯಗಳ ಪ್ರೀತಿ ಮತ್ತು ಕನ್ನಡದ ಮೇಲಿನ ಅಭಿಮಾನ ಅಡಗಿದೆ. ಅವರೆಲ್ಲರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ದೆಹಲಿ ಕರ್ನಾಟಕ ಸಂಘವು ಕೇವಲ ಒಂದು ಸಂಸ್ಥೆಯಾಗಿ ಉಳಿಯದೆ, ದೆಹಲಿಯ ಕನ್ನಡಿಗರ ಭಾವನಾತ್ಮಕ ಮನೆಯಾಗಿ, ಹೊಸ ತಲೆಮಾರಿನ ಕನ್ನಡಿಗರಿಗೆ ಭಾಷೆ ಮತ್ತು ಸಂಸ್ಕೃತಿಯ ಕೊಂಡಿಯಾಗಿ ಬೆಳೆಯಬೇಕು ಎಂಬುದು ನನ್ನ ಆಶಯ. ನಮ್ಮ ಮುಂದಿನ ಪೀಳಿಗೆಗೆ ಕನ್ನಡವನ್ನು ಕೇವಲ ನೆನಪಾಗಿ ಉಳಿಸದೆ, ಅವರ ಬದುಕಿನ ಅವಿಭಾಜ್ಯ ಭಾಗವಾಗಿಸುವ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ.

ಕನ್ನಡ ನಮ್ಮ ಭಾಷೆ ಮಾತ್ರವಲ್ಲ; ಅದು ನಮ್ಮ ಸಂಸ್ಕೃತಿ, ಅಸ್ಮಿತೆ ಮತ್ತು ಭಾವನಾತ್ಮಕ ಬಂಧ. ಈ ಬಂಧವನ್ನು ಗಟ್ಟಿಗೊಳಿಸುತ್ತಾ, ಎಲ್ಲರ ಸಹಕಾರದೊಂದಿಗೆ ದೆಹಲಿ ಕರ್ನಾಟಕ ಸಂಘವನ್ನು ಹೊಸ ಎತ್ತರಕ್ಕೆ ಕೊಂಡೊಯ್ಯೋಣ. ಪ್ರೀತಿ ಮತ್ತು ಅಭಿಮಾನಗಳೊಂದಿಗೆ,❑

ರೇಣುಕುಮಾರ್ ಆರ್.

ಅಧ್ಯಕ್ಷರು

ಮುನ್ನೋಟ

ಕರುನಾಡಿನ ವೈಭವ–ದೆಹಲಿಯಲ್ಲಿ ಕನ್ನಡದ ಕಂಪು ಎಲ್ಲಿದ್ದರೂ ಕನ್ನಡವೇ ಇಂಪು:

ಈ ಸಾಂಸ್ಕೃತಿಕ ಶ್ರೀಮಂತಿಕೆಯ ಕಂಪನ್ನು ರಾಷ್ಟ್ರ ರಾಜಧಾನಿ ದೆಹಲಿಯಲ್ಲೂ ಪಸರಿಸುತ್ತಿರುವ ದೆಹಲಿ ಕರ್ನಾಟಕ ಸಂಘ ಅಕ್ಟೋಬರ್ ತಿಂಗಳು ವೈವಿಧ್ಯಮಯ ಹಾಗೂ ಗುಣಮಟ್ಟದ ಕಾರ್ಯಕ್ರಮಗಳ ಮೂಲಕ ದೆಹಲಿ ಕನ್ನಡಿಗರಿಗೆ ಸಾಂಸ್ಕೃತಿಕ ರಸದೌತಣವನ್ನೇ ನೀಡಿತು. ಕನ್ನಡ ರಾಜ್ಯೋತ್ಸವದ ಸಂಭ್ರಮಕ್ಕೆ ಮುನ್ನುಡಿಯಾದ ಮಹಾತ್ಮ ಗಾಂಧೀಜಿಯವರ ಸತ್ಯ, ಅಹಿಂಸೆ, ಶಾಂತಿ, ಸಹನೆ ಮತ್ತು ಸರಳತೆಯ ಆದರ್ಶಗಳನ್ನು ಕೇವಲ ಸ್ಮರಿಸುವುದಷ್ಟೇ ಅಲ್ಲದೆ, ಅವುಗಳನ್ನು ನಮ್ಮ ಬದುಕಿನಲ್ಲೂ ಅಳವಡಿಸಿಕೊಂಡು ಮುನ್ನಡೆಯಬೇಕಿದೆ.

ಸರ್ವ ಜನಾಂಗದ ಶಾಂತಿಯ ಕುವೆಂಪು ವಾಕ್ಯ ವಿಶ್ವವ್ಯಾಪ್ತಿ ಪಸರಿಸಬೇಕಿದೆ. ದೆಹಲಿ ಕರ್ನಾಟಕ ಸಂಘದ ನಂತರದ ಸುದೀರ್ಘ ಇತಿಹಾಸ ಮತ್ತು ಸಾಂಸ್ಕೃತಿಕ ಹಿನ್ನೆಲೆಯನ್ನು ಹೊಂದಿರುವ ಜನಕಪುರಿ ಕನ್ನಡ ಕೂಟದ ಸಾಹಿತಿಗಳು, ನಾಟಕಕಾರರು ಹಾಗೂ ಬರಹಗಾರರ ಕೊಡುಗೆ ದೆಹಲಿ ಕನ್ನಡ ಲೋಕಕ್ಕೆ ಬಹಳಷ್ಟಿದೆ. ಅಂತಹ ಸಾಹಿತ್ಯ ಪರಂಪರೆಯ ಮೂರು ಪ್ರಮುಖ ಮಹನೀಯರಾದ ಶ್ರೀ ಹೆಚ್.ಎಸ್. ಕುಲಕರ್ಣಿ, ಶ್ರೀ ಕೃಷ್ಣಮೂರ್ತಿ ಕಲುಮಂಗಿ ಮತ್ತು ಶ್ರೀ ಎಸ್.ಬಿ. ಕುರಂದವಾಡ ಅವರನ್ನು ಸ್ಮರಿಸುವ ವಿಶೇಷ ಸಾಹಿತ್ಯ ಸಂಜೆ ಮನಮುಟ್ಟುವಂತೆ ಮೂಡಿಬಂತು.

ದೆಹಲಿ ಕರ್ನಾಟಕ ಸಂಘದ ಸಹಯೋಗದಲ್ಲಿ ದೆಹಲಿ ಫ್ರೆಂಡ್ಸ್ ತಂಡ ಪ್ರಸ್ತುತಪಡಿಸಿದ 'ಮುದ್ದಣ್ಣನ ಪ್ರಮೋಷನ್ ಪ್ರಸಂಗ' ನಾಟಕವು ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಗಿ ರಂಗಾಸಕ್ತರಿಗೆ ಮನರಂಜನೆಯ ರಸದೌತಣ ನೀಡಿತು. ಸಂಘದ ಸಹಯೋಗದೊಂದಿಗೆ ಜನಕಪುರಿ ಕನ್ನಡ ಕೂಟ ಆಚರಿಸಿದ ಐತಿಹಾಸಿಕ ಸುವರ್ಣ ಮಹೋತ್ಸವವು ಕನ್ನಡಿಗರ ಒಗ್ಗಟ್ಟು, ಸಂಘಟನಾ ಶಕ್ತಿ ಮತ್ತು ಸಾಂಸ್ಕೃತಿಕ ಬದ್ಧತೆಗೆ ಸಾಕ್ಷಿಯಾಗಿ ಇತಿಹಾಸದ ಪುಟಗಳಲ್ಲಿ ಸವಿ ನೆನಪಾಗಿ ಉಳಿಯಿತು.

ನಮ್ಮ ನಾಡಿನ ವಿಶಿಷ್ಟ ಹಾಗೂ ಶ್ರೀಮಂತ ಕಲಾಪ್ರಕಾರವಾದ ಯಕ್ಷಗಾನವನ್ನು ಯಕ್ಷಧ್ರುವ ಪಟ್ಲ ಫೌಂಡೇಶನ್‌ನ ದೆಹಲಿ ಘಟಕವು ಕರಾವಳಿಯ ಕಲಾ ಪರಂಪರೆಯ ವೈಭವವನ್ನು ರಾಷ್ಟ್ರ ರಾಜಧಾನಿಯಲ್ಲಿ ಅನಾವರಣಗೊಳಿಸಿ ದೆಹಲಿ ಕನ್ನಡಿಗರನ್ನು ರಂಜಿಸಿತು. ಅಕ್ಟೋಬರ್ 2026 ವೈವಿಧ್ಯಮಯ ಕಾರ್ಯಕ್ರಮಗಳ ಮೂಲಕ ಸಾರ್ಥಕವಾದರೆ, ಕನ್ನಡದ ಹಬ್ಬವಾದ ನವೆಂಬರ್ ತಿಂಗಳು ಇನ್ನಷ್ಟು ಸಂಭ್ರಮ ಮತ್ತು ವಿಶೇಷ ಕಾರ್ಯಕ್ರಮಗಳೊಂದಿಗೆ ದೆಹಲಿ ಕರ್ನಾಟಕ ಸಂಘ ಕನ್ನಡಿಗರನ್ನು ಕೈಬೀಸಿ ಕರೆಯುತ್ತಿದೆ. ಈ ಬಾರಿಯ ಕನ್ನಡ ರಾಜ್ಯೋತ್ಸವದ ಸಂಭ್ರಮಕ್ಕೆ ಮತ್ತೊಂದು ವಿಶೇಷ ಮೆರುಗು ಎಂದರೆ ನಮ್ಮ ದೆಹಲಿ ಕನ್ನಡಿಗರಾದ ಡಾ.ಕೆ.ಎಸ್. ಸೋಮಶೇಖರ್ (ಲೋಕಸಭೆಯ ಜಂಟಿ ಕಾರ್ಯದರ್ಶಿ) ಹಾಗೂ ಹಿರಿಯ ಪತ್ರಕರ್ತರಾದ ಶ್ರೀ ಉಮಾಪತಿ ಅವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಲಭಿಸಿರುವುದು. ಇದು ಕೇವಲ ಇಬ್ಬರು ಗಣ್ಯರಿಗೆ ಸಂದ ಗೌರವವಲ್ಲ; ರಾಷ್ಟ್ರ ರಾಜಧಾನಿಯಲ್ಲಿ ಕನ್ನಡದ ಅಸ್ಮಿತೆ, ಪ್ರತಿಭೆ ಮತ್ತು ಸಾಧನೆಯ ಛಾಪು ಮೂಡಿಸಿರುವ ಸಮಸ್ತ ದೆಹಲಿ ಕನ್ನಡಿಗರಿಗೆ ಸಂದ ಹೆಮ್ಮೆಯ ಗೌರವವಾಗಿದೆ. ದೆಹಲಿಯ ಕನ್ನಡ ಲೋಕದ ಶ್ರೀಮಂತಿಕೆ ಮತ್ತು ಸಾಧನೆಯ ಎತ್ತರವನ್ನು ಸಾರಲು ಈ ಇಬ್ಬರ ಸಾಧನೆಗಳೇ ಸಾಕ್ಷಿಯಾಗಿವೆ.

ಇಷ್ಟಕ್ಕೇ ನಮ್ಮ ಸಂಭ್ರಮ ಸೀಮಿತವಾಗಿಲ್ಲ. ವರ್ಷದ ಅಂತ್ಯದ ವೇಳೆಗೆ ದೆಹಲಿ ಕನ್ನಡಿಗರಿಗಾಗಿ ಪಿಕ್‌ನಿಕ್, ಕ್ರಿಕೆಟ್ ಪಂದ್ಯಾವಳಿ, ಆಹಾರ ಮೇಳ ಹಾಗೂ ಆರೋಗ್ಯ ಮೇಳ ಸೇರಿದಂತೆ ಹಲವು ಆಕರ್ಷಕ ಕಾರ್ಯಕ್ರಮಗಳನ್ನು ವಿಶೇಷವಾಗಿ ಆಯೋಜಿಸುವ ಯೋಜನೆಯಿದೆ. ಇವು ಕೇವಲ ಮನರಂಜನೆಯ ಕಾರ್ಯಕ್ರಮಗಳಲ್ಲ; ಕನ್ನಡಿಗರನ್ನು ಒಂದೆಡೆ ಸೇರಿಸುವ, ಪರಸ್ಪರ ಬಾಂಧವ್ಯವನ್ನು ಗಟ್ಟಿಗೊಳಿಸುವ ಹಾಗೂ ನಮ್ಮ ಸಮುದಾಯದ ಒಗ್ಗಟ್ಟು ಮತ್ತು ಸೌಹಾರ್ದತೆಯನ್ನು ಮತ್ತಷ್ಟು ಬೆಸೆಯುವ ಸುಂದರ ಅವಕಾಶಗಳಾಗಿವೆ.


ನಾಡಿನಿಂದ ದೂರವಿದ್ದರೂ ನುಡಿಯಿಂದ ದೂರವಿಲ್ಲ; ನೆಲದಿಂದ ದೂರವಿದ್ದರೂ ಸಂಸ್ಕೃತಿಯಿಂದ ದೂರವಿಲ್ಲ. ಅಕ್ಟೋಬರ್‌ನ ಸವಿನೆನಪುಗಳನ್ನು ಹೃದಯದಲ್ಲಿರಿಸಿಕೊಂಡು, ನವೆಂಬರ್‌ನ ರಾಜ್ಯೋತ್ಸವದ ಸಂಭ್ರಮವನ್ನು ಸ್ವಾಗತಿಸುತ್ತಾ, ಮುಂದಿನ ದಿನಗಳಲ್ಲಿಯೂ ಕನ್ನಡದ ಕಂಪು ರಾಷ್ಟ್ರ ರಾಜಧಾನಿಯ ಉದ್ದಗಲಕ್ಕೂ ಪಸರಿಸಲಿ ಎಂಬ ಆಶಯದೊಂದಿಗೆ...❑

ಜೈ ಕನ್ನಡಾಂಬೆ! ಜೈ ಭುವನೇಶ್ವರಿ!

ರಾಧಾಕೃಷ್ಣ

ಪ್ರಧಾನ ಕಾರ್ಯದರ್ಶಿ

ಗಾಂಧೀಜಿಯವರ ಪರಿಸರ ಕಾಳಜಿ



ಗಾಂಧೀಜಿ ಒಬ್ಬ ಅಪ್ರತಿಮ ಪರಿಸರ ಚಿಂತಕರು ಎಂಬುದನ್ನು ಅವರು ಕಾಲವಾದ ನಂತರ ಜಗತ್ತು ಗುರುತಿಸ ತೊಡಗಿದೆ. ಗಾಂಧೀಜಿ ಬದುಕಿದ್ದ ಕಾಲದಲ್ಲಿ ಜಗತ್ತು ಇಷ್ಟೊಂದು ಉಪಭೋಗ ವಾದಿಯಾಗಿರಲಿಲ್ಲ, ಯಂತ್ರಗಳ ಜಾಲದಲ್ಲಿ ಬಂದಿಯಾಗಿ ರಲಿಲ್ಲ. ಬದುಕು ವೇಗದ ಆಕರ್ಷಣೆಗೆ ಒಳಗಾಗಿರಲಿಲ್ಲ. ಪ್ರಾಕೃತಿಕ ಸಂಪನ್ಮೂಲಗಳನ್ನು ಈಗಿನಂತೆ ಮನಬಂದಂತೆ ಸೂರೆಯಾಡಿ ನಿಸರ್ಗದ ಲಯವನ್ನು ಭಂಗಗೊಳಿಸಿರಲಿಲ್ಲ. ವನ್ಯಜೀವಿಗಳು ನೆಲೆತಪ್ಪಿ ಮನುಷ್ಯನ ವಾಸಸ್ಥಳಗಳಿಗೆ ಆಗ ದಾಳಿ ಮಾಡುತ್ತಿರಲಿಲ್ಲ. ನಿಸರ್ಗದ ಜೊತೆ ಆಧ್ಯಾತ್ಮದಿಂದ ಬಾಳುತಿದ್ದ ರೈತ ಸಮುದಾಯವನ್ನು ಸಂದರ್ಭಕ್ಕೆ ತಕ್ಕಂತೆ ಒಕ್ಕಲೆಬ್ಬಿಸಿರಲಿಲ್ಲ, ಯಂತ್ರಗಳ ಜೊತೆ ಮನುಷ್ಯನ ಸಂಬಂಧಗಳು ವ್ಯವಹಾರದ ಮಟ್ಟಕ್ಕೆ ಈಗಿನಂತೆ ಆಗ ಇಳಿದಿರಲಿಲ್ಲ, ಕಾಡು ಬರಿದಾಗಿರಲಿಲ್ಲ ನದಿಗಳು ಕೊಳಕಾಗಿರಲಿಲ್ಲ ಭೂಮಿಗೆ ವಿಷವನ್ನು ಸುರಿದಿರಲಿಲ್ಲ.

20ನೇಯ ಶತಮಾನದ 70ರ ದಶಕದಿಂದ ಪರಿಸರ ಕಾಳಜಿ ಗಟ್ಟಿಯಾಗುತ್ತಾ ಕ್ರಮೇಣ ಜಗತ್ತಿನ ಚಿಂತನೆಯಾಗಿ ಹರಡಿತ್ತು. ಪರಿಸರದ ಬಿಕ್ಕಟ್ಟುಗಳಿಗೆ ಗಾಂಧೀಜಿಯ ಪರಿಹಾರ ಅಡಗಿರುವುದು ಬಹು ಬೇಗನೆ ಚಿಂತಕರಿಗೆ ಅರಿವಾಯಿತು. ಗಾಂಧೀಜಿಯವರ ಚಿಂತನೆ, ಬದುಕು ಮತ್ತು ವರ್ತನೆಗಳನ್ನು ಪರಿಸರಾತ್ಮಕ ದೃಷ್ಟಿಕೋನದಿಂದ ಅಭ್ಯಾಸಿಸುವ ಹೊಸ ವಿಧಾನವೊಂದು ಆರಂಭವಾಯಿತು.

ಪರಿಸರ ಮಾಲಿನ್ಯ ಹಾಗೂ ಪರಿಸರ ನಾಶದ ಪ್ರಮಾಣ ಪ್ರತೀ ವರ್ಷ ಹೆಚ್ಚುತ್ತಲೆ ಇದೆ. ಭೂಮಿ ರಿಪೇರಿ ಮಾಡಲಾಗದ ಹಂತದತ್ತ ಸಾಗಿದೆ. ಉಪಭೋಗವಾದ ಹಾಗೂ ನವ ಆರ್ಥಿಕತೆಯಿಂದಾಗಿ ಹೆಚ್ಚಿದ ಔದ್ಯಮಿಕ ಚಟುವಟಿಕೆ ಅಗತ್ಯಕ್ಕಿಂತಲೂ ಹೆಚ್ಚಿನ ಉತ್ಪಾದನೆ ಮಾಡುತ್ತಿದೆ. ಅತಿಯಾದ ರಾಸಾಯನಿಕಗಳ ಬಳಕೆ ದುಡಿಮೆಯನ್ನು ಬೆನ್ನಟ್ಟಿ ಕಳೆದುಕೊಂಡ ವೈಯುಕ್ತಿಕ ನೆಮ್ಮದಿ–ಹೀಗೆ ಜಗತ್ತು ಅತೀ ಉತ್ಪಾದನೆಯ ಹುಚ್ಚಿನಲ್ಲಿ ಭೂಮಿಯನ್ನು ನಾಶಗೊಳಿಸುವ ದಿಕ್ಕಿನತ್ತ ಮುನ್ನಡೆದಿದೆ. ಜಗತ್ತಿಗೆ ಅಂಟಿಕೊಂಡ ಉನ್ಮಾದವನ್ನು ಶಮನಗೊಳಿಸಿ ಪರಿಸರವನ್ನು ರಕ್ಷಿಸಲು ಜಗತ್ತಿನಾದ್ಯಂತ ಇಂದು ಅನೇಕ ಸಂಘಟನೆಗಳು ಅರ್ಪಿಸಿಕೊಂಡಿವೆ. ಆದರೆ 'ಪರಿಸರ ನಾಶ' ವಿದ್ಯಮಾನದ ಬಗೆಗಿನ ಚಿಂತನೆಯು ನಮ್ಮ ದೇಶದಲ್ಲಿ ಇತ್ತೀಚೆಗೆ ಆರಂಭವಾದದ್ದಲ್ಲ ಸುಮಾರು ನೂರು ವರ್ಷಗಳಿಗೂ ಹಿಂದೆಯೇ ಈ ಬಗೆಗಿನ ಚಿಂತನೆ ನಮ್ಮ ದೇಶದಲ್ಲಿ ಆರಂಭವಾಯಿತು ಹಾಗೆ ನೋಡಿದರೆ ಸಹಬಾಳ್ವೆ ನೆಮ್ಮದಿ ಮತ್ತು ಸಮಸ್ತ ಜೀವರಾಶಿ ಹಾಗೂ ಭೂಮಂಡಲದ ಸಂಸ್ಕರಣೆಯ ಮಹತ್ವದ ಬಗ್ಗೆ ವೇದ ಉಪನಿಷತ್ತುಗಳಲ್ಲೇ ಉಲ್ಲೇಖಗಳು ದೊರೆಯುತ್ತವೆ ಆದರೆ ಒಂದು ಚಿಂತನೆಯಾಗಿ, ಆಚರಣೆಯಾಗಿ ಮತ್ತು ಚಳುವಳಿಯಾಗಿ ಅಧಿಕೃತವಾಗಿ ರೂಪುಗೊಂಡಿದ್ದು 20ನೆಯ ಶತಮಾನದ ಆರಂಭದಲ್ಲಿ .

1910 ರಲ್ಲಿ ಗಾಂಧೀಜಿಯವರು ಲಂಡನ್ ವಾರ್ಗವಾಗಿ ಆಫ್ರಿಕಾಗೆ ಪ್ರಯಾಣಿಸುತ್ತಿದ್ದ ಅವಧಿಯಲ್ಲಿ "ಹಿಂದು ಸ್ವರಾಜ್" ಎಂಬ ಪುಸ್ತಿಕೆಯನ್ನು ಗುಜರಾತಿ ಭಾಷೆಯಲ್ಲಿ ಬರೆದರು ಅದು ಬ್ರಿಟಿಷರಿಂದ ಭಾರತಕ್ಕೆ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳುವ ಅಗತ್ಯವನ್ನು ಮಾತ್ರ ಚಿಂತನೆಗೆ ಒಡ್ಡಿರಲಿಲ್ಲ. ಜಗತ್ತು ತನ್ನಲ್ಲಿನ ಸಂಪನ್ಮೂಲಗಳನ್ನು ಹಿಂಸೆ ಮತ್ತು ಆಕ್ರಮಣವಿಲ್ಲದೆ ಸುಸ್ಥಿರವಾಗಿ ಬಳಸುವ ಶಾಂತಿಯ ಮಾರ್ಗಗಳನ್ನು ಹುಡುಕುವ ಚಿಂತನೆಯಾಗಿತ್ತು. ಆ ಕೃತಿಯಲ್ಲಿ ಗಾಂಧೀಜಿಯವರು ಬೃಹತ್ ಯಂತ್ರಗಳ ಬಗ್ಗೆ ತಮಗಿದ್ದ ಆತಂಕ ಮತ್ತು ಅವು ಹೊತ್ತು ತರುವ ಹಿಂಸೆ ಅಸಮಾನತೆಯ ಜೊತೆಗೆ ಅಸ್ಥಿರಗೊಳ್ಳುವ ನಾಗರಿಕ ಬದುಕಿನ ಬಗೆಯು ಚಿಂತನೆ ನಡೆಸಿದ್ದಾರೆ. ಸತ್ಯ ಮತ್ತು ಅಹಿಂಸೆ ಸರಳ ಜೀವನ ಶೈಲಿ ಮತ್ತು ಸರಳ ಅಭಿವೃದ್ಧಿಯ ಆಧಾರದ ಮೇಲೆ ಸತ್ಯಾಗ್ರಹವನ್ನು ರೂಪಿಸಬೇಕೆಂಬ ಅವರ ಚಿಂತನೆಯು ನಿಸರ್ಗ ಮತ್ತು ಸಹಜೀವಿಗಳಿಗೆ ಹಾನಿ ಮಾಡದೆಯೆ ಸುಸ್ಥಿರ ಅಭಿವೃದ್ಧಿಯನ್ನು ಸಾಧಿಸುವ ಬಗೆಯನ್ನು ಅದು ವಿಶದ ಪಡಿಸುತ್ತದೆ. "ಪ್ರಕೃತಿ ಎಲ್ಲರ ಅಗತ್ಯಗಳನ್ನು ಪೂರೈಸಬಲ್ಲದೇ ಹೊರತು ಯಾವೊಬ್ಬನ ದುರಾಸೆಗಳನ್ನಲ್ಲ' ಎಂದೂ ಅವರು 100 ವರ್ಷಗಳ ಹಿಂದೆ ಹೇಳಿದ ಮಾತುಗಳು ಇಂದಿನ ಆಧುನಿಕ ಪರಿಸರದ ಚಿಂತನೆಯ ನೈತಿಕ ಪರಿಸರದ ದ್ರವ್ಯವಾಗಿದೆ.

ನಿಸರ್ಗದ ದುರಂತ ಆರಂಭವಾಗಿದ್ದೇ ಕೈಗಾರಿಕಾ ಕ್ರಾಂತಿಯ ನಂತರ. ವಿಜ್ಞಾನ ಮತ್ತು ತಂತ್ರಜ್ಞಾನ ಬೆಳೆದಂತೆಲ್ಲ ಆರ್ಥಿಕ ಚಟುವಟಿಕೆಗಳು ಹಿಗ್ಗತೊಡಗಿದವು. ನೈಸರ್ಗಿಕ ಸಂಪನ್ಮೂಲ ಕಚ್ಚಾವಸ್ತುಗಳಾಗಿ ಸೂರೆಯಾಯಿತು. ವಿಜ್ಞಾನದ ನೀತಿ ನಿರ್ಲಿಪ್ತ ನಡೆಯಿಂದ ಜಗತ್ತು ಉತ್ಪಾದನೆಯ ಕಾರ್ಖಾನೆಯಾಯಿತು. ನಾವೇ ಸೃಷ್ಟಿಸಿದ ಯಂತ್ರ ರಾಕ್ಷಸನಿಂದ ಪ್ರಕೃತಿ ಬಳಲಿತು. ಆದರೆ ಗಾಂಧೀಜಿಯವರ ಸರಳ ಜೀವನ ಶೈಲಿ, ಸತ್ಯ ಅಹಿಂಸೆ ಮತ್ತು ಸಹಬಾಳ್ವೆಯ ತತ್ವಗಳು ಈ ಯಂತ್ರ ನಾಗರೀಕತೆಗೆ ಒಡ್ಡಿದ ಸವಾಲುಗಳಾಗಿದ್ದವು. ಗಾಂಧಿ ಇಡೀ ಭೂಮಿಯೇ ಒಂದು ಜೀವಿ ಎಂದು ನಂಬಿದ್ದರು. ಅವರು ತಮ್ಮ ಬದುಕಿನುದ್ದಕ್ಕೂ, ಸಮೂಹದ ಬದುಕು ಗ್ರಾಮ ಸ್ವರಾಜ್ಯ, ಅಸ್ಪೃಶ್ಯತಾ ನಿರ್ಮೂಲನೆ ಮತ್ತು ಸ್ತ್ರೀ ಸಮಾನತೆ ಬಗ್ಗೆ ನಡೆಸಿದ ಚಿಂತನೆಗಳನ್ನು ಈಗಿನ ಚಿಂತಕರು ವಿಶ್ಲೇಷಿಸುತ್ತಿದ್ದಾರೆ. ಅವರ ಪ್ರಕಾರ ಗಾಂಧೀಜಿಯವರು ಅಭಿವ್ಯಕ್ತಪಡಿಸಿದ ಚಿಂತನೆಗಳನ್ನು ಎರಡು ನಿಯಮಗಳಲ್ಲಿ ನಿರೂಪಿಸಬಹುದು. ಒಂದು ಕಾಸ್ಮಿಕ್ ನಿಯಮ, ಮತ್ತೊಂದು ಜೀವಿಗಳ ನಿಯಮ, ಕಾಸ್ಮಿಕ್ ಅಥವಾ ಬ್ರಹ್ಮಾಂಡ ನಿಯಮವೆಂದರೆ, ಅವರ ಮಾತಿನಲ್ಲಿ ಹೇಳುವುದಾದರೆ : ಇಡೀ ವಿಶ್ವವೇ ಒಂದು ಕಾಸ್ಮಿಕ್ ಚೈತನ್ಯದಿಂದ ರಚನೆಗೊಂಡು ನಡೆಯುತ್ತಿದೆ. ಹಾಗಾಗಿ ಮನುಷ್ಯರು ಸೇರಿದಂತೆ ಎಲ್ಲಾ ಜೀವಿಗಳಿಗೂ ಸೃಷ್ಟಿಯಾಗಿರುವುದು ಪರಸ್ಪರ ಸಹಬಾಳ್ವೆಯ ನಿಯಮದಿಂದ ಮುಂದುವರೆಯುತ್ತವೆ. ಹಾಗಾಗಿ ಗಾಂಧೀಜಿಯವರ ಪ್ರಕಾರ ನವ ಸಮಾಜವು ನಿಸರ್ಗವನ್ನಾಗಲೀ, ಯಾವುದೇ ಜೀವಿಯನ್ನಾಗಲೀ ಅನಗತ್ಯವಾಗಿ ಶೋಷಿಸಬಾರದು. ಇದು ಮನುಕುಲದ ಉಳಿವಿಗೆ ನಾಗರಿಕತೆ ತೋರಬೇಕಾದ ಸಂವೇದನೆ ಮತ್ತು ಹೊಣೆಗಾರಿಕೆ "ಹಾಗಾಗಿ ಗಾಂಧೀಜಿ ಭಾರತದ ಅಷ್ಟೇ ಏಕೆ ಜಗತ್ತಿನ ಪರಿಸರವಾದಿಯಾಗಿ ಹೊಮ್ಮಿದ್ದಾರೆ.

ಗಾಂಧೀಜಿಯವರು ತಮ್ಮ ಹಿಂದ್ ಸ್ವರಾಜ್ಯ ಪುಸ್ತಕದಲ್ಲಿ ಆಧುನಿಕ ಕೈಗಾರಿಕ ನಾಗರೀಕತೆಯು ಮನುಕುಲದ ಮೇಲೆ ಬೀರುವ ಘೋರ ಪರಿಣಾಮಗಳನ್ನು ಕುರಿತು ಚಿಂತಿಸುತ್ತಿದ್ದರು. ಅದು ಒಟ್ಟು ಜನಸಂಖ್ಯೆಯಲ್ಲಿ ಮುಷ್ಠಿಯಷ್ಟು ಜನರನ್ನು ಶ್ರೀಮಂತರನ್ನಾಗಿಸಿ, ಬಹುತೇಕ ಜನರನ್ನು ದಾರಿದ್ರ್ಯ ಮತ್ತು ಅತಂತ್ರ ಸ್ಥಿತಿಗೆ ದೂಡುತ್ತದೆ ಎಂದು ಪ್ರತಿಪಾದಿಸಿದ್ದರು. ಗಾಂಧೀಜಿಯವರ ಪ್ರಕಾರ ಯಂತ್ರ ವ್ಯಾಮೋಹ ಶ್ರೀಮಂತಿಕೆಯನ್ನು ಗಳಿಸುವ ದಾಹವನ್ನು ಹೆಚ್ಚಿಸುತ್ತದೆ. ಆ ಹಾದಿಯಲ್ಲಿ ಮನುಷ್ಯ ಅತೀಭೋಗ ಸುಖದ ಲೋಲುಪ್ತತೆಯಲ್ಲಿ ಮುಳುಗುತ್ತಾನೆ. ಯಂತ್ರ ಪ್ರಣೀತ ಆಧುನಿಕತೆಯನ್ನು ಅವರು ಸೈತಾನ ಎಂದು ಪರಿಭಾವಿಸಿದ್ದರು. ಆಧುನಿಕ ನಾಗರೀಕತೆಯನ್ನು ಸಂಕೇತಿಸುವ ಯಂತ್ರವನ್ನು 'ಪಾಪ' ಎಂದು ನಂಬಿರಲಿಲ್ಲ. "ನಮ್ಮ ದೇಹವೇ ಒಂದು ಯಂತ್ರ ಹಾಗಾಗಿ ನಾನೇಕೆ ಯಂತ್ರವನ್ನು ದ್ವೇಷಿಸಲಿ, ಚರಕವು ಒಂದು ಯಂತ್ರ, ಚರಕ ನನಗೆ ಸರ್ವಸ್ವವಲ್ಲವೇ! ಮನುಷ್ಯನ ಸುಸ್ಥಿರ ಬದುಕಿಗೆ ಅಗತ್ಯವಾದ ನೇಗಿಲು, ಕೃಷಿ ಉಪಕರಣ ತಯಾರಿಸುವ ಮಗ್ಗ, ನೂಲಿನ ತಕಲಿ, ಕುಂಬಾರನ ಚಕ್ರ, ಬಡಗಿಯ ಸಾಧನವೆಲ್ಲವೂ ಯಂತ್ರವೇ, ಆದರೆ ಅಸಮಾನತೆಯನ್ನು ಸೃಷ್ಟಿಸಿ, ಮನುಷ್ಯ ಸಂಬಂಧಗಳನ್ನು ಛಿದ್ರಗೊಳಿಸುವ ಯಂತ್ರ ನಾಗರೀಕತೆ ಬಗ್ಗೆ ವಿರೋಧವಿದೆ" ಎಂದು ಸ್ಪಷ್ಟಪಡಿಸಿದ್ದರು.

ಆಧುನಿಕ ನಾಗರೀಕತೆಯು ನಿಸರ್ಗದ ಮೇಲೆ ಆಕ್ರಮಣ ಮಾಡುತ್ತದೆ. ಹಿಂಸೆಯನ್ನು ಬಿತ್ತುತ್ತದೆ. ನಿಸರ್ಗದೊಡನೆ ಇರುವ ಮನುಷ್ಯನ ಅವಿನಾಭಾವ ಏಕತೆಯನ್ನು ಮುರಿಯುತ್ತದೆ. ನಿಸರ್ಗದೊಡನೆ ಸಹಬಾಳ್ವೆ ನಡೆಸಿದ ಸಮುದಾಯಗಳನ್ನು ಅತಂತ್ರಗೊಳಿಸುತ್ತದೆ. ಈಗಿನ ಪಾಶ್ಚಾತ್ಯ ಪರಿಸರವಾದಿಗಳು "ನಿಸರ್ಗದೆಡೆಗೆ ಹಿಂದಿರುಗಿ" ಎಂದು ಪ್ರಚಾರ ಮಾಡುತ್ತಿದ್ದರೆ. ಅಂದು ಗಾಂಧೀಜಿಯವರು "ಹಳ್ಳಿಗಳಿಗೆ ಹಿಂದಿರುಗಿ" ಎಂದು ಕರೆ ನೀಡಿದ್ದರು. ನಿಸರ್ಗ ಶೋಷಣೆಯ ವಿರುದ್ಧ ಭುಗಿಲೆದ್ದ 'ಚಿಪ್ಕೋ ಚಳುವಳಿ ಮತ್ತು ನರ್ಮದಾ ಉಳಿಸಿ ಹೋರಾಟಗಳು ಗಾಂಧೀಜಿಯ ಚಿಂತನೆಯ ಮೂಸೆಯಲ್ಲಿ ಅರಳಿದ ಹೋರಾಟಗಳೆಂದೇ ಗುರುತಿಸಲಾಗಿದೆ. ಪರಿಸರವಾದಿಗಳಾದ ಚಂಡಿ ಪ್ರಸಾದ್ ಭಟ್, ಬಾಬಾ ಅಮ್ಟೆ, ಸುಂದರ್ ಲಾಲ್ ಬಹುಗುಣ, ಮೇಧಾ ಪಾಟ್ಕರ್, ಮೊದಲಾದವರು ಗಾಂಧೀಜಿಯವರ ಚಿಂತನೆಗಳಿಂದ, ಸ್ಫೂರ್ತಿಗೊಂಡು ಹೋರಾಟ ನಡೆಸಿದ್ದವರಾದ್ದರಿಂದ ಗಾಂಧೀಜಿಯ ತತ್ವಗಳು ಬೀಜರೂಪದಲ್ಲಿ ನೂರು ವರ್ಷಗಳ ಹಿಂದೆಯೇ ನೆಲೆಯಾಗಿದ್ದವು.

ಪರಿಸರ ಆಂದೋಲನವು ವ್ಯಾಪಕ ಪ್ರಮಾಣದಲ್ಲಿ ಗರಿಗಟ್ಟಿಕೊಳ್ಳುವ ಹಲವಾರು ದಶಕಗಳ ಹಿಂದೆಯೇ ಗಾಂಧೀಜಿಯವರು ಅತಿಭೋಗ ಮನುಷ್ಯ ಮತ್ತು ನಿಸರ್ಗದ ಮೇಲಿನ ಹಿಂಸೆ ಮುಂತಾದ ಪರಿಸರಾತ್ಮಕ ವಿಷಯಗಳನ್ನು ಕುರಿತು ಚಿಂತಿಸಿದರು. ಪರಿಸರಕ್ಕಾಗುತ್ತಿರುವ ಅನ್ಯಾಯಗಳ ವಿರುದ್ಧ ಈಗ ಜಗತ್ತಿನಾದ್ಯಂತ ಅನೇಕ ಹೋರಾಟಗಳು ನಡೆಯುತ್ತಿವೆ. ಕೆಲವು ಹಿಂಸೆಯ ಸ್ವರೂಪವನ್ನು ಪಡೆದುಕೊಂಡಿವೆ. ಆದರೆ ಭಾರತದಲ್ಲಿ ಮಾತ್ರ ಗಾಂಧಿಯವರ ಶಾಂತಿ ಅಹಿಂಸೆಯ ಮಾರ್ಗದಲ್ಲಿ ನಡೆಯುತ್ತಿವೆ.

ಆದರೆ ಆಧುನಿಕ ಪರಿಸರವಾದಿಗಳಿಗೂ ಗಾಂಧೀಜಿಗೂ ಒಂದು ಮುಖ್ಯ ವ್ಯತ್ಯಾಸವಿದೆ. ಗಾಂಧೀಜಿಯವರು ಪರಿಸರ ನಾಶಕ್ಕೆ ಹೇರಳವಾದ ಸಾಕ್ಷ್ಯವನ್ನು ಹುಡುಕಿ ವಿಶ್ಲೇಷಣೆಯ ಮೂಲಕ ಪ್ರತಿಪಾದಿಸುವುದಿಲ್ಲ. ಪರಿಸರ ಮಾಲಿನ್ಯದ ವಿರುದ್ಧ ಕ್ರಮಗಳನ್ನು ಸೂಚಿಸಲಿಲ್ಲ. ಪರಿಸರ ಸಂರಕ್ಷಣೆಯ ಮಾರ್ಗಗಳನ್ನು ಹೇಳಿಕೊಡಲಿಲ್ಲ. ಅವರಿಗೆ ರೋಗವನ್ನು ಗುಣಪಡಿಸುವ ವಿಧಾನಕ್ಕಿಂತ ಅದನ್ನು ತಡೆಯುವುದರಲ್ಲಿ ನಂಬಿಕೆ ಇತ್ತು. ತಮ್ಮ ಜೀವನದುದ್ದಕ್ಕೂ ಅವರು ಸರಳ ಜೀವನ ಶೈಲಿ, ಆರೋಗ್ಯ, ನೈರ್ಮಲ್ಯದ ಮಹತ್ವವನ್ನೂ ಆಚರಿಸುತ್ತಾ ಬೋಧಿಸುತ್ತಾ ಸಾಗಿದರು. ಹೀಗೆ ಪರಿಸರ ಚಳುವಳಿ ಹಾಗೂ ಬಡತನ ನಿರ್ಮೂಲನೆಯ ಚಳುವಳಿಗಳನ್ನು ಒಂದುಗೂಡಿಸಿ ಒಂದು ಜನಪರ ಚಳುವಳಿಯಾಗಿ ಅದನ್ನು ರೂಪಿಸಿದ ಹಿರಿಮೆ ಗಾಂಧೀಜಿಯವರದ್ದು.

ಜಗತ್ತಿನ ಯಾವುದೇ ರಾಜಕೀಯ ನಾಯಕ ಬದುಕನ್ನು ಹಸನಗೊಳಿಸುವ ಇಂಥಹ ವ್ಯಸನಗಳ ಬಗ್ಗೆ ಗಾಂಧೀಜಿಯವರಷ್ಟು ಸಮಯವನ್ನು ವ್ಯಯ ಮಾಡಿಲ್ಲ ಮತ್ತು ಅಷ್ಟು ಅರ್ಪಣಾ ಮನೋಭಾವದಿಂದ ದುಡಿಯಲಿಲ್ಲ. ಪರಿಸರ ಸಂರಕ್ಷಣೆಯ ಸಂದೇಶವನ್ನು ತಮ್ಮ ಬದುಕಿನ ಮೂಲಕವೇ ಜನರಿಗೆ ತಲುಪಿಸಿ ಅವರನ್ನು ಮುನ್ನಡೆಸಿದರು. ಹಾಗಾಗಿ ಅವರು ಜಗತ್ತಿನ ವಿಭಿನ್ನ ಪರಿಸರವಾದಿ. ❑

ಡಾ. ಕೆ. ಪುಟ್ಟಸ್ವಾಮಿ
ಕೃಪೆ : ಕರ್ನಾಟಕ ವಾರ್ತೆ

ರಾಜಧಾನಿಯಲ್ಲಿ ಕನ್ನಡದ ತೇರೆಳೆದವರು

ಕನ್ನಡ ಸಂಸ್ಕೃತಿಯ ಚಿಂತನೆಯ ಒಂದು ವಿಶಿಷ್ಟ ಲಕ್ಷಣವೆಂದರೆ, ಅದು ತನ್ನ ಸಾಂಸ್ಕೃತಿಕ ಅಸ್ಮಿತೆಯನ್ನು ಭಾರತೀಯತೆ ಮತ್ತು ಕರ್ನಾಟಕತ್ವ ಎಂಬ ಎರಡು ಪರಿಕಲ್ಪನೆಗಳೊಂದಿಗೆ ನಿರಂತರವಾಗಿ ಅನುಸಂಧಾನ ಮಾಡಿಕೊಂಡು ಬಂದಿರುವುದು. ಒಂದು ಕಡೆ ರಾಷ್ಟ್ರದ ವಿಶಾಲ ಪರಿಕಲ್ಪನೆಯೊಳಗೆ ತನ್ನ ಸಂಸ್ಕೃತಿಯನ್ನು ಗುರುತಿಸಿಕೊಂಡರೆ, ಮತ್ತೊಂದೆಡೆ ತನ್ನ ಭಾಷೆ, ನೆಲ, ನುಡಿ ಮತ್ತು ಪರಂಪರೆಯ ಮೂಲಕ ಕರ್ನಾಟಕತ್ವವನ್ನು ಅರಿತುಕೊಳ್ಳುವ ಪ್ರಯತ್ನವನ್ನು ಮಾಡಿದೆ.

ನಮ್ಮ ಕವಿಗಳು, ಚಿಂತಕರು ಮತ್ತು ಸಾಹಿತಿಗಳು ಭಾರತ ಹಾಗೂ ಕರ್ನಾಟಕವನ್ನು ಬಹುಪಾಲು ತಾಯಿ–ಮಗಳ ಸಂಬಂಧದ ರೂಪಕದಲ್ಲಿ ಚಿತ್ರಿಸುತ್ತಾ ಬಂದಿದ್ದಾರೆ. ಬಿ.ಎಂ. ಶ್ರೀಕಂಠಯ್ಯನವರು 1914ರಲ್ಲಿ ರಚಿಸಿದ 'ಭರತಮಾತೆಯೆ! ಭರತಮಾತೆಯೆ! ಎಂದು ನೀ ತಲೆಯೆತ್ತುವೆ?' ಎಂಬ ಕವನದಲ್ಲಿ ಕನ್ನಡದ ತಾಯಿಯನ್ನು ಭಾರತಾಂಬೆಯ ಹಿರಿಯ ಮಗಳಾಗಿ ಕಾಣುವ ಸಾಂಸ್ಕೃತಿಕ ದೃಷ್ಟಿಕೋನ ವ್ಯಕ್ತವಾಗುತ್ತದೆ. ಹಾಗೆಯೇ ರಾಷ್ಟ್ರಕವಿ ಕುವೆಂಪು ಅವರು ರಚಿಸಿದ 'ಜಯ ಭಾರತ ಜನನಿಯ ತನುಜಾತೆ' ಗೀತೆಯಲ್ಲಿ ಭಾರತಮಾತೆ ಮತ್ತು ಕರ್ನಾಟಕಮಾತೆಯ ರೂಪಕಗಳ ಮೂಲಕ ರಾಷ್ಟ್ರೀಯತೆ ಹಾಗೂ ಪ್ರಾದೇಶಿಕ ಅಸ್ಮಿತೆಯ ನಡುವಿನ ಸೌಹಾರ್ದ ಸಂಬಂಧವನ್ನು ಅತ್ಯಂತ ಅರ್ಥಪೂರ್ಣವಾಗಿ ಅಭಿವ್ಯಕ್ತಿಸಿದ್ದಾರೆ.

ಕವಿಗಳು, ಲೇಖಕರು ಮತ್ತು ಚಿಂತಕರು ತಮ್ಮ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ರೂಪಿಸಿದ ಈ ಭಾವನಾತ್ಮಕ ಅಸ್ಮಿತೆಗಳು ಕನ್ನಡಿಗರ ಸಾಮಾಜಿಕ ಬದುಕಿನ ಮೇಲೂ ಗಾಢವಾದ ಪ್ರಭಾವ ಬೀರಿವೆ. ದೇಶದ ಸ್ವಾತಂತ್ರ್ಯ ಹೋರಾಟದ ಜೊತೆಯಲ್ಲೇ ಕನ್ನಡಿಗರು ಕನ್ನಡನಾಡಿನ ಏಕೀಕರಣದ ಹೋರಾಟಕ್ಕೂ ಟೊಂಕ ಕಟ್ಟಿದರು. ಭಾರತದ ಸ್ವಾತಂತ್ರ್ಯ ಮತ್ತು ಕರ್ನಾಟಕದ ಏಕೀಕರಣ–ಇವೆರಡೂ ಕನ್ನಡಿಗರ ರಾಷ್ಟ್ರೀಯ ಹಾಗೂ ಪ್ರಾದೇಶಿಕ ಚಿಂತನೆಯನ್ನು ರೂಪಿಸಿದ ಮಹತ್ವದ ಅಧ್ಯಾಯಗಳಾದವು.

ಈ ಸಾಂಸ್ಕೃತಿಕ ಪ್ರಜ್ಞೆಯಿಂದ ಪ್ರೇರಿತರಾದ, ಭೌಗೋಳಿಕವಾಗಿ ಕನ್ನಡನಾಡಿನ ಹೊರಗಿದ್ದರೂ ಕನ್ನಡವನ್ನು ಉಸಿರಾಗಿಸಿಕೊಂಡಿದ್ದ ನೂರಾರು ಹೊರನಾಡ ಕನ್ನಡಿಗರು ತಮ್ಮ ಬದುಕಿನುದ್ದಕ್ಕೂ ದೇಶದ ಸ್ವಾತಂತ್ರ್ಯ, ಕನ್ನಡನಾಡಿನ ಏಕೀಕರಣ ಹಾಗೂ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಉಳಿವಿಗಾಗಿ ಶ್ರಮಿಸಿದರು. ವಿದ್ಯಾರ್ಥಿ ಜೀವನದಲ್ಲಿಯೇ ಇಂತಹ ಸಾಂಸ್ಕೃತಿಕ ಪ್ರಭಾವಕ್ಕೆ ಒಳಗಾದ ಅನೇಕರು, ಉದ್ಯೋಗ ಮತ್ತು ಬದುಕಿನ ಅನಿವಾರ್ಯತೆಗಳಿಂದ



ದೂರದ ಊರುಗಳಿಗೆ ತೆರಳಿದರೂ ಕನ್ನಡದೊಂದಿಗಿನ ತಮ್ಮ ಬಾಂಧವ್ಯವನ್ನು ಕಡಿದುಕೊಳ್ಳಲಿಲ್ಲ.

ಹೊರನಾಡ ಕನ್ನಡಿಗರ ಕನ್ನಡ ಕಾಯಕದ ಆರಂಭದ ದಿನಗಳಲ್ಲಿ, ಹತ್ತು ಕನ್ನಡಿಗರು ಒಂದೆಡೆ ಸೇರಿದರೆ ಸಾಕು, ಅಲ್ಲಿ ಕನ್ನಡ ಸಂಘವೊಂದು ಹುಟ್ಟಿಕೊಳ್ಳುತ್ತಿತ್ತು. ಹಬ್ಬ–ಹರಿದಿನಗಳ ಆಚರಣೆ, ವಿಚಾರ ವಿನಿಮಯ, ಸಾಹಿತ್ಯ ಚಟುವಟಿಕೆಗಳು, ನಾಟಕ, ಸಂಗೀತ ಹಾಗೂ ಮಕ್ಕಳಿಗೆ ಕನ್ನಡ ಕಲಿಸುವ ಪ್ರಯತ್ನ–ಇವೆಲ್ಲವೂ ಅಂತಹ ಸಂಘಗಳ ಜೀವನಾಡಿಯಾಗಿದ್ದವು. ಇಂದು ಕೂಡ ಅನೇಕ ಸಂಘಗಳು ಯಾವುದೇ ಆಡಂಬರವಿಲ್ಲದೆ, ಸದ್ದುಗದ್ದಲವಿಲ್ಲದೆ ಕನ್ನಡ ನುಡಿ ಮತ್ತು ಸಂಸ್ಕೃತಿಯ ದೀಪವನ್ನು ಬೆಳಗಿಸುತ್ತಿವೆ. ಹೊರನಾಡ ಕನ್ನಡಿಗರಲ್ಲಿ ಕನ್ನಡತನವನ್ನು ಜಾಗೃತವಾಗಿಡುವ, ಮುಂದಿನ ಪೀಳಿಗೆಗೆ ಅದನ್ನು ತಲುಪಿಸುವ ಮಹತ್ತರ ಹೊಣೆಗಾರಿಕೆಯನ್ನು ಈ ಸಂಸ್ಥೆಗಳು ನಿರ್ವಹಿಸುತ್ತಿವೆ.

ದೆಹಲಿ ಕರ್ನಾಟಕ ಸಂಘ : ರಾಜಧಾನಿಯಲ್ಲಿ ಕನ್ನಡದ ಮೊದಲ ಸಂಘಟಿತ ಹೆಜ್ಜೆ

ರಾಷ್ಟ್ರ ರಾಜಧಾನಿಯಲ್ಲಿ ಕನ್ನಡಿಗರ ಸಂಘಟಿತ ಸಾಂಸ್ಕೃತಿಕ ಚಟುವಟಿಕೆಗಳಿಗೆ 1948ರಲ್ಲಿ ಸ್ಥಾಪನೆಯಾದ ದೆಹಲಿ ಕರ್ನಾಟಕ ಸಂಘ ಮಹತ್ವದ ಆರಂಭಿಕ ಮೈಲಿಗಲ್ಲಾಯಿತು. ದೇಶಕ್ಕೆ ಸ್ವಾತಂತ್ರ್ಯ ದೊರೆಯುವ ಮೊದಲೇ ರಾಜಧಾನಿಯಲ್ಲಿ ಕನ್ನಡಿಗರನ್ನು ಒಂದೆಡೆ ಸೇರಿಸಿದ ಪ್ರಮುಖ ಹೊರನಾಡ ಕನ್ನಡ ಸಂಸ್ಥೆಯಾಗಿ ಅದು ಹೊರಹೊಮ್ಮಿತು. ಇದರ ಶ್ರೇಯ ಡಾ. ಸರೋಜಿನಿ ಮಹಿಷಿ ಅವರಿಗೆ ಸಲ್ಲಬೇಕು. ಕೇಂದ್ರ ಸಚಿವೆಯಾಗಿದ್ದ ಮಹಿಷಿ ಅವರು ಈಗಿನ ದೆಹಲಿ ಕರ್ನಾಟಕ ಸಂಘ ಹಾಗೂ ಶಿಕ್ಷಣ ಸಂಸ್ಥೆಯ ಎರಡೂ ನಿವೇಶನಗಳನ್ನು ಖರೀದಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಈ ಎರಡೂ ಸಂಸ್ಥೆಗಳನ್ನು ಹುಟ್ಟು ಹಾಕಿದವರಲ್ಲಿ ಡಾ. ಸರೋಜಿನಿ ಮಹಿಷಿ ಪ್ರಾತಃಸ್ಮರಣೀಯರು. ಸ್ವಾತಂತ್ರ್ಯ ಚಳವಳಿ, ಕೇಂದ್ರ ಸರ್ಕಾರದ ವಿವಿಧ ಸೇವೆಗಳು, ಆಡಳಿತ, ಸೇನೆ, ಉದ್ಯೋಗ, ಉದ್ಯಮ ಮತ್ತು ವ್ಯಾಪಾರ ಮೊದಲಾದ ಕಾರಣಗಳಿಂದ ಕರ್ನಾಟಕದ ವಿವಿಧ ಭಾಗಗಳಿಂದ ದೆಹಲಿಗೆ ಆಗಮಿಸಿದ್ದ ಕನ್ನಡಿಗರನ್ನು ಒಂದೇ ಸಾಂಸ್ಕೃತಿಕ ಬಂಧದಲ್ಲಿ ಬೆಸೆಯುವ ಮಹತ್ತರ ಕಾರ್ಯವನ್ನು ಸಂಘ ಕೈಗೊಂಡಿತು.

ಸ್ವಾತಂತ್ರ್ಯಾನಂತರ ಶಿಕ್ಷಣ, ಕೈಗಾರಿಕೆ, ನಗರೀಕರಣ, ಸಾರಿಗೆ ಮತ್ತು ಸಂಪರ್ಕ ವ್ಯವಸ್ಥೆಗಳ ಅಭಿವೃದ್ಧಿ ಹಾಗೂ 1956ರಲ್ಲಿ ಭಾಷಾವಾರು ರಾಜ್ಯಗಳ ಪುನರ್‌ರಚನೆಯ ಮೂಲಕ ಕರ್ನಾಟಕವು ಏಕೀಕೃತ ಆಡಳಿತ ಘಟಕವಾಗಿ ರೂಪುಗೊಂಡ ಪರಿಣಾಮವಾಗಿ ದೆಹಲಿಗೆ ಆಗಮಿಸುವ ಕನ್ನಡಿಗರ ಸಂಖ್ಯೆಯೂ ಹೆಚ್ಚುತ್ತಾ ಹೋಯಿತು. ಹೊಸ ಪರಿಸರದಲ್ಲಿ ಬೆಳೆಯುತ್ತಿದ್ದ ಕನ್ನಡ ಕುಟುಂಬಗಳ ಮಕ್ಕಳಿಗೆ ಕನ್ನಡ ಭಾಷೆಯನ್ನು ಕಲಿಸುವುದು, ಕನ್ನಡ ಸಂಸ್ಕೃತಿ ಮತ್ತು ಪರಂಪರೆಯನ್ನು ಪರಿಚಯಿಸುವುದು ಹಾಗೂ ಮುಂದಿನ ಪೀಳಿಗೆಯಲ್ಲೂ ಕನ್ನಡದ ಬಾಂಧವ್ಯವನ್ನು ಉಳಿಸುವ ಅಗತ್ಯವನ್ನು ದೆಹಲಿಯ ಮೊದಲ ತಲೆಮಾರಿನ ಕನ್ನಡಿಗರು ಬಹಳ ಹಿಂದೆಯೇ ಮನಗಂಡಿದ್ದರು.

ಅದರ ಫಲವಾಗಿ 1959ರ ವೇಳೆಗೆ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ಸ್ಥಾಪನೆಯಾಯಿತು. ಇದು ದೆಹಲಿಯ ಹಿರಿಯ ತಲೆಮಾರಿನ ಕನ್ನಡಿಗರ ದೂರದೃಷ್ಟಿ, ನಾಡು–ನುಡಿಯ ಮೇಲಿನ ಕಾಳಜಿ ಮತ್ತು ಭವಿಷ್ಯದ ಪೀಳಿಗೆಯ ಕುರಿತ ಹೊಣೆಗಾರಿಕೆಗೆ ಸಾಕ್ಷಿಯಾಗಿದೆ. ದೆಹಲಿ ಕರ್ನಾಟಕ ಸಂಘ ಮತ್ತು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಗಳು ಕೇವಲ ಸಂಘ–ಸಂಸ್ಥೆಗಳಲ್ಲ; ಅವು ರಾಜಧಾನಿಯಲ್ಲಿ ಕನ್ನಡದ ಅಸ್ತಿತ್ವವನ್ನು ಉಳಿಸಿ ಬೆಳೆಸಿದ ಹಿರಿಯ ತಲೆಮಾರಿನ ಕನ್ನಡಿಗರ ಸಾಂಸ್ಕೃತಿಕ ಪ್ರಜ್ಞೆಯ ಪ್ರತೀಕಗಳಾಗಿವೆ.

ಕನ್ನಡ ಭಾರತಿ : ದೆಹಲಿಯಲ್ಲಿ ಕನ್ನಡ ರಂಗಭೂಮಿಯ ಐತಿಹಾಸಿಕ ಹೆಜ್ಜೆ

ಈ ಸಾಂಸ್ಕೃತಿಕ ಪರಂಪರೆಯ ಮುಂದುವರಿಕೆಯಾಗಿ ದೆಹಲಿಯಲ್ಲಿ ಹಲವು ಕನ್ನಡ ಸಂಘಟನೆಗಳು ಹುಟ್ಟಿಕೊಂಡವು. ಅವುಗಳಲ್ಲಿ ಅರವತ್ತರ ದಶಕದಲ್ಲಿ ಬಿ.ವಿ. ಕಾರಂತರ ನೇತೃತ್ವದಲ್ಲಿ ಬೆಳೆದುಬಂದ ಐತಿಹಾಸಿಕ ಸಂಸ್ಥೆ 'ಕನ್ನಡ ಭಾರತಿ' ಪ್ರಮುಖವಾದುದು. ಈ ಸಂಸ್ಥೆಯ ಉಗಮ ಮತ್ತು ರಂಗಭೂಮಿ

ಚಟುವಟಿಕೆಗಳ ಹಿಂದೆ ಅನೇಕ ನಿಷ್ಠಾವಂತ ಕನ್ನಡಿಗರು ಹಾಗೂ ರಂಗಕರ್ಮಿಗಳ ಪರಿಶ್ರಮವಿದೆ.

ಕನ್ನಡ ಭಾರತಿಯನ್ನು ಮುನ್ನಡೆಸಿದ ಪ್ರಮುಖರಲ್ಲಿ ಶ್ರೀ ಎಂ.ವಿ. ನಾರಾಯಣ ರಾವ್ ಅವರ ಹೆಸರು ವಿಶೇಷವಾಗಿ ಉಲ್ಲೇಖನೀಯ. ದೆಹಲಿಯ ಕನ್ನಡ ರಂಗಭೂಮಿಯ ಪಿತಾಮಹರಲ್ಲಿ ಒಬ್ಬರೆಂದು ಗೌರವಿಸಲ್ಪಡುವ ಅವರು ಸಂಸ್ಥೆಯ ಚಟುವಟಿಕೆಗಳಿಗೆ ಮಹತ್ವದ ಶಕ್ತಿಯಾಗಿದ್ದರು. ಖ್ಯಾತ ಚಲನಚಿತ್ರ ನಿರ್ದೇಶಕ ಹಾಗೂ ರಂಗಕರ್ಮಿ ಎಂ.ಎಸ್. ಸತ್ಯು, ಶ್ರೀ ಯು. ಪ್ರಭಾಕರ್ ರಾವ್ ಮತ್ತು ಶ್ರೀ ಎಚ್. ಎಸ್. ಕುಲಕರ್ಣಿ ಅವರಂತಹ ಕಲಾವಿದರು ದೆಹಲಿಯ ಕನ್ನಡ ರಂಗಭೂಮಿಯ ಬೆಳವಣಿಗೆಗೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಅವರ ಪ್ರಯತ್ನಗಳು ದೆಹಲಿಯಲ್ಲಿ ಕನ್ನಡ ನಾಟಕಗಳ ಹೊಸ ಪ್ರೇಕ್ಷಕವರ್ಗವನ್ನು ರೂಪಿಸುವುದರ ಜೊತೆಗೆ ಕನ್ನಡ ರಂಗಭೂಮಿಗೆ ವಿಶಿಷ್ಟ ಗುರುತನ್ನೂ ತಂದುಕೊಟ್ಟವು.

ಪ್ರಖ್ಯಾತ ರಂಗಕರ್ಮಿ ಬಿ.ವಿ. ಕಾರಂತರು ದೆಹಲಿಯಲ್ಲಿದ್ದ ಸಂದರ್ಭದಲ್ಲಿ ಕನ್ನಡ ಭಾರತಿಯ ಮೂಲಕ 'ನಹಿ ನಹಿ ರಕ್ಷತಿ', 'ಸಿಕ್ಕು', 'ಎಚ್ಚಮನಾಯಕ' ಮತ್ತು 'ನಾನೇ ಬಿಜ್ಜಳ' ಮೊದಲಾದ ನಾಟಕಗಳನ್ನು ನಿರ್ದೇಶಿಸಿ ದೆಹಲಿಯ ಕನ್ನಡಿಗರನ್ನು ರಂಗಭೂಮಿಯತ್ತ ಸೆಳೆದಿದ್ದರು. ರಂಗಭೂಮಿಯನ್ನು ಕೇವಲ ಮನರಂಜನೆಯ ಮಾಧ್ಯಮವಾಗಿ ನೋಡದೆ, ಭಾಷೆ, ಸಾಹಿತ್ಯ, ಸಂಗೀತ ಮತ್ತು ಸಾಮಾಜಿಕ ಚಿಂತನೆಗಳ ಅಭಿವ್ಯಕ್ತಿಯ ವೇದಿಕೆಯಾಗಿ ರೂಪಿಸುವಲ್ಲಿ ಕಾರಂತರ ಪ್ರಯೋಗಗಳು ಮಹತ್ವದ ಪಾತ್ರ ವಹಿಸಿದವು.

ಆ ಕಾಲದಲ್ಲಿ ಅನೇಕರು ನಟರಾಗಿ, ನಿರ್ದೇಶಕರಾಗಿ ಹಾಗೂ ಸಂಗೀತ, ನೃತ್ಯ ಮತ್ತು ಮೇಳವಾದ್ಯಗಳ ಮೂಲಕ ಕನ್ನಡ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಜೀವ ತುಂಬಿದರು. 1950ರ ದಶಕದಲ್ಲಿಯೇ ಭಾರತ ಸರ್ಕಾರದ ಸೇವೆಗೆ ಸೇರಿ ದೆಹಲಿಯಲ್ಲಿ ನೆಲೆಸಿದ್ದ ಹಿರಿಯ ಕನ್ನಡಿಗ ಎಚ್.ಎಸ್. ಕುಲಕರ್ಣಿ ಮತ್ತು ಅವರ ಧರ್ಮಪತ್ನಿ ಲಲಿತಾ ಕುಲಕರ್ಣಿ ಅವರು, ಹಿರಿಯ ಕನ್ನಡಿಗ ಎಚ್.ಎಸ್. ಪಾಟೀಲ್ ಅವರ ನಿರ್ದೇಶನದ 'ಪುರಂದರ ದಾಸ' ನಾಟಕದಲ್ಲಿ ಅಭಿನಯಿಸಿದ್ದರು ಎಂಬ ಮಾಹಿತಿ ಲಭ್ಯ ದಾಖಲೆಗಳಲ್ಲಿ ಕಂಡುಬರುತ್ತದೆ. ಕನ್ನಡ ಭಾರತಿಯ ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ರಂಗಪ್ರದರ್ಶನಗಳು ಯಶಸ್ವಿಯಾಗುವಲ್ಲಿ ಎಚ್.ಎಸ್. ಕುಲಕರ್ಣಿ ಅವರ ಕೊಡುಗೆಯೂ ಸ್ಮರಣೀಯವಾಗಿದೆ.

ಈ ಹಿರಿಯರ ಪರಿಶ್ರಮದಿಂದ ಕನ್ನಡ ಭಾರತಿ ಕೇವಲ ಒಂದು ಸಾಂಸ್ಕೃತಿಕ ಸಂಘಟನೆಯಾಗಿ ಉಳಿಯದೆ, ದೆಹಲಿಯಲ್ಲಿ ಕನ್ನಡ ರಂಗಭೂಮಿಯ ಅಭಿರುಚಿಯನ್ನು ಬೆಳೆಸಿದ, ಕಲಾವಿದರನ್ನು ಬೆಸೆದ ಮತ್ತು ಕನ್ನಡದ ಸೃಜನಶೀಲ ಅಭಿವ್ಯಕ್ತಿಗೆ ವೇದಿಕೆಯಾದ ಸಂಸ್ಥೆಯಾಗಿ ಗುರುತಿಸಿಕೊಂಡಿತು.

ಜನಕಪುರಿ ಕನ್ನಡ ಕೂಟ : ನಾಲ್ಕು ತಲೆಮಾರುಗಳನ್ನು ಬೆಸೆದ ಸಾಂಸ್ಕೃತಿಕ ವೃಕ್ಷ

1970ರ ದಶಕದಲ್ಲಿ ನಾಡು–ನುಡಿಯ ಸಂರಕ್ಷಣೆ ಮತ್ತು ಪ್ರವರ್ಧನೆಯ ಉದ್ದೇಶದಿಂದ ದೆಹಲಿಯಲ್ಲಿ ಮತ್ತಷ್ಟು ಕನ್ನಡ ಸಂಘಟನೆಗಳು ರೂಪುಗೊಂಡವು. ಅವುಗಳಲ್ಲಿ 1976ರಲ್ಲಿ ಆರಂಭವಾದ ಜನಕಪುರಿ ಕನ್ನಡ ಕೂಟ, ಅದೇ ವರ್ಷ ಭಾರತೀಯ ತಂತ್ರಜ್ಞಾನ ಸಂಸ್ಥೆ–ದೆಹಲಿ (ಐಐಟಿ)ಯಲ್ಲಿ ರೂಪುಗೊಂಡ 'ಅರಾವಳಿ' ಕನ್ನಡ ಸಂಘ ಹಾಗೂ 1977ರಲ್ಲಿ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿ ಆರಂಭವಾದ 'ಶರಾವತಿ' ಕನ್ನಡ ಸಂಘ ಪ್ರಮುಖವಾದವು.

1970ರ ದಶಕದಲ್ಲಿ ದೆಹಲಿ ನಗರಾಭಿವೃದ್ಧಿಯ ಭಾಗವಾಗಿ ಬೆಳೆಯುತ್ತಿದ್ದ ಜನಕಪುರಿಯಲ್ಲಿ 1976ರ ನವೆಂಬರ್ 26ರಂದು ಆರಂಭವಾದ ಪುಟ್ಟ ಕನ್ನಡ ಕೂಟ ಇಂದು ನಾಲ್ಕು ತಲೆಮಾರುಗಳನ್ನು ಬೆಸೆಯುವ ಸಾಂಸ್ಕೃತಿಕ ವೃಕ್ಷವಾಗಿ ಬೆಳೆದಿದೆ. ಅದರ ನೆರಳಿನಲ್ಲಿ ಹಲವು ಕುಟುಂಬಗಳು ಬೆಳೆದಿವೆ; ಅನೇಕ ಪ್ರತಿಭೆಗಳು ಅರಳಿವೆ; ಸ್ನೇಹಗಳು ಗಟ್ಟಿಯಾಗಿವೆ; ತಲೆಮಾರುಗಳ ನೆನಪುಗಳು ರೂಪುಗೊಂಡಿವೆ.

ಕೂಟದ ಸದಸ್ಯರು ಹಲವು ನಾಟಕಗಳನ್ನು ನಿರ್ದೇಶಿಸಿ, ಅಭಿನಯಿಸಿ ಹೊರನಾಡ ಕನ್ನಡಿಗರ ಮನದಲ್ಲಿ ನೆಲೆಯೂರಿದ್ದಾರೆ. ಕವಿಗಳು ಮತ್ತು ಲೇಖಕರು ತಮ್ಮ ಸಾಹಿತ್ಯಿಕ ಚಟುವಟಿಕೆಗಳ ಮೂಲಕ ಕನ್ನಡದ ಕಂಪನ್ನು ಹರಡಿದ್ದಾರೆ. ವೈದ್ಯರು, ತಜ್ಞರು, ಉದ್ಯಮಿಗಳು ಹಾಗೂ ವಿವಿಧ ವೃತ್ತಿಪರರು ಸೇರಿದಂತೆ ಸಮಾಜದ ಹಲವು ಕ್ಷೇತ್ರಗಳಲ್ಲಿ ಛಾಪು ಮೂಡಿಸಿದ ಪ್ರತಿಭೆಗಳು ಈ ಸಂಘಟನೆಯೊಂದಿಗೆ ಗುರುತಿಸಿಕೊಂಡಿವೆ. ಹೀಗೆ ಜನಕಪುರಿ ಕನ್ನಡ ಕೂಟವು ಕೇವಲ ಕನ್ನಡಿಗರ ಸಮಾಗಮದ ತಾಣವಾಗಿರದೆ, ಭಾಷೆ, ಕಲೆ, ಸಾಹಿತ್ಯ, ಸ್ನೇಹ ಮತ್ತು ಸಾಮಾಜಿಕ ಬಾಂಧವ್ಯಗಳನ್ನು ಬೆಸೆಯುವ ಸಾಂಸ್ಕೃತಿಕ ನೆಲೆಯಾಗಿ ಬೆಳೆದಿದೆ.

ಹಾರುತಿರಲಿ ಕನ್ನಡದ ಬಾವುಟ

ದೆಹಲಿಯ ಕನ್ನಡ ಸಂಘಟನೆಗಳ ಇತಿಹಾಸವನ್ನು ಗಮನಿಸಿದಾಗ ಒಂದು ಸಂಗತಿ ಸ್ಪಷ್ಟವಾಗುತ್ತದೆ. ಈ ಸಂಸ್ಥೆಗಳನ್ನು ಕಟ್ಟಿದವರು ಕೇವಲ ಕಟ್ಟಡಗಳನ್ನು ನಿರ್ಮಿಸಲಿಲ್ಲ; ಅವರು ಕನ್ನಡಿಗರ ನಡುವೆ ಬಾಂಧವ್ಯವನ್ನು ಕಟ್ಟಿದರು. ಕೇವಲ ಕಾರ್ಯಕ್ರಮಗಳನ್ನು ಆಯೋಜಿಸಲಿಲ್ಲ; ಮುಂದಿನ ಪೀಳಿಗೆಗೆ ಭಾಷೆ ಮತ್ತು ಸಂಸ್ಕೃತಿಯ ಪರಿಚಯ ಮಾಡಿಕೊಟ್ಟರು. ಕೇವಲ ನಾಟಕಗಳನ್ನು ಪ್ರದರ್ಶಿಸಲಿಲ್ಲ; ರಾಜಧಾನಿಯ ಸಾಂಸ್ಕೃತಿಕ ವಲಯದಲ್ಲಿ ಕನ್ನಡದ ಸೃಜನಶೀಲತೆಗೆ ಒಂದು ಸ್ಥಾನವನ್ನು ರೂಪಿಸಿದರು.

ಈ ಸಾಧನೆಗಳ ಹಿಂದೆ ತಮ್ಮ ವೈಯಕ್ತಿಕ ಬದುಕಿನ ಜವಾಬ್ದಾರಿಗಳ ನಡುವೆಯೂ ಸಂಘಟನೆಯ ಕೆಲಸಕ್ಕೆ ಸಮಯ ಮೀಸಲಿಟ್ಟ ಅನೇಕ ಹಿರಿಯರಿದ್ದಾರೆ. ತಮ್ಮ ಮನೆಗಳನ್ನೇ ಸಭೆಗಳಿಗೆ ತೆರೆದವರು, ಮಕ್ಕಳಿಗೆ ಕನ್ನಡ ಕಲಿಸಲು ಮುಂದಾದವರು, ನಾಟಕಗಳ ತಾಲೀಮಿಗೆ ರಾತ್ರಿ ತಡವಾಗುವವರೆಗೂ ಶ್ರಮಿಸಿದವರು, ಕಾರ್ಯಕ್ರಮಗಳಿಗೆ ಹಣ ಮತ್ತು ಸಂಪನ್ಮೂಲಗಳನ್ನು ಒದಗಿಸಿದವರು–ಇಂತಹ ನೂರಾರು ಕನ್ನಡಿಗರ ಪರಿಶ್ರಮವೇ ಇಂದು ರಾಜಧಾನಿಯಲ್ಲಿ ಕನ್ನಡದ ಸಾಂಸ್ಕೃತಿಕ ನೆಲೆ ಗಟ್ಟಿಯಾಗಿ ಉಳಿಯಲು ಕಾರಣವಾಗಿದೆ. ಅವರಲ್ಲಿ ಅನೇಕರ ಹೆಸರುಗಳು ದಾಖಲೆಗಳಲ್ಲಿ ಉಳಿದಿಲ್ಲದಿರಬಹುದು; ಆದರೆ ಅವರು ಬಿತ್ತಿದ ಕನ್ನಡದ ಬೀಜಗಳು ಮುಂದಿನ ತಲೆಮಾರುಗಳ ಬದುಕಿನಲ್ಲಿ ಮೊಳಕೆಯೊಡೆದಿವೆ.

ಇಂದು ಕಾಲ ಬದಲಾಗಿದೆ. ಸಂವಹನದ ಹೊಸ ಮಾಧ್ಯಮಗಳು, ಬದಲಾಗುತ್ತಿರುವ ಉದ್ಯೋಗದ ಸ್ವರೂಪ, ಕುಟುಂಬಗಳ ವಲಸೆ ಮತ್ತು ಹೊಸ ತಲೆಮಾರಿನ ಜೀವನಶೈಲಿ ಕನ್ನಡ ಸಂಘಟನೆಗಳ ಮುಂದೆ ಹೊಸ ಸವಾಲುಗಳನ್ನು ತಂದಿವೆ. ಸಂಘಟನೆಗಳ ಅಸ್ತಿತ್ವವನ್ನು ಉಳಿಸುವುದಷ್ಟೇ ಈಗ ಸಾಕಾಗುವುದಿಲ್ಲ; ಮಕ್ಕಳಲ್ಲಿ ಕನ್ನಡ ಓದುವ, ಬರೆಯುವ ಮತ್ತು ಮಾತನಾಡುವ ಅಭ್ಯಾಸ ಬೆಳೆಸುವುದು, ಯುವಜನರನ್ನು ಸಾಹಿತ್ಯ–ರಂಗಭೂಮಿಯತ್ತ ಆಕರ್ಷಿಸುವುದು ಹಾಗೂ ಡಿಜಿಟಲ್ ಜಗತ್ತಿನಲ್ಲಿಯೂ ಕನ್ನಡಕ್ಕೆ ಸೂಕ್ತ ಸ್ಥಾನ ಕಲ್ಪಿಸುವುದು ಅಗತ್ಯವಾಗಿದೆ.

ಹಿರಿಯರು ಕಟ್ಟಿದ ಸಂಸ್ಥೆಗಳನ್ನು ಸ್ಮರಿಸುವುದೆಂದರೆ ಅವರ ಭಾವಚಿತ್ರಗಳಿಗೆ ಹಾರ ಹಾಕುವುದಷ್ಟೇ ಅಲ್ಲ; ಅವರು ಉಳಿಸಿಕೊಟ್ಟ ಮೌಲ್ಯಗಳನ್ನು ನಮ್ಮ ಬದುಕಿನಲ್ಲಿ ಮುಂದುವರಿಸುವುದೂ ಆಗಿದೆ. ಅವರು ಹಚ್ಚಿದ ಕನ್ನಡದ ದೀಪ ಆರದಂತೆ ನೋಡಿಕೊಳ್ಳುವುದು, ಅದನ್ನು ಹೊಸ ತಲೆಮಾರಿನ ಕೈಗೆ ಒಪ್ಪಿಸುವುದು ನಮ್ಮೆಲ್ಲರ ಹೊಣೆಗಾರಿಕೆ.

ರಾಜಧಾನಿಯ ನೆಲದಲ್ಲಿ ಕನ್ನಡದ ತೇರು ಸದಾ ಚಲಿಸುತ್ತಿರುತ್ತದೆ. ಅದನ್ನು ಎಳೆಯುವ ಕೈಗಳು ಬದಲಾಗಬಹುದು; ಆದರೆ ತೇರಿನ ಮೇಲಿರುವ ಕನ್ನಡದ ಧ್ವಜ ಎಂದೆಂದಿಗೂ ಹಾರುತ್ತಿರಲಿ. ಎಲ್ಲರಿಗೂ ಕರ್ನಾಟಕ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು.❑

ಡಾ. ಚಂದ್ರಶೇಖರ್
ಜಂಟಿ ನಿರ್ದೇಶಕರು
ಲೋಕಸಭೆ, ಸಂಸತ್ ಭವನ, ನವದೆಹಲಿ

ಉಚಿತ ವೈದ್ಯಕೀಯ ಸಲಹೆ

ಡಾ. ರೂಪದೇವಿ

MBBS, MS MRCOG
FELLOW IN GYNEE ONCO

ಪ್ರತಿ ತಿಂಗಳ ಕೊನೆಯ ಭಾನುವಾರದಂದು ಡಾ. ರೂಪದೇವಿ ಅವರಿಂದ ಮಹಿಳೆಯರಿಗೆ ಸಂಬಂಧಿಸಿದ ಆರೋಗ್ಯ ಸಮಸ್ಯೆಗಳ ಕುರಿತು ಸೂಕ್ತ ವೈದ್ಯಕೀಯ ಸಲಹೆ ಹಾಗೂ ಮಾರ್ಗದರ್ಶನವನ್ನು ನೀಡಲಿದ್ದಾರೆ.

ದೆಹಲಿಯಲ್ಲಿರುವ ಕನ್ನಡಿಗ ಮಹಿಳೆಯರು ಈ ಸೌಲಭ್ಯದ ಪ್ರಯೋಜನವನ್ನು ಪಡೆದುಕೊಳ್ಳಬೇಕೆಂದು ವಿನಮ್ರವಾಗಿ ವಿನಂತಿಸಿಕೊಳ್ಳುತ್ತೇವೆ.

ಅಭಿನಂದನೆ

ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ದೆಹಲಿಯ ಹೆಮ್ಮೆಯ ಕನ್ನಡಿಗರು: ಡಾ. ಕೆ.ಎಸ್. ಸೋಮಶೇಖರ್ ಮತ್ತು ಶ್ರೀ ಡಿ. ಉಮಾಪತಿ



ಕರ್ನಾಟಕ ಸರ್ಕಾರ ಪ್ರಕಟಿಸಿರುವ 2026ನೇ ಸಾಲಿನ ಪ್ರತಿಷ್ಠಿತ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ದೆಹಲಿ ನಿವಾಸಿ ಕೆ.ಎಸ್. ಸೋಮಶೇಖರ್ ಅವರು ಭಾಜನರಾಗಿದ್ದಾರೆ. ರಾಜ್ಯಸಭೆ ಸಚಿವಾಲಯದಲ್ಲಿ ಸಲ್ಲಿಸಿರುವ ದೀರ್ಘಕಾಲದ ಹಾಗೂ ಗಣನೀಯ ಸಂಸದೀಯ ಸೇವೆಯನ್ನು ಪರಿಗಣಿಸಿ, ಆಡಳಿತ (ಹೊರನಾಡು) ವಿಭಾಗದಲ್ಲಿ ಇವರನ್ನು ಈ ಗೌರವಕ್ಕೆ ಆಯ್ಕೆ ಮಾಡಲಾಗಿದೆ. ನವೆಂಬರ್ 1, 2026ರಂದು ಬೆಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗಿದೆ.

ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನ ನೀಲತೂರು ಎಂಬ ಸಣ್ಣ ಮಾವು ಬೆಳೆಯುವ ಗ್ರಾಮದವರಾದ ಸೋಮಶೇಖರ್, ರೋಣೂರಿನ ಸರ್ಕಾರಿ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಪಡೆದು, ಕೋಲಾರದ ಸರ್ಕಾರಿ ಕಾಲೇಜಿನಲ್ಲಿ ಪದವಿ ಶಿಕ್ಷಣ ಪೂರ್ಣಗೊಳಿಸಿದರು. ಬಳಿಕ ಕುವೆಂಪು ವಿಶ್ವವಿದ್ಯಾಲಯದಿಂದ ಎಂ.ಎ. (ಸಾಹಿತ್ಯ), ಎಂ.ಫಿಲ್. ಹಾಗೂ ಪಿಎಚ್‌ಡಿ ಪದವಿಗಳನ್ನು ಪಡೆದರು. ರೈತರ ಸಂಕಷ್ಟಗಳ ತುಲನಾತ್ಮಕ ಅಧ್ಯಯನ ಅವರ ಸಂಶೋಧನೆಯ ಪ್ರಮುಖ ವಿಷಯವಾಗಿತ್ತು. ಚಿಂತಾಮಣಿಯಲ್ಲಿ ಅತಿಥಿ ಉಪನ್ಯಾಸಕರಾಗಿಯೂ ಸೇವೆ ಸಲ್ಲಿಸಿದ್ದಾರೆ.

ಮೂರು ದಶಕಗಳಿಗೂ ಹೆಚ್ಚು ಕಾಲ ದೆಹಲಿಯಲ್ಲಿ ನೆಲೆಸಿ, ಉನ್ನತ ಹುದ್ದೆಗಳನ್ನು ಅಲಂಕರಿಸಿದರೂ ತಮ್ಮ ನೆಲದ ನಂಟನ್ನು ಅವರು ಮರೆತಿಲ್ಲ. ವೃತ್ತಿ ಜೀವನದಿಂದ ಸಂಪೂರ್ಣ ನಿವೃತ್ತರಾದ ಬಳಿಕ ಸ್ವಗ್ರಾಮಕ್ಕೆ ಮರಳಿ ಕೃಷಿ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವ ಆಸೆಯನ್ನೂ ಹೊಂದಿದ್ದಾರೆ.

ಇಂಗ್ಲಿಷ್, ಹಿಂದಿ, ತೆಲುಗು ಮತ್ತು ತಮಿಳು ಭಾಷೆಗಳಲ್ಲಿ ಪರಿಣತಿ ಹೊಂದಿರುವ ಸೋಮಶೇಖರ್ ಅವರ ಮಾತೃಭಾಷೆ ಕನ್ನಡ. ರಾಜ್ಯಸಭೆಯ ಕಾರ್ಯದರ್ಶಿ ಹುದ್ದೆಗೇರಿದ ಕರ್ನಾಟಕದ ಮೊದಲ ಅಧಿಕಾರಿ ಎಂಬ ಹೆಗ್ಗಳಿಕೆಯೂ ಇವರದು.

ಸಂಸದೀಯ ಸೇವೆಯಲ್ಲಿ ತಮ್ಮದೇ ಆದ ಛಾಪು ಮೂಡಿಸಿರುವ ಕೆ.ಎಸ್. ಸೋಮಶೇಖರ್ ಅವರಿಗೆ ಸಂದಿರುವ ಈ ಗೌರವ ದೆಹಲಿ ಕನ್ನಡಿಗರಿಗೂ ಹೆಮ್ಮೆಯ ಸಂಗತಿ. **ಅವರಿಗೆ ದೆಹಲಿ ಕರ್ನಾಟಕ ಸಂಘ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಅಭಿನಂದನೆಗಳು.** ❑

ಶ್ರೀ ಡಿ.ಉಮಾಪತಿ ಅವರು ಕನ್ನಡ ಮಾಧ್ಯಮಲೋಕದ ಅತ್ಯಂತ ಗೌರವಾನ್ವಿತ ಮತ್ತು ಜನಪರ ಚಿಂತನೆಯ ಹಿರಿಯ ಪತ್ರಕರ್ತ ಹಾಗೂ ಅಂಕಣಕಾರರಾಗಿದ್ದಾರೆ. ನಾಲ್ಕು ದಶಕಗಳಿಗೂ ಹೆಚ್ಚು ಕಾಲ ದೆಹಲಿ ಸೇರಿದಂತೆ ವಿವಿಧೆಡೆ ಕನ್ನಡ ಪತ್ರಿಕೋದ್ಯಮದಲ್ಲಿ ಮೌಲ್ಯಯುತ ಸೇವೆ ಸಲ್ಲಿಸಿರುವ ಇವರಿಗೆ ಮಾಧ್ಯಮ ಕ್ಷೇತ್ರದ ಸುದೀರ್ಘ ಸಾಧನೆಗಾಗಿ ಪ್ರತಿಷ್ಠಿತ 2026ನೇ ಸಾಲಿನ 'ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ' ಲಭಿಸಿದೆ. ಈ ವರ್ಷದ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಇನ್ನಷ್ಟು ಘನತೆಯನ್ನು ಮೈದುಂಬಿಕೊಂಡಿತು. ಈ ಪ್ರಶಸ್ತಿಗೆ ಅವರಿಗಿಂತ ಸೂಕ್ತ ವ್ಯಕ್ತಿ ಇರಲಾರರು ಅಂತ ನನ್ನ ಅನಿಸಿಕೆ.

ಚಿತ್ರದುರ್ಗ ಜಿಲ್ಲೆಯ ದಿ. ಕೆ. ದಾಸಪ್ಪ ಹಾಗೂ ದಿ. ಹನುಮಮ್ಮ ದಂಪತಿಯ ಪುತ್ರರಾಗಿ 1959 ಮಾರ್ಚ್ 18 ರಂದು ಜನಿಸಿದ ಉಮಾಪತಿ ಅವರು ಮೈಸೂರು ಮಹಾರಾಜ ಕಾಲೇಜಿನಲ್ಲಿ ಇಂಗ್ಲಿಷ್ ಸಾಹಿತ್ಯ ಮತ್ತು ಪತ್ರಿಕೋದ್ಯಮದಲ್ಲಿ ಬಿ.ಎ, ಮೈಸೂರು ವಿವಿಯಲ್ಲಿ ಪತ್ರಿಕೋದ್ಯಮದಲ್ಲಿ ಎಂ.ಎ. ನಲ್ಲಿ 2ನೇ ರ್‍ಯಾಂಕ್ ಪಡೆದವರು.

ಖ್ಯಾತ ಹಿರಿಯ ಪತ್ರಕರ್ತ ಖಾದ್ರಿ ಶ್ಯಾಮಣ್ಣನವರ ಮಾರ್ಗದರ್ಶನದಲ್ಲಿ 'ಕನ್ನಡ ಪ್ರಭ' ಪತ್ರಿಕೆಯ ಮೂಲಕ ಉಮಾಪತಿ ಅವರು ತಮ್ಮ ವೃತ್ತಿಜೀವನವನ್ನು ಆರಂಭಿಸಿದರು. 27 ವರ್ಷಗಳ ಕಾಲ ನವದೆಹಲಿಯಲ್ಲಿ 'ಕನ್ನಡ ಪ್ರಭ' ಸೇರಿದಂತೆ ಪ್ರಮುಖ ಕನ್ನಡ ದಿನಪತ್ರಿಕೆಗಳ ವಿಶೇಷ ಪ್ರತಿನಿಧಿಯಾಗಿ ಕಾರ್ಯ ನಿರ್ವಹಿಸಿದರು. ಈ ಅವಧಿಯಲ್ಲಿ ಅವರು ದೇಶದ ಸಂಸತ್ ಕಲಾಪಗಳು, ರಾಷ್ಟ್ರೀಯ ಚುನಾವಣೆಗಳು ಹಾಗೂ ವಿದೇಶಾಂಗ ವ್ಯವಹಾರಗಳನ್ನು ಅತ್ಯಂತ ಸೂಕ್ಷ್ಮವಾಗಿ ವರದಿ ಮಾಡಿ ಗಮನ ಸೆಳೆದಿದ್ದರು. ನವದೆಹಲಿಯ ಪ್ರತಿಷ್ಠಿತ 'ಪ್ರೆಸ್ ಕ್ಲಬ್ ಆಫ್ ಇಂಡಿಯಾ'ದ



(Press Club of India) ಕಾರ್ಯಕಾರಿ ಸಮಿತಿ ಸದಸ್ಯರಾಗಿಯೂ ಇವರು ಸೇವೆ ಸಲ್ಲಿಸಿದ್ದಾರೆ. ಪ್ರಸ್ತುತ ಡಿ. ಉಮಾಪತಿ ಅವರು ಈದಿನ.ಕಾಮ್ ಪತ್ರಿಕೆಯ ಕನ್ಸಲ್ಟಿಂಗ್ ಎಡಿಟರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದು, 'ನ್ಯಾಯಪಥ' ಸೇರಿದಂತೆ ವಿವಿಧ ವೈಚಾರಿಕ ವೆಬ್ ಜರ್ನಲ್‌ಗಳಿಗೆ ನಿರಂತರವಾಗಿ ರಾಜಕೀಯ ಹಾಗೂ ಸಾಮಾಜಿಕ ಅಂಕಣಗಳನ್ನು ಬರೆಯುತ್ತಿದ್ದಾರೆ.

ಪಾರ್ಲಿಮೆಂಟ್ ವರದಿ, ಚುನಾವಣಾ ವಿಶ್ಲೇಷಣೆ, ಸುಪ್ರೀಂ ಕೋರ್ಟ್ ನೀರು ನ್ಯಾಯಾಧೀಕರಣ, ರಾಷ್ಟ್ರಮಟ್ಟದ ರಾಜಕೀಯ ಮತ್ತು ವಿದೇಶಾಂಗ ಸಚಿವರ ಜೊತೆ ವಿದೇಶ ಪ್ರವಾಸದ ರಾಜತಾಂತ್ರಿಕ ವರದಿಗಾರಿಕೆಯಲ್ಲಿ ಅನುಭವಿ.

ಇವರ ಎರಡು ಕೃತಿಗಳು–'ದೆಹಲಿ ನೋಟ' ಮತ್ತು 'ಪದಕುಸಿಯೇ ನೆಲವಿಲ್ಲ'. (ನಿಯಾಜ್ ಫಾರೂಕಿ ಅವರ An ordinary man's guide to Radicalism ನ ಕನ್ನಡ ಅನುವಾದ).

ಇವರಿಗೆ ಕರ್ನಾಟಕ ಮಾಧ್ಯಮ ಅಕಾಡೆಮಿ ಪ್ರಶಸ್ತಿ, ಅಂಬೇಡ್ಕರ್ ಪ್ರತಿಷ್ಠಾನದ ಬೋಧಿವರ್ಧನ, ಬಿ. ರಾಚಯ್ಯ ಪ್ರಶಸ್ತಿ, ಪ್ರೆಸ್ ಕ್ಲಬ್ ಬೆಂಗಳೂರು ಜೀವಮಾನ ಸಾಧನೆ, ವಡ್ಡರ್ಸೆ ರಘುರಾಮ ಶೆಟ್ಟಿ ಸಾಮಾಜಿಕ ನ್ಯಾಯ ಪತ್ರಿಕೋದ್ಯಮ ಪ್ರಶಸ್ತಿ, ಇಂಡಿಯನ್ ಎಕ್ಸ್‌ಪ್ರೆಸ್ ಶ್ರಮಜೀವಿ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ ನಾಡಿಗೇರಿ ಕಿಟ್ಟಪ್ಪ ದತ್ತಿಗಳ ಜೊತೆಗೆ ಈ ಬಾರಿಯ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಮುಡಿಗೇರುತ್ತಿದೆ.

ಉಮಾಪತಿ ಅವರು ಬಂಡವಾಳಶಾಹಿ ಕೋಮುವಾದದ ವಿರುದ್ಧ ಜನಪರ ಹಾಗೂ ಸಾಮಾಜಿಕ ನ್ಯಾಯದ ಪತ್ರಿಕೋದ್ಯಮವನ್ನು ಪ್ರತಿಪಾದಿಸುವ ಚಿಂತಕರು. ಆತ್ಮೀಯ ಕನ್ನಡಿಗರು. ಪ್ರಜಾಪ್ರಭುತ್ವ ಮತ್ತು ಮಾಧ್ಯಮಗಳ ನೈತಿಕತೆಯ ಕುರಿತು ಇವರು ಸದಾ ಧ್ವನಿ ಎತ್ತುತ್ತಿರುತ್ತಾರೆ.

ಕನ್ನಡ ಪತ್ರಿಕೋದ್ಯಮದಲ್ಲಿ ದೆಹಲಿಯು ರಾಜಕಾರಣವನ್ನು ಕನ್ನಡಿಗರಿಗೆ ಅತ್ಯಂತ ಸರಳವಾಗಿ ತಲುಪಿಸಿದ ಮತ್ತು ಯಾವುದೇ ಮುಲಾಜಿಲ್ಲದೆ ಸಮಾಜದ ಶೋಷಿತ ವರ್ಗಗಳ ಪರವಾಗಿ ಲೇಖನಿ ಚಲಾಯಿಸುತ್ತಿರುವ ಕೆಲವೇ ಕೆಲವು ಹಿರಿಯ ಪತ್ರಕರ್ತರಲ್ಲಿ ಡಿ. ಉಮಾಪತಿ ಪ್ರಮುಖರಾಗಿದ್ದಾರೆ. ಸುದೀರ್ಘಕಾಲ ದೆಹಲಿಯಲ್ಲಿ ನೆಲೆಸಿದ್ದ ಅವರು, ದೆಹಲಿ ಕರ್ನಾಟಕ ಸಂಘದ ಆಗುಹೋಗುಗಳಿಗೆ ಸದಾ ಸ್ಪಂದಿಸುವುದರ ಜೊತೆಗೆ, ಸಂಘದ ಬೆಳವಣಿಗೆಗೆ ತಮ್ಮ ಅಮೂಲ್ಯ ಸಲಹೆ–ಸೂಚನೆಗಳನ್ನು ನೀಡುತ್ತಿದ್ದ ಆತ್ಮೀಯ ದೆಹಲಿ ಕನ್ನಡಿಗರು.

ಅವರಿಗೆ ದೆಹಲಿ ಕರ್ನಾಟಕ ಸಂಘ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಹಾರ್ದಿಕ ಅಭಿನಂದನೆಗಳು. ❑

ಕರುನಾಡು ಮತ್ತು ಕರ್ನಾಟಕದ ಒಂದಷ್ಟು ಇತಿಹಾಸ

ಬಹುದಿನಗಳಿಂದ ಮೈಮರೆಯಿಂದ
ಕೂಡಿರುವ ಕೊಳೆಯ ಕೊಚ್ಚೇವು
ಎಲ್ಲೆಲ್ಲಿ ಕನ್ನಡದ ಕಂಪು ಸೂಸಲು ಅಲ್ಲಲ್ಲಿ ಕರಣ
ಚಾಚೇವು
ನಡುನಾಡೆ ಇರಲಿ ಗಡಿನಾಡೆ ಇರಲಿ ಕನ್ನಡದ
ಕಳೆಯ ಕೆಚ್ಚೇವು
ಮರೆತೇವು ಮರವ ತೆರೆದೇವು ಮನವ
ಎರೆದೇವು ಒಲವ ಹಿರಿನೆನಪಾ
ನರನರವನೆಲ್ಲ ಹುರಿಗೊಳಿಸಿ ಹೊಸದು
ಹಚ್ಚೇವು ಕನ್ನಡದ ದೀಪ ॥ ಹಚ್ಚೇವು ॥

ಉತ್ತರದ ಬೀದರ್ ನಿಂದ ದಕ್ಷಿಣದ ಚಾಮರಾಜ ನಗರದವರೆಗೆ ಮತ್ತು ಪಶ್ಚಿಮದ ಕಾರವಾರದಿಂದ ಪೂರ್ವದ ಕೋಲಾರದವರೆಗಿನ ಭೌಗೋಳಿಕ ಪ್ರದೇಶವನ್ನು ಕರುನಾಡು ಎಂದು ಪರಿಗಣಿಸಬಹುದು.

ನಮ್ಮ ನಾಡನ್ನು ಕರುನಾಡು ಎಂದು ಕರೆಯಲು ಕಾರಣವೇನು?

ಇತಿಹಾಸಕಾರರ ಪ್ರಕಾರ ಎರಡು ಪ್ರಮುಖ ಕಾರಣಗಳು ಈ ಹೆಸರಿನ ಹಿಂದೆ ಇದೆ. ದ್ರಾವಿಡ ಭಾಷೆಯಲ್ಲಿ ಕರು ಎಂದರೆ ಕಪ್ಪು, ಉತ್ತರ ಕರ್ನಾಟಕದ ಫಲವತ್ತಾದ ಬಯಲು ಸೀಮೆಯಲ್ಲಿ ಹರಡಿರುವ ಕಪ್ಪು ಮಣ್ಣನ್ನ ಉದ್ದೇಶಿಸಿ ಕರಿನಾಡು ಅಥವ ಕಪ್ಪು ಮಣ್ಣು ಹರಡಿರುವ ನಾಡು ಕರುನಾಡು ಎಂದು ಕರೆಯಲ್ಪಟ್ಟಿತು. ಇನ್ನೂ ಇನ್ನೊಂದು ಮೂಲ ಕಾರಣ ಕರು ಎಂದರೆ ಎತ್ತರ ಅಥವ ಮೇಲೆ ಎಂದರ್ಥ. ನಮ್ಮ ಭೌಗೋಳಿಕ ಪ್ರದೇಶ ಸಮುದ್ರ ಮಟ್ಟಕ್ಕಿಂತ 400 ರಿಂದ 900 ಅಡಿ ಎತ್ತರದಲ್ಲಿದೆ. ಎತ್ತರದಲ್ಲಿರುವ ಪ್ರದೇಶವನ್ನು ಕರುನಾಡು ಎಂದು ಕರೆಯಲಾಯಿತು ಎಂಬ ಇತಿಹಾಸವಿದೆ. ತಗ್ಗು ಪ್ರದೇಶದಲ್ಲಿದ್ದ ತಮಿಳು ಜನರು ಈ ಪ್ರದೇಶವನ್ನು ಕರ್ನಾಡ್ / ಕರುನಾಡ್ ಎಂದು ಕರೆದರು ಮತ್ತು ಕಾಲಕ್ರಮೇಣ ಕರ್ನಾಟಕವಾಯಿತು.

ತಮಿಳಿನ ಅತ್ಯಂತ ಪ್ರಾಚೀನ ಸಂಗಮ ಕೃತಿಗಳಾದ ಶಿಲಪ್ಪದಿಗಾರಂ ಮತ್ತು ತೊಳ್ಕಾಪಿಯಂ ಎಂಬ ಗ್ರಂಥಗಳಲ್ಲಿ ನಮ್ಮನಾಡಿನ ಭಾಗದ ಜನರನ್ನ ಕರುನಾಟಿಗರ್ ಅಥವ ಕರುನಾಟ್ಯಾರ್ ಎಂದು ಕರೆಯಲಾಗಿದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಪತ್ತೆಯಾದ ಪೀರೂರು ತಾಮ್ರ ಶಾಸನಗಳಲ್ಲಿ ಕ್ರಿ.ಶ. 450ರ ಕದಂಬ ಸಾಮ್ರಾಜ್ಯದ, ಬಾದಾಮಿ, ಬನವಾಸಿ ಕ್ಷೇತ್ರವನ್ನ ಕರ್ನಾಟಕ ದೇಶದ ಆಭರಣ ಎಂದು ಉಲ್ಲೇಖಿಸಲಾಗಿದೆ. ಕದಂಬ ದೊರೆ ಶಾಂತಿವರ್ಮನನ್ನು ಸಮಗ್ರ ಕರ್ನಾಟಕ ದೇಶದ ಸಾರ್ವಭೌಮ ಎಂದು ಪ್ರಶಂಸಿಸಲಾಗಿದೆ. ಇದೇ ಕಾಲಘಟ್ಟದ ಹಾಸನ ಜಿಲ್ಲೆಯ ಹಲ್ಮಿಡಿಯಲ್ಲಿ ಪತ್ತೆಯಾದ ಪೂರ್ಣ ಪ್ರವಾಣದ ಕನ್ನಡದ ಮೊದಲ ಶಾಸನ ಹಲ್ಮಿಡಿ ಶಾಸನ. ಕವಿ ಕುಬ್ಜನು ಪೂರ್ಣಪ್ರಮಾಣದಲ್ಲಿ ಹಳೆಗನ್ನಡದಲ್ಲಿ ರಚಿಸಿರುವ ಹಲ್ಮಿಡಿ ಶಾಸನವು ಅಂದಿನ ಕಾಲಕ್ಕೆ ಕನ್ನಡವು ಆಡಳಿತಾತ್ಮಕ ಭಾಷೆಯಾಗಿ ಎಷ್ಟು ಪ್ರಬಲವಾಗಿತ್ತು ಎಂಬುದಕ್ಕೆ ಜೀವಂತ ಸಾಕ್ಷಿ. ನಮ್ಮ ಹೆಮ್ಮೆಯ ನಾಡಕವ್ಯ ಕವಿರಾಜಮಾರ್ಗವು ಅಪ್ಪಟ್ಟ ಕನ್ನಡದಲ್ಲಿ 'ಕಾವೇರಿಯಿಂದ ಗೋದಾವರಿವರಮಿರ್ದ ನಾಡದಾ ಕನ್ನಡದೊಳ್' ಎಂದು ನಮ್ಮ ನಾಡಿನ ವಿಸ್ತಾರ, ಪ್ರಾಬಲ್ಯ ಮತ್ತು ಸಾಂಸ್ಕೃತಿಕ ವೈಭವವನ್ನು ಅತ್ಯಂತ ಕಲಾತ್ಮಕವಾಗಿ ಸಾರಿದೆ.

ಇನ್ನು ಕರ್ನಾಟಕದ ರಾಜಕೀಯ ಮತ್ತು ಪ್ರಾಬಲ್ಯದ ಕಡೆ ತಿರುಗಿ ನೋಡಿದರೆ ಕರುನಾಡಿನ ಸಾಮ್ರಾಟರು ಅಂದು ಇಡೀ ಭಾರತದಲ್ಲೇ ಹೊಸ ಸಂಚಲನವನ್ನೇ ಸೃಷ್ಟಿಸಿದ್ದರು. ಬಾದಾಮಿಯ ಚಾಲುಕ್ಯರು ತಮ್ಮ ಅಜೇಯ ಸೈನ್ಯ ಬಲದಿಂದ ಇಡೀ ದಕ್ಕನ್ ಪ್ರಸ್ಥ ಭೂಮಿಯನ್ನೇ ಆಳಿದರು. ರಾಷ್ಟ್ರಕೂಟರ ಶಾಸನದಲ್ಲಿ ಕರ್ನಾಟಕ ಬಲ ಎಂಬ ಪ್ರಸ್ತಾಪವು ಈ ಅಜೇಯ ಶಕ್ತಿ ಮತ್ತು ಬಲವನ್ನು ಅತ್ಯಂತ ಗೌರವದಿಂದ ಸೂಚಿಸುತ್ತದೆ. ಚಾಲುಕ್ಯ ದೊರೆ ಇಮ್ಮಡಿ ಪುಲಕೇಶಿ ಉತ್ತರದ ಚಕ್ರವರ್ತಿ ಹರ್ಷವರ್ಧನನನ್ನು ನರ್ಮದಾ ನದಿ ತೀರದಲ್ಲಿ ಸೋಲಿಸಿ ದಕ್ಷಿಣದ ಸಾರ್ವಭೌಮ ಎಂಬುದನ್ನ ಐಹೊಳೆ ಶಾಸನದಲ್ಲಿ ಸಾರಿ ಹೇಳಲಾಗಿದೆ.

ಕನ್ನಡದ ಅತ್ಯಂತ ಹಳೆಯ ತ್ರಿಪದಿ ಪದ್ಯವನ್ನ ಹೊಂದಿರುವ ಬಾದಾಮಿಯ ಕಪ್ಪೆ ಅರಾಭಟ್ಟನ ಶಾಸನವು ಕನ್ನಡಿಗರ ಸ್ವಭಾವವನ್ನು ಎಷ್ಟು ಚೆನ್ನಾಗಿ ಹೇಳಿದ್ದಾರೆ. "ಸಾಧುಗೆ ಸಾಧು ಮಾಧುರ್ಯಂಗೆ ಮಾಧುರ್ಯಂ" ಅಂದರೆ ಕನ್ನಡಿಗರು ಒಳ್ಳೆಯವರಿಗೆ ಅತ್ಯಂತ ಮೃದು ಮತ್ತು ಮಾಧುರ್ಯದಂತೆ ಒಳ್ಳೆಯವರಂತಿದ್ದರೆ ದುಷ್ಟರು ತೊಂದರೆ ಕೊಡುವವರಿಗೆ ವೀರಸಿಂಹಗಳಾಗಿ ಎದುರಿಸುತ್ತಾರೆ. ಇತಿಹಾಸಕಾರರ ಪ್ರಕಾರ ಹರಪ್ಪ ನಾಗರೀಕತೆ ಇದ್ದ ಸುಮಾರು 5000 ವರ್ಷಗಳ ಹಿಂದೆಯೇ ಚಿನ್ನದ ಆಭರಣಗಳನ್ನ ನಮ್ಮ ಕೋಲಾರದಿಂದಲೇ ರಫ್ತು ಮಾಡಲಾಗುತಿತ್ತು. ಹರಪ್ಪನ್ನರು ನೇರ ವಾಣಿಜ್ಯ ಸಂಪರ್ಕ ಹೊಂದಿದ್ದರು ಎಂದು ಹೇಳಬಹುದು. ಕ್ರಿಸ್ತ ಪೂರ್ವ ಅಶೋಕನ ಕಾಲದ ಚಿತ್ರದುರ್ಗದ ಬ್ರಹ್ಮಗಿರಿಯಲ್ಲಿ ಕೆತ್ತಿಸಿದ ಶಾಸನದಲ್ಲಿ ಬರುವ ಇಸಿಲಾ ಪದವು ಕರ್ನಾಟಕದ ಬ್ರಹ್ಮಗಿರಿ ಸುತ್ತಲಿನ ಸ್ಥಳನಾಮವಾಗಿರಬಹುದು ಎಂದು ಪರಿಗಣಿಸಲಾಗಿದೆ.

ಬ್ರಿಟಿಷರ ಕಾಲದಲ್ಲಿ ಹಲವು ಪ್ರಾಂತ್ಯಗಳಾಗಿ ಹರಿದು ಹಂಚಿಹೋಗಿದ್ದ ಕರುನಾಡು ಕನ್ನಡಿಗರ ಬಹುದಿನಗಳ ಏಕೀಕರಣದ ಕನಸಿನ ಫಲವಾಗಿ 1956 ನವೆಂಬರ್ 1 ರಂದು ಭಾಷಾವಾರು ಪ್ರಾಂತ್ಯವಾಗಿ ಅಖಂಡ ಮೈಸೂರು ರಾಜ್ಯವಾಗಿ ರೂಪುಗೊಂಡಿತು. ಕಾಲಕ್ರಮೇಣ ಕನ್ನಡಿಗರ ನಾಡಿಗೆ ಕರ್ನಾಟಕ ಎಂಬ ಹೆಸರಿಡಬೇಕೆಂಬ ಕೂಗು ಸಾಕಾರಗೊಂಡಿತು. ಡಿ. ದೇವರಾಜ ಅರಸ್ ಮುಖ್ಯಮಂತ್ರಿಗಳಾಗಿದ್ದ ಕಾಲಘಟ್ಟದಲ್ಲಿ 1973 ನವೆಂಬರ್ 1 ರಂದು ಮೈಸೂರು ರಾಜ್ಯವು ಕರ್ನಾಟಕವಾಯಿತು. ಅಂದು ಕೋಟಿ ಕನ್ನಡಿಗರ ಅಸ್ಮಿತೆ, ಆತ್ಮಗೌರವ ಮತ್ತು ಬಹುದಿನಗಳ ಕನಸು ನನಸಾಗಿತ್ತು.

ಇಂದು ಕರ್ನಾಟಕ ಎಂಬ ಹೆಸರು ಒಂದು ಪ್ರಾದೇಶಿಕ ನಕ್ಷೆ ಅಥವ ಭೌಗೋಳಿಕ ಸ್ಥಳದ ಹೆಸರಾಗಿರದೆ ಕನ್ನಡ, ನಾಡು, ನುಡಿ, ಸಂಸ್ಕೃತಿ, ಪರಂಪರೆ ಮತ್ತು ಕನ್ನಡಿಗರ ಸ್ವಾಭಿಮಾನದ ಪ್ರತೀಕವಾಗಿದೆ. ಕರುನಾಡು ಎಂಬ ಹೆಸರಿನೊಂದಿಗೆ ನಮ್ಮ ಹೆಮ್ಮೆ, ಪರಂಪರೆ, ಕಲೆ ಮತ್ತು ಸಂಸ್ಕೃತಿ ಕನ್ನಡಿಗರ ಮನಸ್ಸಿನಲ್ಲಿ ಕಾಲಕಾಲಕ್ಕೆ ಪೀಳಿಗೆಯಿಂದ ಪೀಳಿಗೆಗೆ ಚಿರಸ್ಥಾಯಿಯಾಗಿ ನೆಲೆಸಿರುತ್ತದೆ. ❑

ಹರಿಪ್ರಿಯ

ಆದಿಕವಿ ವಾಲ್ಮೀಕಿಗೆ ದೆಹಲಿ ಕನ್ನಡಿಗರ ನಮನ





ದೆಹಲಿ ಕರ್ನಾಟಕ ಸಂಘ ಮತ್ತು ದೆಹಲಿ ರಾಜವೀರ ಮದಕರಿ ನಾಯಕ ಟ್ರಸ್ಟ್, ನವದೆಹಲಿ ಜಂಟಿ ಆಶ್ರಯದಲ್ಲಿ ದಿನಾಂಕ 31.10.2026 ರಂದು ಸಂಘದ ವಿಚಾರ ಸಂಕಿರಣ ಭವನದಲ್ಲಿ ಆದಿಕವಿ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಆಯೋಜಿಸಲಾಗಿತ್ತು. ದೆಹಲಿ ಕನ್ನಡಿಗರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಸಾಹಿತ್ಯ ಸಾಂಸ್ಕೃತಿಕ ನೆನಪುಗಳು



ದೆಹಲಿ ಕರ್ನಾಟಕ ಸಂಘದ ವಿಚಾರ ಸಂಕಿರಣ ಭವನದಲ್ಲಿ ದಿನಾಂಕ 02.10.2026 ರಂದು ಸಾಹಿತ್ಯ ಸಾಂಸ್ಕೃತಿಕ ನೆನಪುಗಳು ಕಾರ್ಯಕ್ರಮ ಬಹಳ ಸರಳವಾಗಿ ನೆರವೇರಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ವಹಿಸಿದ್ದರು. ಪ್ರಧಾನ ಕಾರ್ಯದರ್ಶಿ ಶ್ರೀ ರಾಧಾಕೃಷ್ಣ ಹಾಗೂ ಜನಕಪುರಿ ಕನ್ನಡ ಕೂಟದ ಅಧ್ಯಕ್ಷ ಡಾ. ಅಶೋಕ ಈಟಿ ಅವರು ಉಪಸ್ಥಿತರಿದ್ದರು. ಸಂಘದ ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ಜಯಶ್ರೀ ಬಸವರಾಜು ಅವರು ಸ್ವಾಗತಿಸುವುದರೊಂದಿಗೆ ಕಾರ್ಯಕ್ರಮ ಆರಂಭಗೊಂಡಿತು.

ಜನಕಪುರಿ ಕನ್ನಡ ಕೂಟದ ಹಿರಿಯರಾದ ದಿ. ಎಚ್.ಎಸ್. ಕುಲಕರ್ಣಿ, ದಿ. ಸುಧಾಕರ ಕುರಂದವಾಡ ಮತ್ತು ದಿ. ಕೃಷ್ಣಮೂರ್ತಿ ಕಲುಮಂಗಿ–ಈ ಮೂವರು ದಿಗ್ಗಜರನ್ನು ಸ್ಮರಿಸುತ್ತಾ ಅವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಶ್ರೀ ಎಚ್.ಎಸ್. ಕುಲಕರ್ಣಿಯವರು ಬಹಳಷ್ಟು ನಾಟಕಗಳನ್ನು ರಚಿಸಿದರು. ನಾಟಕಗಳ ನಿರ್ದೇಶನವಲ್ಲದೇ ಸ್ವತಃ ನಾಟಕಗಳಲ್ಲಿ ಅಭಿನಯಿಸಿದರು. ಶ್ರೀ ಕುರಂದವಾಡ ಅವರು ಕಥೆ, ಕವನಗಳು, ಕವಿತೆಗಳು ಹೀಗೆ ಹಲವು ಸಂಕಲನಗಳನ್ನು ಬಿಡುಗಡೆ ಮಾಡಿದರು.

ಶ್ರೀ ಕುರಂದವಾಡ ಅವರ ಮಗ ಶ್ರೀ ನಾಗರಾಜ ಕುರಂದವಾಡ ಅವರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು ದೆಹಲಿ ಕರ್ನಾಟಕ ಸಂಘ ಮತ್ತು ಜನಕಪುರಿ ಕನ್ನಡ ಕೂಟ ಇವೆರಡೂ ಸಂಸ್ಥೆಯ ಜೊತೆಗಿನ ತಮ್ಮ ಬಾಲ್ಯದ ಒಡನಾಟವನ್ನು, ಅನುಭವಗಳನ್ನು ಎಲ್ಲರ ಜೊತೆ ಹಂಚಿಕೊಂಡರು.

ಡಾ. ಎಸ್.ಎಲ್. ಭ್ಯಂಡಾರ್‌ಕರ ಅವರು ಮಾತನಾಡುತ್ತಾ, ಎಚ್.ಎಸ್. ಕುಲಕರ್ಣಿ ಅವರು ತಮ್ಮನ್ನು ನಾಟಕ ರಂಗಕ್ಕೆ ಪರಿಚಯಿಸಿದ್ದನ್ನು "ದೇವರು ಎದ್ದು ಬಂದಾಗ" ನಾಟಕದಲ್ಲಿ ವಿಠಲನ ಪಾತ್ರ ಕೊಟ್ಟದ್ದನ್ನು ಸ್ಮರಿಸಿಕೊಂಡರು. ಶ್ರೀ ಕುರಂದವಾಡ ಅವರು ತುಂಬಾ ಮೃದು ಭಾಷಿ ಅವರಿಗೂ ನಾಟಕದ ನಂಟಿತ್ತು. ಇನ್ನೊಬ್ಬರು ದಿವಂಗತ ಮುರಳೀಧರ ಶ್ರೀನಿವಾಸ ಮುಧೋಳ ಅವರನ್ನೂ ನೆನೆಸಿಕೊಂಡರು. ನಂತರ ಶ್ರೀಯುತ ಕಲುಮಂಗಿ ಅವರು ಈ ನಾಟಕದ ಗುಂಪಿಗೆ ಸೇರ್ಪಡೆಯಾದರು. ಶ್ರೀ ಕಲುಮಂಗಿ, ಶ್ರೀ ಧೀರೇಂದ್ರ ರಾವ್ ಮತ್ತು ನಾನು ಕೂಡಿಕೊಂಡು "ಮಂಚದ ಮೇಲಿನ ಮನುಷ್ಯ" ನಾಟಕವನ್ನು ಮಾಡಿದೆವು ಎಂದ ಭಂಡಾರ್‌ಕರ ಈ ಮೂವರು ದಿಗ್ಗಜರು ರಂಗಭೂಮಿಗೆ ನೀಡಿದ ಕೊಡುಗೆಯನ್ನು ಮನದುಂಬಿ ನೆನೆದರು.

ಶ್ರೀ ಸಂಜೀವ ದೇಶಪಾಂಡೆ ಅವರು ಮಾತನಾಡುತ್ತಾ, ಶ್ರೀ ಸುಧಾಕರ ಕುರಂದವಾಡ ಅವರು ನಮ್ಮ ಚಿಕ್ಕಪ್ಪ, ಶ್ರೀ ಎಚ್.ಎಸ್. ಕುಲಕರ್ಣಿ ಅವರು ದೆಹಲಿಯ ರಂಗಭೂಮಿಗೆ ನನ್ನನ್ನೂ ಪರಿಚಯಿಸಿದರು. ಮೊದಲನೆಯ ನಾಟಕದ ಮುಖ್ಯ ಪಾತ್ರಕ್ಕೆ ಒಳ್ಳೆಯ ನಟ ಎಂದು ನನಗೆ ಪ್ರಶಸ್ತಿ ಬಂತು. "ಮಂಚದ ಮೇಲಿನ ಮನುಷ್ಯ"ಕ್ಕೂ ಅತ್ಯುತ್ತಮ ನಟ ಪ್ರಶಸ್ತಿ ಬಂದಿತು. ಅದಕ್ಕಾಗಿ ಆ ಹಿರಿಯ ಜೀವಗಳಿಗೆ ನಾನು ಯಾವಾಗಲೂ ಚಿರಋಣಿಯಾಗಿರುತ್ತೇನೆ ಎನ್ನುತ್ತ ಕುರಂದವಾಡ ಹಾಗೂ ಶ್ರೀ ಕೃಷ್ಣಮೂರ್ತಿ ಕಲುಮಂಗಿ ಅವರ ಜೊತೆಗಿನ ಒಡನಾಟವನ್ನು ನೆನೆದರು.

ಶ್ರೀಮತಿ ಸವಿತಾ ಇನಾಮದಾರ ಅವರು ಮಾತನಾಡುತ್ತಾ ಜನಕಪುರಿ ಕನ್ನಡ ಕೂಟದ ಮುಕುಟಮಣಿಗಳಾದ ದಿ. ಎಚ್.ಎಸ್. ಕುಲಕರ್ಣಿ, ದಿ. ಸುಧಾಕರ ಕುರಂದವಾಡ ಮತ್ತು ದಿ. ಕೃಷ್ಣಮೂರ್ತಿ ಕಲುಮಂಗಿ ಈ ಮೂವರಿಗೂ ಹೃದಯದಾಳದಿಂದ ಧನ್ಯವಾದ ಹೇಳ್ತಾ ಇದ್ದೀನಿ. ಕುಲಕರ್ಣಿ ಕಾಕಾ ಅವರ ಪ್ರೋತ್ಸಾಹದ ನುಡಿಗಳು ನನ್ನ ಬರವಣಿಗೆಗೆ ಮೆರವಣಿಗೆ ಮಾಡುವ ಕಾರಣ ಸಿಕ್ಕಿತು ಅಂತ ಹೇಳಬಹುದು. ನೀನು ಕಿತ್ತೂರ ಚೆನ್ನಮ್ಮ ಪಾತ್ರಕ್ಕೆ ಅರ್ಹಳು ಎಂದು ನನ್ನನ್ನು ಪ್ರೇರೇಪಿಸಿದ್ದಕ್ಕೆ ನಾನು ಕಿತ್ತೂರಿನ ಕಿರಣ ನಾಟಕವನ್ನು ಬರೆಯಲು ಪ್ರೇರಣೆಯಾಯಿತು. ಕಲುಮಂಗಿ ಕಾಕು ಅಂದರೆ ನಮ್ಮ ತುಳಸಾ ಆಂಟಿ ಎಲೆಮರೆಯ ಕಾಯಿ, ಸದಾ ಅವರ ಜೊತೇಲಿ ಇರುತ್ತಾ ಇದ್ರು. ಹಾಗೇನೇ ಇವತ್ತು ಕಲ್ಪನಾಳನ್ನೂ ನೆನೆಯುತ್ತೇನೆ. ಇವತ್ತು ಅವಳ ಕೊರತೆ ತುಂಬಾ ಭಾಸವಾಗುತ್ತಾ ಇದೆ." ಎಂದರು.

ಶ್ರೀ ಕೃಷ್ಣಮೂರ್ತಿ ಕಲುಮಂಗಿ ಅವರು ಚಿಕ್ಕಂದಿನಿಂದಲೂ ನಾಟಕಗಳಲ್ಲಿ ಭಾಗವಹಿಸುತ್ತಿದ್ದರು. "ಮದುವೆ ತಂದ ಮೋಜು ಗೋಜು" ಹೀಗೆ ಚಿಕ್ಕ ಕತೆಗಳು, ಚುಟುಕುಗಳು, ಕವನಗಳು, ನಾಟಕಗಳು ಮತ್ತು ಹಾಸ್ಯ ರಚನೆಗಳು ಹೀಗೆ ಹಲವಾರು ಸಂಕಲನಗಳನ್ನು ರಚಿಸಿದರು.

ಸುಮಾರು ನಾಟಕಗಳು, ಕವನಗಳನ್ನು ತೆಲುಗಿನಿಂದ ಕನ್ನಡಕ್ಕೆ, ಕನ್ನಡ ಭಾಷೆಯಿಂದ ತೆಲುಗು ಭಾಷೆಗೆ ಅನುವಾದ ಮಾಡಿದರು. ಶ್ರೀ ಕಲುಮಂಗಿ ಅವರ ಪತ್ನಿ ತುಳಸಾ ಅವರೂ ಅನುವಾದ ಮಾಡುವಲ್ಲಿ ಅವರಿಗೆ ಸಹಾಯ ಮಾಡುತ್ತಿದ್ದರು. ತುಳಸಾ ಅವರೂ "ಕೃಷ್ಣ ತುಳಸಿ" ಕಾವ್ಯನಾಮದಲ್ಲಿ ಕಥೆ, ಕವನಗಳನ್ನು ರಚಿಸಿದ್ದಾರೆ.

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಡಾ. ಅಶೋಕ ಈಟಿಯವರು ಮೂವರು ದಿವಂಗತ ದಿಗ್ಗಜರ ನೆನಪಿಗಾಗಿ ವಿಶೇಷವಾಗಿ ಜನಕಪುರಿ ಕನ್ನಡ ಕೂಟದ 50ನೇ ವರ್ಷದ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘ ಇಂತಹದ್ದೊಂದು ಕಾರ್ಯಕ್ರಮ ಏರ್ಪಡಿಸಿದ್ದಕ್ಕೆ ಹೃತ್ಪೂರ್ವಕ ಅಭಿನಂದನೆಗಳನ್ನು ಹಾಗು ದೆಹಲಿ ಕರ್ನಾಟಕ ಸಂಘದ ಆಡಳಿತ ಮಂಡಳಿ ಹಾಗೂ ಶ್ರೀ ವಸಂತ ಶೆಟ್ಟಿ ಅವರಿಗೆ ಧನ್ಯವಾದಗಳನ್ನು ತಿಳಿಸಿದರು.

ಕಾರ್ಯಕ್ರಮ ಅಧ್ಯಕ್ಷತೆ ವಹಿಸಿದ್ದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಮಾತನಾಡುತ್ತ, ಜನಕಪುರಿ ಕನ್ನಡ ಕೂಟದ ಮಾಜಿ ಮೂರು ರತ್ನಗಳಾದ ದಿ. ಶ್ರೀ ಕುಲಕರ್ಣಿ, ದಿ. ಶ್ರೀ ಕುರುಂದವಾಡ ಹಾಗೂ ದಿ. ಶ್ರೀ ಕಲುಮಂಗಿಯವರನ್ನು ಸ್ಮರಿಸುತ್ತ ಅವರು ಸಾಹಿತ್ಯ, ಸಾಂಸ್ಕೃತಿಕ ಕ್ಷೇತ್ರಕ್ಕೆ ನೀಡಿದ ಅಮೂಲ್ಯವಾದ ಸೇವೆಯನ್ನು ಕೊಂಡಾಡಿದರು. ಆ ಮೂವರೂ ಬರೆದ ಅನೇಕ ಕಥೆ, ಕಾದಂಬರಿ, ಕವನ ಹಾಗೂ ನಾಟಕಗಳನ್ನು ತಾವು ಪ್ರಕಟಿಸಿದ ಬಗ್ಗೆ ಮಾಹಿತಿ ನೀಡಿದರು. ಸಂಜೆಯ ಉಪಹಾರದೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು. ❑

ಆತ್ಮೀಯ ಸದಸ್ಯರೇ,

ದೆಹಲಿ ಕರ್ನಾಟಕ ಸಂಘದಿಂದ 2025–26ನೇ ಸಾಲಿಗಾಗಿ ನೀಡುವ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿಗಳನ್ನು ಕರೆಯಲಾಗಿದೆ.

ಸಂಘದ ಸದಸ್ಯರು ಅರ್ಜಿಯನ್ನು ಸಂಘದ ಕಾರ್ಯಾಲಯದಿಂದ ಪಡೆಯಬಹುದು. ಭರ್ತಿ ಮಾಡಿದ ಅರ್ಜಿಯನ್ನು **09 ನವೆಂಬರ್ 2026 ರೊಳಗಾಗಿ** ಸಂಘದ ಕಾರ್ಯಾಲಯಕ್ಕೆ ತಲುಪಿಸಬೇಕು. ಹೆಚ್ಚಿನ ವಿವರಗಳಿಗೆ ಸಂಘದ ಕಚೇರಿಯನ್ನು ಸಂಪರ್ಕಿಸಬಹುದು.

ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

ರಾಧಾಕೃಷ್ಣ
ಪ್ರಧಾನ ಕಾರ್ಯದರ್ಶಿ

ನಗೆಗಡಲಲ್ಲಿ ತೇಲಿಸಿದ 'ಮುದ್ದಣ್ಣನ ಪ್ರಮೋಷನ್ ಪ್ರಸಂಗ'



ನವದೆಹಲಿಯ 'ಡೆಲ್ಲಿ ಫ್ರೆಂಡ್ಸ್' ರಂಗತಂಡವು ದೆಹಲಿ ಕರ್ನಾಟಕ ಸಂಘದ ಸಹಯೋಗದಲ್ಲಿ ಪ್ರಸ್ತುತಪಡಿಸಿದ ಹಾಸ್ಯ ನಾಟಕ 'ಮುದ್ದಣ್ಣನ ಪ್ರಮೋಷನ್ ಪ್ರಸಂಗ' ದೆಹಲಿ ಕನ್ನಡಿಗರನ್ನು ರಂಜಿಸುವಲ್ಲಿ ಯಶಸ್ವಿಯಾಗಿದೆ. ಅಪ್ಪಟ ಕನ್ನಡಿಗ, ಅನುಭವಿ ರಂಗಕರ್ಮಿ ಶ್ರೀ ಟಿ.ಎಂ. ಮೈಲಾರಪ್ಪ ಅವರ ಸಮರ್ಥ ನಿರ್ದೇಶನದಲ್ಲಿ 03–10–2026ರಂದು ಸಂಜೆ ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಪ್ರದರ್ಶನಗೊಂಡ ಈ ನಾಟಕವನ್ನು ವೀಕ್ಷಿಸಿ ಬಹಳ ಸಂತೋಷವಾಯಿತು. ಡೆಲ್ಲಿ ಫ್ರೆಂಡ್ಸ್ ರಂಗತಂಡದ ಕಲಾವಿದರು ತಮ್ಮ ಮನೋಜ್ಞ ಅಭಿನಯದ ಮೂಲಕ ದೆಹಲಿ ಕನ್ನಡಿಗರು ಹಾಗೂ ಸ್ಥಳೀಯ ನಾಟಕಪ್ರಿಯರನ್ನು ನಗೆಗಡಲಲ್ಲಿ ತೇಲಿಸಿ, ಅಪಾರ ಕರತಾಡನಗಳನ್ನು ಗಳಿಸಿದ್ದು ವಿಶೇಷ.

ದೆಹಲಿಯ ಹವ್ಯಾಸಿ ಕಲಾವಿದರ ಜೊತೆಗೆ ಮೊದಲ ಬಾರಿಗೆ ರಂಗಭೂಮಿಗೆ ಪ್ರವೇಶಿಸಿದ ಸ್ಥಳೀಯ ಪ್ರತಿಭೆಗಳೂ ಅತ್ಯುತ್ತಮ ಅಭಿನಯದ ಮೂಲಕ ಗಮನ ಸೆಳೆದರು. ಮಧ್ಯಮ ವರ್ಗದ ಸಾಮಾನ್ಯ ನೌಕರನೊಬ್ಬ ತನ್ನ ಉದ್ಯೋಗದಲ್ಲಿ ಬಡ್ತಿ ಪಡೆಯಲು, ಆಪ್ತ ಸ್ನೇಹಿತನ ಸಲಹೆಯಂತೆ ಮತ್ತೊಬ್ಬ ನೌಕರ ಅನುಸರಿಸಿದ ವಿಧಾನವನ್ನು ಅನುಕರಿಸಲು ಹೋಗಿ ಪೇಚಿಗೆ ಸಿಲುಕುವ ಕಥಾವಸ್ತು ನಾಟಕದ ಹಾಸ್ಯದ ಮೂಲ ಸೆಲೆ. ಈ ಪ್ರಯತ್ನದಿಂದ ಎದುರಾಗುವ ಗೊಂದಲಗಳು, ಮುಜುಗರಗಳು ಮತ್ತು ಹಾಸ್ಯಾಸ್ಪದ ಸನ್ನಿವೇಶಗಳನ್ನು ರಂಗದ ಮೇಲೆ ಪರಿಣಾಮಕಾರಿಯಾಗಿ ಕಟ್ಟಿಕೊಟ್ಟಿರುವುದು ಪ್ರಶಂಸನೀಯ.

ನಾಟಕದ ಕೇಂದ್ರ ಪಾತ್ರವಾದ ಮುದ್ದಣ್ಣನಾಗಿ ಶ್ರೀ ಗಣೇಶ ಡಿ. ಹಾಗೂ ಆತನ ಆಪ್ತ ಸ್ನೇಹಿತನಾಗಿ ಶ್ರೀ ಸುರೇಶ್ ದೇವರು ಎಚ್.ಎಂ. ಅವರು ಮೊದಲ ಬಾರಿಗೆ ನಾಟಕದಲ್ಲಿ ಅಭಿನಯಿಸಿದ್ದರೂ, ತಮ್ಮ ಸಹಜ ಮತ್ತು ಪರಿಣಾಮಕಾರಿ ಅಭಿನಯದಿಂದ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರರಾದರು. ನಾಟಕದ ವಿವಿಧ ಸನ್ನಿವೇಶಗಳಲ್ಲಿ ಮುದ್ದಣ್ಣ ಹಠಾತ್ತನೆ ಧೊಪ್ಪನೆ ಕೆಳಗೆ ಬಿದ್ದು ಮೂರ್ಛೆ ಹೋದಂತೆ ನಟಿಸುವ ದೃಶ್ಯಗಳಂತೂ ನನ್ನನ್ನು ಬಿದ್ದುಬಿದ್ದು ನಗುವಂತೆ ಮಾಡಿದವು.

ಮುದ್ದಣ್ಣನ ಮೇಲಧಿಕಾರಿಯಾಗಿ ಶ್ರೀ ನಾಗರಾಜ ಎಂ., ಸಹೋದ್ಯೋಗಿಯಾಗಿ ಶ್ರೀ ರಾಜಣ್ಣ ಡಿ. ಬಿರಾದಾರ್, ಮುದ್ದಣ್ಣನ ಪತ್ನಿಯಾಗಿ ಶ್ರೀಮತಿ ಮಮತ ಪ್ರವೀಣ್ ಹಾಗೂ ಬಾಡಿಗೆ ಪತ್ನಿಯ ಪಾತ್ರದಲ್ಲಿ ಅನುಭವಿ ಮತ್ತು ಪ್ರತಿಭಾವಂತ ಕಲಾವಿದೆ ಶ್ರೀಮತಿ ಅಶ್ವಿನಿ ಬಿ.ಎಸ್. ತಮ್ಮ ಪಾತ್ರಗಳಿಗೆ ನ್ಯಾಯ ಒದಗಿಸಿದ್ದಾರೆ. ಕಚೇರಿಯ ಸಹಾಯಕನಾಗಿ ಯುವ ಕಲಾವಿದ ಶ್ರೀ ನವೀನ್ ಕುಮಾರ್ ವಿ., ಮತ್ತು ಮುನಿರಾಜ ಮತ್ತು ಸುಬ್ಬುವಿನ ಪಾತ್ರಧಾರಿ ಶೀಗರಾಜು ಉತ್ಸಾಹದಿಂದ ಅಭಿನಯಿಸಿ ಗಮನ ಸೆಳೆದಿದ್ದಾರೆ. ಇತರ ಪಾತ್ರದಲ್ಲಿ ಶ್ರೀ ಮಂಜುನಾಥ್ ಕೆ.ಎನ್. ಹಾಗೂ ಸೂತ್ರಧಾರನಾಗಿ ಶ್ರೀ ಎಚ್.ಎಸ್. ತೇಲಿ ನಾಟಕದ ಯಶಸ್ಸಿಗೆ ತಮ್ಮ ಕೊಡುಗೆ ನೀಡಿದ್ದಾರೆ.

'ಮುದ್ದಣ್ಣನ ಪ್ರಮೋಷನ್ ಪ್ರಸಂಗ'

ರಚನೆ : ರಾಜೇಂದ್ರ ಕಾರಂತ್

ನಿರ್ದೇಶನ : ಮೈಲಾರಪ್ಪ ತಾವರೆಕೆರೆ

ರಂಗದ ಮೇಲೆ :

ಅಶ್ವಿನಿ ಬಿ.ಎಸ್., ಮಮತ ಪ್ರವೀಣ್
ಸುರೇಶ್ ದೇವರು ಹೆಚ್.ಎಂ.
ಗಣೇಶ ಡಿ., ನಾಗರಾಜ ಎಂ.
ರಾಜಣ್ಣ ಡಿ. ಬಿರಾದಾರ್, ಹೆಚ್.ಎಸ್. ತೇಲಿ
ಮಂಜುನಾಥ ಕೆ.ಎಸ್., ನವೀನ್ ಕುಮಾರ್ ವಿ., ಶೀಗರಾಜು

ರಂಗದ ಹಿಂದೆ :

ಕಾರ್ತಿಕ್ ಎನ್., ಸತ್ಯನಾರಾಯಣ, ಸಂತೋಷ ಕೆ.ಕೆ.

ವಸ್ತ್ರಾಲಂಕಾರ: ಕಂಡೂರಿ ಶ್ರಾವಂತಿ

ನಾಟಕದ ಯಶಸ್ಸಿನಲ್ಲಿ ರಂಗದ ಹಿಂದಿನ ತಾಂತ್ರಿಕ ತಂಡದ ಪರಿಶ್ರಮವೂ ಮಹತ್ವದ್ದಾಗಿದೆ. ಶ್ರೀ ಕಾರ್ತಿಕ್ ಎನ್., ಶ್ರೀ ಸತ್ಯನಾರಾಯಣ, ಶ್ರೀ ಸಂತೋಷ ಕೆ.ಕೆ. ಹಾಗೂ ಶ್ರೀಮತಿ ಕಂಡೂರಿ ಶ್ರಾವಂತಿ ಅವರ ತಾಂತ್ರಿಕ ಕೊಡುಗೆ ಗಮನಾರ್ಹವಾಗಿತ್ತು. ಆಕರ್ಷಕ ರಂಗಸಜ್ಜಿಕೆ, ವಸ್ತುವಿನ್ಯಾಸ, ಬೆಳಕಿನ ಸಂಯೋಜನೆ ಹಾಗೂ ಆಯಾ ಸನ್ನಿವೇಶಗಳಿಗೆ ತಕ್ಕಂತೆ ಬಳಸಿದ ಡಿಜಿಟಲ್ ಹಿನ್ನೆಲೆ ಪರದೆ ನಾಟಕದ ದೃಶ್ಯಾನುಭವವನ್ನು ಮತ್ತಷ್ಟು ಪರಿಣಾಮಕಾರಿಯಾಗಿಸಿತ್ತು.

ಅನುಭವಿ ಹವ್ಯಾಸಿ ಕಲಾವಿದರೊಂದಿಗೆ ಹೊಸದಾಗಿ ರಂಗಪ್ರವೇಶ ಮಾಡಿದ ಕಲಾವಿದರೂ ಸಂಭಾಷಣೆಗಳನ್ನು ಸರಾಗವಾಗಿ ಮತ್ತು ಆತ್ಮವಿಶ್ವಾಸದಿಂದ ನಿರ್ವಹಿಸಿದ್ದು ಮೆಚ್ಚುಗೆಗೆ ಅರ್ಹ. ಪ್ರತಿಯೊಂದು ಹಾಸ್ಯ ಸನ್ನಿವೇಶದ ಬಳಿಕವೂ ಸಭಾಂಗಣದಲ್ಲಿ ಮೊಳಗುತ್ತಿದ್ದ ಪ್ರೇಕ್ಷಕರ ನಗೆ ಮತ್ತು ಚಪ್ಪಾಳೆಗಳು ನಾಟಕದ ಜನಪ್ರಿಯತೆಗೆ ಸಾಕ್ಷಿಯಾಗಿದ್ದವು.

ಸ್ವತಃ ಕಲಾವಿದರಾಗಿ ಹಾಗೂ ಅನುಭವಿ ನಿರ್ದೇಶಕರಾಗಿ ದೆಹಲಿಯ ರಂಗವಲಯದಲ್ಲಿ ಗುರುತಿಸಿಕೊಂಡಿರುವ ಶ್ರೀ ಟಿ.ಎಂ. ಮೈಲಾರಪ್ಪ ಅವರ ದಕ್ಷ ನಿರ್ದೇಶನದಲ್ಲಿ ಮೂಡಿಬಂದ 'ಮುದ್ದಣ್ಣನ ಪ್ರಮೋಷನ್ ಪ್ರಸಂಗ' ದೆಹಲಿ ಕರ್ನಾಟಕ ಸಂಘದ ವೇದಿಕೆಯಲ್ಲಿ ಪ್ರದರ್ಶನಗೊಂಡ ಯಶಸ್ವಿ ನಾಟಕಗಳ ಸಾಲಿಗೆ ಸೇರುವುದರಲ್ಲಿ ಸಂದೇಹವಿಲ್ಲ. ಕಥಾವಸ್ತುವಿನ ಹಾಸ್ಯ, ಕಲಾವಿದರ ಸಹಜ ಅಭಿನಯ ಮತ್ತು ತಾಂತ್ರಿಕ ತಂಡದ ಸಮನ್ವಯ ಈ ಯಶಸ್ಸಿಗೆ ಕಾರಣವಾಗಿವೆ.

ನಿರ್ದೇಶಕ ಶ್ರೀ ಟಿ.ಎಂ. ಮೈಲಾರಪ್ಪ, ಡೆಲ್ಲಿ ಫ್ರೆಂಡ್ಸ್ ರಂಗತಂಡದ ಎಲ್ಲ ಕಲಾವಿದರು, ತಾಂತ್ರಿಕ ವರ್ಗದವರಿಗೆ ಹಾಗೂ ಈ ನಾಟಕವನ್ನು ವೀಕ್ಷಿಸಿ ಪ್ರೋತ್ಸಾಹಿಸಿದ ದೆಹಲಿ ಕನ್ನಡಿಗರಿಗೆ ಅಭಿನಂದನೆಗಳು. ಒಟ್ಟಿನಲ್ಲಿ, ಉತ್ತಮ ಹಾಸ್ಯ ನಾಟಕವೊಂದನ್ನು ವೀಕ್ಷಿಸಿದ ತೃಪ್ತಿ ಮತ್ತು ಸಂತೋಷ ನನ್ನದಾಯಿತು.❑

ಕೆ.ಎಸ್. ಮೂರ್ತಿ ನವದೆಹಲಿ



ರಾಷ್ಟ್ರ ರಾಜಧಾನಿಯಲ್ಲಿ ಜನಕಪುರಿ ಕನ್ನಡ ಕೂಟದ ಸುವರ್ಣ ಮಹೋತ್ಸವ ಸಂಭ್ರಮ



ದೆಹಲಿಯ ಪ್ರತಿಷ್ಠಿತ ಕನ್ನಡ ಸಂಸ್ಥೆಗಳಲ್ಲೊಂದಾದ ಜನಕಪುರಿ ಕನ್ನಡ ಕೂಟದ (ಜೆ.ಕೆ.ಕೆ.) 50 ವರ್ಷಗಳ ಸುವರ್ಣ ಮಹೋತ್ಸವ ಆಚರಣೆಯು 4 ಅಕ್ಟೋಬರ್ 2026 ರಂದು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಅತ್ಯಂತ ವೈಭವ ಮತ್ತು ಸಡಗರದಿಂದ ಜರುಗಿತು. ಕಳೆದ ಅರ್ಧ ಶತಮಾನದಿಂದ ರಾಷ್ಟ್ರ ರಾಜಧಾನಿಯಲ್ಲಿ ಕನ್ನಡ ಭಾಷೆ, ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಯ ಛಾಪು ಮೂಡಿಸುತ್ತಾ ಬಂದಿರುವ ಈ ಸಂಸ್ಥೆಯು ತನ್ನ ಐತಿಹಾಸಿಕ ಮೈಲಿಗಲ್ಲನ್ನು ವಿಜೃಂಭಣೆಯಿಂದ ಆಚರಿಸಿಕೊಂಡಿತು. ನಾಡಗೀತೆಯೊಂದಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಅಧಿಕೃತ ಚಾಲನೆ ನೀಡಲಾಯಿತು.

ಶ್ರೀಮತಿ ಪ್ರೇರಣಾ ವೆಂಕಟೇಶ್ ಅವರ ಪ್ರಾರ್ಥನೆಯ ನಂತರ ಗಣ್ಯರಿಂದ ದೀಪ ಪ್ರಜ್ವಲನೆಯೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಕೂಟದ ಕಾರ್ಯದರ್ಶಿಗಳಾದ ಡಾ. ಬಸವರಾಜ್ ಎಲ್ಲರನ್ನೂ ಆದರದಿಂದ ಸ್ವಾಗತಿಸಿದರು. ಜಂಟಿ ಕಾರ್ಯದರ್ಶಿ ಶ್ರೀ ಕೃಷ್ಣರಾಜ್ ಮತ್ತು ಶ್ರೀ ಸಂಜೀವ ದೇಶಪಾಂಡೆ ಅವರು ಮುಖ್ಯ ಅತಿಥಿಗಳನ್ನು ಮತ್ತು ಗೌರವಾನ್ವಿತ ಅತಿಥಿಗಳನ್ನು ಸಭೆಗೆ ಪರಿಚಯಿಸಿದರು. ಜನಕಪುರಿ ಕನ್ನಡ ಕೂಟದ ಉಪಾಧ್ಯಕ್ಷರಾದ ಡಾ. ಎಸ್.ಎಲ್. ಭಂಡಾರಕರ್ ಅವರು ಜನಕಪುರಿ ಕನ್ನಡ ಕೂಟ 50 ವರ್ಷ ನಡೆದು ಬಂದ ದಾರಿ ವಿಶೇಷವಾಗಿ "ಬೆಳ್ಳಿ ಮಹೋತ್ಸವದಿಂದ ಸುವರ್ಣ ಮಹೋತ್ಸವದವರೆಗೆ" ಎಂಬ ವಿಷಯದ ಬಗ್ಗೆ ಮಾತನಾಡಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಬ್ರಹ್ಮೋಸ್ ಸಂಸ್ಥೆಯ ಮಹಾ ನಿರ್ದೇಶಕರಾದ (DG Brahmos) ಡಾ. ಜಯತೀರ್ಥ ಆರ್. ಜೋಶಿ ಅವರು ಮತ್ತು ಗೌರವಾನ್ವಿತ ಅತಿಥಿಗಳಾಗಿ ಶ್ರೀ ಬಸವರಾಜ ದೇಸಳ್ಳಿ ಅವರು ಆಗಮಿಸಿದ್ದರು. ವೇದಿಕೆಯ ಮೇಲೆ ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಉಪಸ್ಥಿತರಿದ್ದು ಪ್ರಾಸಂಗಿಕವಾಗಿ ಮಾತನಾಡಿದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಜನಕಪುರಿ ಕನ್ನಡ ಕೂಟದ ಅಧ್ಯಕ್ಷರಾದ ಡಾ. ಅಶೋಕ್ ಎಂ. ಈಟಿ ಅವರು ಅಧ್ಯಕ್ಷೀಯ ಭಾಷಣ ಮಾಡಿದರು.

ಮುಖ್ಯ ಅತಿಥಿಗಳು ಮತ್ತು ಗೌರವಾನ್ವಿತ ಅತಿಥಿಗಳು ಸಭೆಯನ್ನುದ್ದೇಶಿಸಿ ಮಾತನಾಡಿ, ಹೊರನಾಡಿನಲ್ಲಿ ಕನ್ನಡದ ಅಸ್ಮಿತೆಯನ್ನು ಉಳಿಸಿ ಬೆಳೆಸುವಲ್ಲಿ ಕೂಟವು ಮಾಡುತ್ತಿರುವ 50 ವರ್ಷಗಳ ನಿರಂತರ ಸೇವೆಯನ್ನು ಶ್ಲಾಘಿಸಿದರು. ಸಮಾರಂಭದ ನಿರ್ವಹಣೆ ಮತ್ತು ನಿರೂಪಣೆಯನ್ನು ಡಾ. ಎಸ್.ಎಲ್. ಭಂಡಾರಕರ್ ಅವರು ಅತ್ಯಂತ ಅಚ್ಚುಕಟ್ಟಾಗಿ ನಡೆಸಿಕೊಟ್ಟರು. ಕೊನೆಯಲ್ಲಿ ಶ್ರೀ ಎಂ.ವಿ. ವೆಂಕಟೇಶ್ ಅವರು ವಂದನಾರ್ಪಣೆ ಸಲ್ಲಿಸಿದರು.

ಇಡೀ ದಿನ ನಡೆದ ಈ ಸುವರ್ಣ ಸಂಭ್ರಮದಲ್ಲಿ ಜನಕಪುರಿ ಸುವರ್ಣ ಮಹೋತ್ಸವ ಆಚರಣೆಯ ಎಲ್ಲ ಸಮಿತಿ ಸದಸ್ಯ–ಸದಸ್ಯೆಯರನ್ನು ವೇದಿಕೆ ಮೇಲೆ ಕರೆದು ಸನ್ಮಾನಿಸಲಾಯಿತು. ತದನಂತರ ಜನಕಪುರಿ ಮಹಿಳಾ ಮಂಡಳಿಯ ಸದಸ್ಯರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು, ಜನಕಪುರಿ ಮಹಿಳಾ ಮಂಡಳಿಯ ಕಾರ್ಯದರ್ಶಿ ಶ್ರೀಮತಿ ಪವಿತ್ರಾ ತಾಮ್ಹಣಕರ್ ಹಾಗೂ ಶ್ರೀಮತಿ ಲಾವಣ್ಯ ಬಸವರಾಜ್ ಬಹಳ ಅಚ್ಚುಕಟ್ಟಾಗಿ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

ಸುವರ್ಣ ಮಹೋತ್ಸವದ ಅಂಗವಾಗಿ ಅಂದು ಮಧ್ಯಾಹ್ನ ಆಯೋಜಿಸಲಾಗಿದ್ದ ಸಾಂಸ್ಕೃತಿಕ ಕಾರ್ಯಕ್ರಮಗಳು ಸಭಿಕರನ್ನು ಮಂತ್ರಮುಗ್ಧಗೊಳಿಸಿದವು. ಮಕ್ಕಳಾದ ಧನುಶ್ರೀ, ವೈಷ್ಣವಿ ಸಾವಕಾರ್, ಅವನಿ ನೆಲ್ಲಿ ಅವರ ನೃತ್ಯ ಪ್ರೇಕ್ಷಕರ ಮನ ಮುಟ್ಟಿತು. ಹಾಗೆಯೇ ಆರಂಭದಲ್ಲಿ ಜನಕಪುರಿ ಮಹಿಳಾ ಮಂಡಳಿಯ ಸದಸ್ಯರಾದ ಶ್ರೀಮತಿ ಪ್ರೇರಣಾ ವೆಂಕಟೇಶ್, ಶ್ರೀಮತಿ ಮಾಲಿನಿ ಪ್ರಹ್ಲಾದ್, ಶ್ರೀಮತಿ ಸವಿತಾ ಇನಾಮದಾರ್ ಮತ್ತು ಶ್ರೀಮತಿ ಜಯಶ್ರೀ ಬಸವರಾಜ್ ಅವರ ನೇತೃತ್ವದ ತಂಡಗಳು ವಿವಿಧ ಜನಪ್ರಿಯ ಕನ್ನಡ ಗೀತೆಗಳನ್ನು ಸುಮಧುರವಾಗಿ ಪ್ರಸ್ತುತಪಡಿಸಿದವು. ಇಡೀ ಸಭೆಯನ್ನು ಸಂಗೀತ ಸುಧೆಯಲ್ಲಿ ತೇಲಿಸಿದ ಈ ಗಾಯನ ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ಪವಿತ್ರಾ ತಾಮ್ಹಣಕರ್ ಅವರು ನಡೆಸಿಕೊಟ್ಟರು.

ಇದಲ್ಲದೇ ರಾಷ್ಟ್ರ ರಾಜಧಾನಿ ವಲಯದ (Delhi/NCR) ವಿವಿಧ ಪ್ರಮುಖ ಕನ್ನಡ ಸಂಘಟನೆಗಳು ಹಾಗೂ ಮಂಡಳಿಗಳು ಒಗ್ಗೂಡಿ ನಡೆಸಿಕೊಟ್ಟ ಸಾಂಸ್ಕೃತಿಕ ಮಹೋತ್ಸವದ ಈ ಭವ್ಯ ಕಲಾ ಪ್ರದರ್ಶನದಲ್ಲಿ ಸ್ವರಾಂಜಲಿ ತಂಡ, ಗೋಕರ್ಣ ಮಂಡಲ, ದೆಹಲಿ ಕನ್ನಡ ಶಾಲೆ, ಕನ್ನಡ ಕಲಿಕಾ ಕೇಂದ್ರ, ಗುರುಗ್ರಾಮ ಕನ್ನಡ ಸಂಘ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್, ದೆಹಲಿ ಪೊಲೀಸ್ ಕಲ್ಯಾಣ ಸಮಿತಿ, ದೆಹಲಿ ತುಳುಸಿರಿ, ಕಲ್ಯಾಣ ಕರ್ನಾಟಕ ಟ್ರಸ್ಟ್ ಹಾಗೂ ದೆಹಲಿ ಒಕ್ಕಲಿಗ ಗೌಡ ಸಂಘದ ಕಲಾತಂಡಗಳು ಅತ್ಯಂತ ಉತ್ಸಾಹದಿಂದ ಪಾಲ್ಗೊಂಡು ಜಾನಪದ, ನೃತ್ಯ ಮತ್ತು ಗಾಯನದ ಮೂಲಕ 'ಕನ್ನಡತನ'ದ ಭವ್ಯ ಪರಂಪರೆಯನ್ನು ಪ್ರಸ್ತುತಪಡಿಸಿದರು. ಶ್ರೀಮತಿ ಮಾಲಿನಿ ಪ್ರಹ್ಲಾದ್, ಶ್ರೀಮತಿ ಲಾವಣ್ಯ ಬಸವರಾಜ್ ಮತ್ತು ಶ್ರೀಮತಿ ವೈಜಯಂತಿ ಅವರು ಜಂಟಿಯಾಗಿ ಕಾರ್ಯಕ್ರಮವನ್ನು ನಿರೂಪಿಸಿದರು.

ತದನಂತರ 'ಅವ್ಯಾವ್ರ ಗಂಡ' ಹಾಸ್ಯ ನಾಟಕವು ಸಭಿಕರ ಮನಸೂರೆಗೊಂಡಿತು. ಕನ್ನಡ ರಂಗಭೂಮಿಯ ಖ್ಯಾತ ಕಲಾವಿದರಾದ ಶ್ರೀ ಮೂಗು ಸುರೇಶ್ ಅವರು ರಚಿಸಿ, ನಿರ್ದೇಶಿಸಿ, ಮುಖ್ಯ ಪಾತ್ರದಲ್ಲಿ ಅಭಿನಯಿಸಿದ ಈ ಹಾಸ್ಯ ನಾಟಕವು ಇಡೀ ಸಭಾಂಗಣವನ್ನು ನಗೆಯಲೆಯಲ್ಲಿ ತೇಲಿಸಿತು.

ಶ್ರೀ ಮೂಗು ಸುರೇಶ್ ಅವರೊಂದಿಗೆ ದೆಹಲಿಯ ಜನಪ್ರಿಯ ಕಲಾವಿದರಾದ ಶ್ರೀಮತಿ ಅಶ್ವಿನಿ ಬಿ.ಎಸ್. ಮತ್ತು ಕಂಚಿನ ಕಂಠದ ನಟ ಶ್ರೀ ಸಂಜೀವ ದೇಶಪಾಂಡೆ ಅವರು ತಮ್ಮ ಅದ್ಭುತವಾದ ನಟನಾ ಕೌಶಲ್ಯ ಹಾಗೂ ಅತ್ಯುತ್ತಮ ಟೈಮಿಂಗ್ ಮೂಲಕ ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲಿಸಿದರು. ಸತತವಾಗಿ ಮೂಡಿ ಬಂದ ಹಾಸ್ಯ ಪ್ರಸಂಗಗಳು, ಚುರುಕಾದ ಸಂಭಾಷಣೆಗಳು ಮತ್ತು ಕಲಾವಿದರ ಜೀವಂತ ಅಭಿನಯವು ಸಭಿಕರನ್ನು ಮಂತ್ರಮುಗ್ಧಗೊಳಿಸಿತು. ನಾಟಕದ ಪ್ರತಿ ದೃಶ್ಯಕ್ಕೂ ಸಭಾಂಗಣದಲ್ಲಿ ನೆರೆದಿದ್ದ ನೂರಾರು ಕನ್ನಡಿಗರು ಜೋರಾದ ಚಪ್ಪಾಳೆ ಹಾಗೂ ಹರ್ಷೋದ್ಗಾರಗಳ ಮೂಲಕ ಮೆಚ್ಚುಗೆ ವ್ಯಕ್ತಪಡಿಸಿದರು. ಸುವರ್ಣ ಮಹೋತ್ಸವದ ಇಡೀ ದಿನದ ಕಾರ್ಯಕ್ರಮಗಳಿಗೆ ಈ ನಾಟಕವು ಮರೆಯಲಾಗದ ಸಾಂಸ್ಕೃತಿಕ ರಸದೌತಣವನ್ನು ನೀಡಿತು.

ಬಳಿಕ ಜನಕಪುರಿ ಮಹಿಳಾ ಮಂಡಳಿಯ



ವತಿಯಿಂದ ಪ್ರಸ್ತುತಪಡಿಸಲಾದ ಎರಡು ವಿಶೇಷ ನೃತ್ಯ ರೂಪಕಗಳು ಪ್ರೇಕ್ಷಕರ ಮನ ಗೆಲ್ಲುವಲ್ಲಿ ಸಂಪೂರ್ಣ ಯಶಸ್ವಿಯಾದವು. ಮೊದಲನೆಯದಾಗಿ ಡಾ. ರೂಪಶ್ರೀ ಈಟಿ ಅವರ ನೇತೃತ್ವದ ನೃತ್ಯ ತಂಡವು ನಮ್ಮ ಕರ್ನಾಟಕದ ಪ್ರತಿಯೊಂದು ಜಿಲ್ಲೆಯ ವಿಶೇಷತೆಯನ್ನು ಒಳಗೊಂಡ ಹಾಡುಗಳನ್ನು ಹಾಗೂ ಅಲ್ಲಿಯ ಸೊಬಗನ್ನು ವರ್ಣಿಸುತ್ತ ಅತ್ಯಂತ ಲಯಬದ್ಧ ಹಾಗೂ ಆಕರ್ಷಕ ನೃತ್ಯವನ್ನು ಪ್ರಸ್ತುತಪಡಿಸಿ ಸಭಿಕರ ಮೆಚ್ಚುಗೆಗೆ ಪಾತ್ರವಾಯಿತು.

ಎರಡನೇಯದಾಗಿ ಸವಿತಾ ನೆಲ್ಲಿ ತಂಡದ ಶಾಸ್ತ್ರೀಯ ನೃತ್ಯಕ್ಕೆ ದೆಹಲಿ ಕನ್ನಡಿಗರು ಮಂತ್ರಮುಗ್ಧರಾದರು. ಶಾಸ್ತ್ರೀಯ ಶೈಲಿಯಲ್ಲಿ ಮೂಡಿಬಂದ ಈ ನೃತ್ಯ ರೂಪಕ, ವೈಭವಕ್ಕೆ ಇಡೀ ಸಭಾಂಗಣವು ಎದ್ದು ನಿಂತು ದೀರ್ಘ ಕರತಾಡನದ ಮೂಲಕ ಗೌರವ ಸಲ್ಲಿಸಿತು. ಈ ಎರಡೂ ಅಪೂರ್ವ ನೃತ್ಯ ಪ್ರದರ್ಶನಗಳು ಸುವರ್ಣ ಮಹೋತ್ಸವದ ಇತಿಹಾಸದಲ್ಲಿ ಒಂದು ಮೈಲಿಗಲ್ಲಾಗಿ ಉಳಿಯುತ್ತವೆ.

ಈ ಸುವರ್ಣ ಮಹೋತ್ಸವದ ಐತಿಹಾಸಿಕ ಸಮಾರಂಭದಲ್ಲಿ, ದೆಹಲಿ ಮತ್ತು ರಾಷ್ಟ್ರೀಯ ರಾಜಧಾನಿ ವಲಯದ (Delhi/NCR) ವಿವಿಧ ಕನ್ನಡ ಸಂಘಟನೆಗಳ ಮುಖಂಡರು ಹಾಗೂ ಸಂಸ್ಥೆಯನ್ನು ಕಟ್ಟಿ ಬೆಳೆಸಿದ ಹಿರಿಯ ಪದಾಧಿಕಾರಿಗಳಿಗೆ ಶಲ್ಯ ಹೊದಿಸಿ, ಸ್ಮರಣಿಕೆಗಳನ್ನು ನೀಡಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ವೇದಿಕೆಯ ಮೇಲೆ ಹಿರಿಯರಾದ ಶ್ರೀಮತಿ ಉಮಾ ರಾವ್ ಮತ್ತು ಮುಖ್ಯ ಅತಿಥಿ ಡಾ. ಜಯತೀರ್ಥ ಆರ್. ಜೋಶಿ ಅವರು ಉಪಸ್ಥಿತರಿದ್ದರು. ಕೂಟದ ಮಾಜಿ ಅಧ್ಯಕ್ಷರಾದ ಶ್ರೀ ಎನ್.ಆರ್. ಶ್ರೀನಾಥ್ ಅವರು ಈ ಸಮಾರಂಭದ ನಿರೂಪಣೆಯನ್ನು ಅತ್ಯಂತ ಯಶಸ್ವಿಯಾಗಿ ನಡೆಸಿಕೊಟ್ಟರು.

ಇದರ ಜೊತೆಗೆ ಸಂಸ್ಥೆಯ ಬೆಳವಣಿಗೆಗಾಗಿ ಶ್ರಮಿಸಿದ ಮಾಜಿ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಹಾಗೂ ಕೂಟದ ಇತಿಹಾಸದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಗಣ್ಯರನ್ನು ಮತ್ತು ಅವರ ಕುಟುಂಬದವರನ್ನು ಈ ಸಂದರ್ಭದಲ್ಲಿ ಗೌರವಿಸಲಾಯಿತು. ಸನ್ಮಾನಿತರಾದ ಪ್ರಮುಖರಲ್ಲಿ ಮಾಜಿ ಅಧ್ಯಕ್ಷ ಶ್ರೀ ಅಗ್ನಿಹೋತ್ರಿ ಅವರ ಧರ್ಮಪತ್ನಿ ಶ್ರೀಮತಿ ಅಗ್ನಿಹೋತ್ರಿ, ಸಂಸ್ಥಾಪಕ ಸದಸ್ಯ ಶ್ರೀ ಬಿ. ಎಸ್. ರಾಮಕೃಷ್ಣ ಅವರ ಪುತ್ರಿ ಶ್ರೀಮತಿ ಉಜ್ವಲ, ಶ್ರೀಮತಿ ಮತ್ತು ಶ್ರೀ ರಘುಪತಿ ತಾಮ್ಹಣಕರ್, ಶ್ರೀ ಎನ್. ಆರ್. ಶ್ರೀನಾಥ್, ಶ್ರೀ ಶೇಷಗಿರಿ ನಾಯ್ಕ್, ಶ್ರೀ ಗಂಗಾಧರ್ ಹಾಗೂ ಮಾಜಿ ಅಧ್ಯಕ್ಷರಾದ ಡಾ. ಬಿ.ಟಿ. ಚಿದಾನಂದ ಮೂರ್ತಿ ಅವರು ಸೇರಿದ್ದಾರೆ. ಹೊರನಾಡಿನಲ್ಲಿ ಕನ್ನಡದ ದೀಪವನ್ನು ನಿರಂತರವಾಗಿ ಬೆಳಗಿಸಿದ ಈ ಸಾಧಕರ ಸೇವೆ ಮತ್ತು ಕೊಡುಗೆಯನ್ನು ಸಭೆಯು ಕೃತಜ್ಞತೆಯಿಂದ ಸ್ಮರಿಸಿತು.



ಸಮಾರೋಪ ಸಮಾರಂಭ

ಈ ಐತಿಹಾಸಿಕ ದಿನದ ಸಮಾರೋಪ ಸಮಾರಂಭದ ಮುಖ್ಯ ಅತಿಥಿಗಳಾಗಿ ಬ್ರಹ್ಮೋಸ್ ಸಂಸ್ಥೆಯ ಮಹಾನಿರ್ದೇಶಕರಾದ (DG Brahmos) ಡಾ. ಜಯತೀರ್ಥ ಆರ್. ಜೋಶಿ ಅವರು ಮತ್ತು ಗೌರವಾನ್ವಿತ ಅತಿಥಿಗಳಾಗಿ ಶ್ರೀ ಬಸವರಾಜ ದೇಸಾಯಿ ಅವರು ಭಾಗವಹಿಸಿದ್ದರು. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ರೇಣುಕುಮಾರ್ ಹಾಗೂ ಜನಕಪುರಿ ಮಹಿಳಾ ಮಂಡಳಿಯ ಅಧ್ಯಕ್ಷರಾದ ಡಾ. ರೂಪಶ್ರೀ ಈಟಿ ಅವರು ವೇದಿಕೆಯ ಮೇಲೆ ಉಪಸ್ಥಿತರಿದ್ದರು.

ಕಾರ್ಯಕ್ರಮದ ಆರಂಭದಲ್ಲಿ ಕೂಟದ ಕಾರ್ಯದರ್ಶಿಗಳಾದ ಡಾ. ಬಸವರಾಜ್ ಅವರು ನೆರೆದಿದ್ದ ಎಲ್ಲಾ ಗಣ್ಯರನ್ನು ಮತ್ತು ಸಾರ್ವಜನಿಕರನ್ನು ಆದರದಿಂದ ಸ್ವಾಗತಿಸಿದರು. ತದನಂತರ, ಕೂಟದ ಹಿರಿಯ ಸದಸ್ಯರಾದ ಡಾ. ಎಸ್.ಎಲ್. ಭಂಡಾರಕರ್ ಅವರು ಜನಕಪುರಿ ಕನ್ನಡ ಕೂಟವು ಕಳೆದ 50 ವರ್ಷಗಳಲ್ಲಿ ದೆಹಲಿಯಲ್ಲಿ ನಡೆದು ಬಂದ ಸುದೀರ್ಘ ಹಾಗೂ ರೋಮಾಂಚನಕಾರಿ ಸಾಂಸ್ಕೃತಿಕ ಪ್ರಯಾಣದ ಕುರಿತು ಸವಿವರವಾಗಿ ಮಾತನಾಡಿದರು.

ವೇದಿಕೆಯಲ್ಲಿದ್ದ ಜನಕಪುರಿ ಮಹಿಳಾ ಮಂಡಳಿಯ ಅಧ್ಯಕ್ಷರಾದ ಡಾ. ರೂಪಶ್ರೀ ಈಟಿ ಮತ್ತು ದೆಹಲಿ



ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ರೇಣು ಕುಮಾರ್ ಅವರು ಸಭೆಯನ್ನುದ್ದೇಶಿಸಿ ಪ್ರಾಸಂಗಿಕ ನುಡಿಗಳನ್ನಾಡಿದರು.

ಸಮಾರೋಪ ಸಮಾರಂಭದಲ್ಲಿ ಜನಕಪುರಿ ಕನ್ನಡ ಕೂಟದ ಸುವರ್ಣ ಮಹೋತ್ಸವದ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು.

ಮುಖ್ಯ ಅತಿಥಿಗಳಾದ ಡಾ. ಜಯತೀರ್ಥ ಆರ್. ಜೋಶಿ ಮತ್ತು ಗೌರವಾನ್ವಿತ ಅತಿಥಿಗಳಾದ ಶ್ರೀ ಬಸವರಾಜ ದೇಸಾಯಿ ಅವರು ಮಾತನಾಡಿ, ಹೊರನಾಡಿನಲ್ಲಿ ಅರ್ಧ ಶತಮಾನದ ಕಾಲ ಕನ್ನಡ ಭಾಷೆ, ಕಲೆ ಮತ್ತು ಸಾಂಸ್ಕೃತಿಕ ಅಸ್ಮಿತೆಯನ್ನು ಯಶಸ್ವಿಯಾಗಿ ಉಳಿಸಿ, ಬೆಳೆಸಿಕೊಂಡು ಬಂದ ಜನಕಪುರಿ ಕನ್ನಡ ಕೂಟದ ಮತ್ತು ಅದರ ಮುಖಂಡರ ಸೇವೆಯನ್ನು ಮುಕ್ತಕಂಠದಿಂದ ಶ್ಲಾಘಿಸಿದರು.





ಜನಕಪುರಿ ಕನ್ನಡ ಕೂಟದ ಅಧ್ಯಕ್ಷರಾದ ಡಾ. ಅಶೋಕ್ ಎಂ. ಈಟಿ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿ ತಮ್ಮ ಅಧ್ಯಕ್ಷೀಯ ಭಾಷಣವನ್ನು ಮಾಡಿದರು.

ಇಡೀ ಸಮಾರೋಪ ಸಮಾರಂಭದ ನಿರ್ವಹಣೆ ಮತ್ತು ನಿರೂಪಣೆಯನ್ನು ಡಾ. ಎನ್. ಪಿ. ಚಂದ್ರಶೇಖರ್ ಅವರು ಅತ್ಯಂತ ಚಾಕಚಕ್ಯತೆಯಿಂದ ನಡೆಸಿಕೊಟ್ಟರು. ಕೊನೆಯಲ್ಲಿ ಕೂಟದ ಖಜಾಂಚಿಗಳಾದ ಶ್ರೀ ಎಂ.ವಿ. ವೆಂಕಟೇಶ್ ಅವರು ವಂದನಾರ್ಪಣೆ ಮಾಡಿದರು. ಇಡೀ ದಿನ ನಡೆದ ಈ ಐತಿಹಾಸಿಕ ಸುವರ್ಣ ಮಹೋತ್ಸವದಲ್ಲಿ ದೆಹಲಿಯ ನೂರಾರು ಕನ್ನಡಿಗರು, ಮಹಿಳಾ ಮಂಡಳಿಯ ಪದಾಧಿಕಾರಿಗಳು ಹಾಗೂ ಮಕ್ಕಳು ಪಾಲ್ಗೊಂಡು ಸಂಭ್ರಮಿಸಿದರು.

'ಈ ಸುದೀರ್ಘ ಸಾಂಸ್ಕೃತಿಕ ಹಬ್ಬದ ಕೊನೆಯ ಪ್ರಮುಖ ಆಕರ್ಷಣೆಯಾದ ಸಂಗೀತ ರಸಸಂಜೆಯಲ್ಲಿ, ಖ್ಯಾತ ಗಾಯಕರಾದ ಶ್ರೀ ಸಿದ್ದರಾಮ್ ಕೇಶಾಪುರ್ ಮತ್ತು ಮಧುರ ಕಂಠದ ಗಾಯಕಿ ಶ್ರೀಮತಿ ಅರುಂಧತಿ ಹೆಗಡೆ ಅವರು ಒಂದಾದ ಮೇಲೊಂದರಂತೆ ಸೂಪರ್ ಹಿಟ್ ಕನ್ನಡ ಗೀತೆಗಳನ್ನು ಹಾಡುವ ಮೂಲಕ ಸಭಾಂಗಣವನ್ನು ರಂಜಿಸಿದರು. ಈ ಅದ್ಭುತ ಗಾಯನಕ್ಕೆ ರಿದಮ್ ಪ್ಯಾಡ್‌ನಲ್ಲಿ ಶ್ರೀ ಪ್ರಸಾದ್ ಮತ್ತು ಕೀಬೋರ್ಡ್‌ನಲ್ಲಿ ಶ್ರೀ ಪುಣ್ಯೇಶ್ ಅವರು ತಮ್ಮ ವಾದ್ಯಸಂಗೀತದ ಅದ್ಭುತ ಜುಗಲ್‌ಬಂದಿ ನೀಡಿ ಇಡೀ ಕಾರ್ಯಕ್ರಮದ ರಂಗನ್ನು ಹೆಚ್ಚಿಸಿದರು. ಗಾಯಕರ ಜೋಶ್ ಹಾಗೂ ಮಧುರ ಗೀತೆಗಳಿಗೆ ಮನಸೋತ ಪ್ರೇಕ್ಷಕರು ತಮ್ಮ ಜಾಗದಿಂದ ಎದ್ದು ನಿಂತು ಉತ್ಸಾಹದಿಂದ ಹೆಜ್ಜೆ ಹಾಕುತ್ತಾ, ಕುಣಿದು ಸಂಭ್ರಮಿಸಿದರು.

ಕೊನೆಯಲ್ಲಿ ರುಚಿಕರ ಹಾಗೂ ಭರ್ಜರಿ ಭೋಜನದೊಂದಿಗೆ ಕಾರ್ಯಕ್ರಮಕ್ಕೆ ಮುಕ್ತಾಯವನ್ನು ಹಾಡಲಾಯಿತು. ❑

ಡಾ. ಎಸ್.ಎಲ್. ಭಂಡಾರಕರ್







ಕಡಲತೀರದ ಭಾರ್ಗವ ಡಾ. ಶಿವರಾಮ ಕಾರಂತರ 125ನೇ ಹುಟ್ಟು ಹಬ್ಬ



(ಅಕ್ಟೋಬರ್ 10, ಡಾ. ಶಿವರಾಮ ಕಾರಂತರ ಹುಟ್ಟು ಹಬ್ಬ. ಈ ಸಂದರ್ಭದಲ್ಲಿ ಕಾರಂತರ ಮಕ್ಕಳೇ ಬರೆದ" ಕಾರಂತರ ಸುಳಿಯಲ್ಲಿ" ಪುಸ್ತಕಕ್ಕೆ ಚಿರಂಜೀವ್ ಸಿಂಗ್ ಬರೆದ ಮುನ್ನುಡಿಯ ಕೆಲವು ಸಾಲುಗಳು..)

ಕರ್ನಾಟಕದ ಸಂಸ್ಕೃತಿಯನ್ನು ಭಾರತದ ಸೀಮೆಯಾಚೆ ಕೊಂಡೊಯ್ದ ಕಾರಂತರು ನೃತ್ಯ ಮತ್ತು ಸಂಗೀತದ ಮೂಲಕ ಕರ್ನಾಟಕದ ಸಂಸ್ಕೃತಿಯನ್ನು ಭಾರತದ ಸೀಮೆಯಾಚೆ ಕೊಂಡೊಯ್ದವರು ಶಿವರಾಮ ಕಾರಂತರು. ರವೀಂದ್ರನಾಥ ಟಾಗೋರರ ನಂತರ ಶಿವರಾಮ ಕಾರಂತರಷ್ಟು ಕಲಾ ಪ್ರಕಾರಗಳಲ್ಲಿ ಪ್ರಾವೀಣ್ಯ ಸಾಧಿಸಿದವರು ಬೇರಾರೂ ಇಲ್ಲ. ಕಾರಂತರಿಗೆ ಟಾಗೋರ್ ಬಹುದೊಡ್ಡ ಸ್ಫೂರ್ತಿಯಾಗಿದ್ದರು.

ಯುವಕನಾಗಿದ್ದಾಗಲೇ ಅವರು ಶಾಂತಿನಿಕೇತನಕ್ಕೆ ಭೇಟಿ ನೀಡಿದ್ದರು. ಹಲವು ವರ್ಷಗಳ ನಂತರ ಟಾಗೋರರ ವಿಶ್ವಭಾರತಿ ವಿಶ್ವವಿದ್ಯಾಲಯವು ಕಾರಂತರಿಗೆ 'ದೇಶಿಕೋತ್ತಮ' ಹೆಸರಿನ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿತ್ತು. ಅದೊಂದು ಅರ್ಹ ಸನ್ಮಾನ. ಸಾಕಷ್ಟು ವಿಷಯಗಳಲ್ಲಿ ರವೀಂದ್ರನಾಥ ಟಾಗೋರ್ ಮತ್ತು ಕಾರಂತರಿಗೆ ಸಾಮ್ಯತೆಗಳಿವೆ. ಇಬ್ಬರೂ ಬಹುಶ್ರುತ ವಿದ್ವಾಂಸರು, ಬಹುಮುಖಿ ಪ್ರತಿಭೆಗಳು.

ಕಾರಂತರ ಆತ್ಮಕತೆಯ ಹೆಸರು 'ಹುಚ್ಚು ಮನಸಿನ ಹತ್ತು ಮುಖಗಳು'. ಅದನ್ನು 'ಟೆನ್ ಫೇಸಸ್ ಆಫ್ ಎ ಕ್ರೇಜಿ ಮೈಂಡ್' ಹೆಸರಿನಲ್ಲಿ ಇಂಗ್ಲಿಷ್‌ಗೆ ಅನುವಾದಿಸಲಾಗಿದೆ. ಕಾರಂತರ ಖಾಸಾ ಗೆಳೆಯ ಹಾಗೂ ದೊಡ್ಡ ಅಭಿಮಾನಿ ಎಚ್.ವೈ. ಶಾರದಾ ಪ್ರಸಾದ್ ಅನುವಾದ ಮಾಡಿದ್ದಾರೆ. ಕಾರಂತರನ್ನು ಬಣ್ಣಿಸಲು 'ಹತ್ತು ಮುಖಗಳು' ಕಡಿಮೆಯೇ.

ನಾನು ಶಿವರಾಮ ಕಾರಂತರನ್ನು ಮೊದಲು ಭೇಟಿಯಾಗಿದ್ದು 1970ರ ದಶಕದಲ್ಲಿ. ಕರ್ನಾಟಕದ ಅಂದಿನ ಮುಖ್ಯಮಂತ್ರಿ ದೇವರಾಜ ಅರಸ್ ಅವರು ಅಧ್ಯಕ್ಷತೆ ವಹಿಸಿದ್ದ ಸಭೆಯೊಂದರಲ್ಲಿ ನಾನು ಮತ್ತು ಕಾರಂತರು ಇಬ್ಬರೂ ಇದ್ದೆವು. ಅಲ್ಲಿದ್ದ ಎಲ್ಲರೂ ಎಲ್ಲ ಅಭಿಪ್ರಾಯಗಳಿಗೂ ಅಂತಿಮವಾಗಿ ಕಾರಂತರತ್ತಲೇ ನೋಡುತ್ತಿದ್ದರು. ಸಿಂಹಮುಖದ ಸುಂದರ ಆಕೃತಿಯ ಕಾರಂತರು ಇಡೀ ಸಭೆಯನ್ನು ಆವರಿಸಿಕೊಂಡಿದ್ದರು. ಆ ಗಾಂಭೀರ್ಯದ ಉಪಸ್ಥಿತಿಯ ಹಿಂದೆ ಅವರ ಜೀವಮಾನದ ಪರಿಶ್ರಮ ಹಾಗೂ ಸಾಧನೆಯಿತ್ತು.

ಅವರನ್ನು ಅಸಾಮಾನ್ಯ ಪ್ರತಿಭೆ, ಪ್ರಕಾಶಮಾನ ವ್ಯಕ್ತಿತ್ವ ಎಂದು ಹೇಳಿದರೆ ಅಷ್ಟೇ ಸಾಲದು. ಥಾಮಸ್ ಆಲ್ವಾ ಎಡಿಸನ್, 'ಅಸಾಮಾನ್ಯ ಪ್ರತಿಭೆಯೆಂಬುದು ಒಂದು ಶೇಕಡಾ ಸ್ಫೂರ್ತಿ ಹಾಗೂ ತೊಂಬತ್ತೊಂಬತ್ತು ಶೇಕಡಾ ಪರಿಶ್ರಮ' ಎಂದು ಹೇಳಿದ್ದರು. ಕಾರಂತರು ಜೀವಮಾನಪೂರ್ತಿ ಕಷ್ಟಪಟ್ಟು ಕೆಲಸ ಮಾಡಿದ್ದರು. ಅವರ ಸಾಧನೆಗಳು ಬೆರಗು ಹುಟ್ಟಿಸುತ್ತವೆ.

ಆದ್ದರಿಂದಲೇ ಸಾರ್ವಜನಿಕವಾಗಿ ಅವರ ವ್ಯಕ್ತಿತ್ವ ಎಲ್ಲರನ್ನೂ ಅಚ್ಚರಿಗೊಳಿಸುತ್ತಿತ್ತು. ಆದರೆ ಅವರನ್ನು ಹತ್ತಿರದಿಂದ ಬಲ್ಲವರಿಗಷ್ಟೇ ಗೊತ್ತು ಅವರೊಂದು ಅಗಾಧ ಮರ ಮತ್ತು ಅದರ ಮೇಲಾವರಣದ ಸುಮಧುರ ಹಾಡೆಂದು! ❑

ಚಿರಂಜೀವ್ ಸಿಂಗ್

ರಾಜಧಾನಿ ದೆಹಲಿಯಲ್ಲಿ 'ಪಟ್ಲ ಯಕ್ಷ ಸೌರಭ 2026' ಸಂಭ್ರಮ: 'ಜ್ವಾಲಾ ಪ್ರತಾಪ' ಯಕ್ಷಗಾನ ಪ್ರದರ್ಶನ



ಕರಾವಳಿಯ ಹೆಮ್ಮೆಯ ಕಲೆಯಾದ ಯಕ್ಷಗಾನವು ಕೇವಲ ಕರಾವಳಿ ಕರ್ನಾಟಕ ಅಥವಾ ಕನ್ನಡಿಗರಿಗೆ ಮಾತ್ರ ಸೀಮಿತವಾಗಿರದೆ, ದೇಶದ ಇತರ ಭಾಷಿಕರಿಗೂ ತಲುಪಿ ಅಖಿಲ ಭಾರತೀಯ ಮಟ್ಟದ ಕಲೆಯಾಗಿ ಬೆಳೆಯಬೇಕು ಎಂದು ಚಂಡೀಗಢ ಕೇಂದ್ರಾಡಳಿತ ಪ್ರದೇಶದ ಮುಖ್ಯ ಕಾರ್ಯದರ್ಶಿ ಹಾಗೂ ಹಿರಿಯ ಐಎಎಸ್ ಅಧಿಕಾರಿ ಎಚ್. ರಾಜೇಶ್ ಪ್ರಸಾದ್ ಅಭಿಪ್ರಾಯಪಟ್ಟರು,

ಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್ (ರಿ.) ದೆಹಲಿ ಘಟಕ ಇವರು ದೆಹಲಿ ಕರ್ನಾಟಕ ಸಂಘ ಮತ್ತು ಬಂಟ್ಸ್ ಕಲ್ಚರಲ್ ಅಸೋಸಿಯೇಷನ್ ದೆಹಲಿ ಇವುಗಳ ಜಂಟಿ ಆಶ್ರಯದಲ್ಲಿ ಅಕ್ಟೋಬರ್ 10, 2026 ರಂದು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ 'ಪಟ್ಲ ಯಕ್ಷ ಸೌರಭ 2026' ಹಾಗೂ 'ಜ್ವಾಲಾ ಪ್ರತಾಪ' ಯಕ್ಷಗಾನ ಪ್ರದರ್ಶನವನ್ನು ದೀಪ ಪ್ರಜ್ವಲಿಸಿ ಉದ್ಘಾಟಿಸಿ ಅವರು ಮಾತನಾಡಿದರು.

ಯಕ್ಷಗಾನವು ಅತ್ಯಂತ ಸಮೃದ್ಧ ಹಾಗೂ ಪರಿಪೂರ್ಣ ಕಲೆಯಾಗಿದ್ದು, ಕರ್ನಾಟಕದ ಗಡಿ ದಾಟಿ ರಾಷ್ಟ್ರಮಟ್ಟದಲ್ಲಿ ಪಸರಿಸುವ ಅಗಾಧ ಶಕ್ತಿ ಹೊಂದಿದೆ. ಶ್ರೀನಗರ, ಮಾತಾ ವೈಷ್ಣೋದೇವಿ ಸನ್ನಿಧಿ ಹಾಗೂ ಇತ್ತೀಚೆಗೆ ಚಂಡೀಗಢದಲ್ಲಿ ಪಟ್ಲ ಫೌಂಡೇಶನ್ ಪ್ರಸ್ತುತಪಡಿಸಿದ ಹಿಂದಿ ಯಕ್ಷಗಾನಕ್ಕೆ ಅಲ್ಲಿನ ರಾಜ್ಯಪಾಲರು, ಸೇನಾಧಿಕಾರಿಗಳು, ಗಣ್ಯರು ಹಾಗೂ ಸಾರ್ವಜನಿಕರಿಂದ ಅಭೂತಪೂರ್ವ ಮೆಚ್ಚುಗೆ ವ್ಯಕ್ತವಾಗಿದೆ. ಈ ವಿಶಿಷ್ಟ ಕಲೆಯನ್ನು ದೇಶದ ಎಲ್ಲ ರಾಜ್ಯಗಳಿಗೂ ಕೊಂಡೊಯ್ಯಲು ಇತರ ರಾಜ್ಯಗಳಲ್ಲಿ ಸೇವೆ ಸಲ್ಲಿಸುತ್ತಿರುವ ಕರ್ನಾಟಕ ಮೂಲದ ಐಎಎಸ್, ಐಪಿಎಸ್ ಹಾಗೂ ಐಎಫ್ಎಸ್ ಅಧಿಕಾರಿಗಳು ಕೈಜೋಡಿಸಬೇಕು ಎಂದು ಅವರು ಕರೆ ನೀಡಿದರು. ಅಲ್ಲದೆ, ಪಟ್ಲ ಫೌಂಡೇಶನ್ ವತಿಯಿಂದ ಕಲಾವಿದರ ಕ್ಷೇಮಾಭಿವೃದ್ಧಿಗಾಗಿ ನಡೆಯುತ್ತಿರುವ ವಸತಿ ನಿರ್ಮಾಣ, ವಿಮೆ, ವೈದ್ಯಕೀಯ ನೆರವು ಹಾಗೂ 20 ಸಾವಿರಕ್ಕೂ ಹೆಚ್ಚು ಮಕ್ಕಳಿಗೆ 'ಯಕ್ಷ ಶಿಕ್ಷಣ' ನೀಡುತ್ತಿರುವ ಸಮಾಜಮುಖಿ ಕಳಕಳಿಯನ್ನು ಅವರು ಮುಕ್ತಕಂಠದಿಂದ ಶ್ಲಾಘಿಸಿದರು.

ಕಾರ್ಯಕ್ರಮದ ಮುಖ್ಯ ಸಂಚಾಲಕ ಹಾಗೂ ಫೌಂಡೇಶನ್ ಸಂಸ್ಥಾಪಕಾಧ್ಯಕ್ಷ ಪಟ್ಲ ಸತೀಶ್ ಶೆಟ್ಟಿ ಮಾತನಾಡಿ, ಯಕ್ಷಗಾನವು ಕೇವಲ ಮನರಂಜನೆಯಲ್ಲದೆ ಪೀಳಿಗೆಗೆ ಸಂಸ್ಕಾರ ನೀಡುವ ಮಾಧ್ಯಮವಾಗಿದೆ, ರಂಗದ ಮುಂಭಾಗದ ವೇಷಧಾರಿಗಳಷ್ಟೇ ಅಲ್ಲದೆ, ಇಡೀ ರಾತ್ರಿ ನಿದ್ದೆಗೆಟ್ಟು ರಂಗಸ್ಥಳ ನಿರ್ಮಿಸುವ ನೇಪಥ್ಯದ ಕಾರ್ಮಿಕರ ಶ್ರಮವೂ ದೊಡ್ಡದಾಗಿದ್ದು, ಅವರನ್ನು ಗುರುತಿಸಿ ಗೌರವಿಸುವುದು ನಮ್ಮ ಆದ್ಯ ಕರ್ತವ್ಯ ಎಂದರು.

ಆರ್.ಕೆ. ಪುರಂ ಶಾಸಕ ಅನಿಲ್ ಕುಮಾರ್ ಶರ್ಮಾ ಮಾತನಾಡಿ, ರಾಜಧಾನಿಯಲ್ಲಿ ಕನ್ನಡಿಗರು ತಮ್ಮ ಶ್ರೀಮಂತ ಸಂಸ್ಕೃತಿಯನ್ನು ಜೀವಂತವಾಗಿರಿಸಿಕೊಂಡು ಒಗ್ಗಟ್ಟಿನಿಂದ ಮುನ್ನಡೆಸುತ್ತಿರುವುದು ಪ್ರಶಂಸನೀಯ ಎಂದರು.

ಜೆಸಿಬಿ ಇಂಡಿಯಾ ಲಿಮಿಟೆಡ್‌ನ ಎಂಡಿ ಮತ್ತು ಸಿಇಒ ದೀಪಕ್ ಶೆಟ್ಟಿ ಅವರು, ವೃತ್ತಿಜೀವನದ ಒತ್ತಡದ ನಡುವೆ ಇಂತಹ ಸಾಂಸ್ಕೃತಿಕ ಕಾರ್ಯಕ್ರಮಗಳು ನಮ್ಮ ಬೇರುಗಳೊಂದಿಗೆ ಮರು ಸಂಪರ್ಕ ಸಾಧಿಸಲು 'ಕಲ್ಚರಲ್ ಚಾರ್ಜ್' ಒದಗಿಸುತ್ತವೆ ಎಂದು ಬಣ್ಣಿಸಿದರು. ಕರ್ನಾಟಕ ಬ್ಯಾಂಕ್ ಜನರಲ್ ಮ್ಯಾನೇಜರ್ ಬಸವರಾಜ್ ಎಸ್. ದೇಸಳ್ಳಿ ಮಾತನಾಡಿ, ಯಕ್ಷಗಾನದಂತಹ ಸಾಂಪ್ರದಾಯಿಕ ಕಲೆಗಳನ್ನು ಮುಂದಿನ ಪೀಳಿಗೆಗೆ ದಾಟಿಸುವ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಯಕ್ಷಧ್ರುವ ಪಟ್ಲ ಫೌಂಡೇಶನ್ ಬಂಟ್ವಾಳ ಘಟಕದ ಅಧ್ಯಕ್ಷ ಚಂದ್ರಹಾಸ ಶೆಟ್ಟಿ, ಫೌಂಡೇಶನ್ ವತಿಯಿಂದ ಈವರೆಗೆ 15 ಕೋಟಿ ರೂ.ಗಳಿಗೂ ಅಧಿಕ ನೆರವನ್ನು ಕಲಾವಿದರ ಕಲ್ಯಾಣಕ್ಕೆ ವಿನಿಯೋಗಿಸಲಾಗಿದ್ದು, 68 ಬಡ ಕಲಾವಿದರಿಗೆ ಮನೆ ನಿರ್ಮಿಸಿಕೊಡಲಾಗಿದೆ ಎಂದು ವಿವರಿಸಿದರು. ಕಾರ್ಯಕ್ರಮ ಸಂಯೋಜಕ ವಸಂತ್ ಶೆಟ್ಟಿ ಬೆಳ್ಳಾರೆ ಮಾತನಾಡಿ, ದೆಹಲಿ ಕರ್ನಾಟಕ ಸಂಘ ಹಾಗೂ ಕನ್ನಡ ಶಾಲೆಯಲ್ಲಿ ಶೀಘ್ರದಲ್ಲೇ ವಂಯೋಮಿತಿಯಿಲ್ಲದೆ ಕನ್ನಡಿಗರು ಮತ್ತು ಕನ್ನಡೇತರರಿಗೆ ಯಕ್ಷಗಾನ ಕಲಿಕಾ ತರಗತಿಗಳನ್ನು ಆರಂಭಿಸಲಾಗುವುದು ಎಂದು ಪ್ರಕಟಿಸಿದರು.

ಅಧ್ಯಕ್ಷತೆ ವಹಿಸಿದ್ದ ದೆಹಲಿ ಘಟಕದ ಅಧ್ಯಕ್ಷ ಡಾ. ನಿರಂಜನ್ ನಾಯಕ್, ಔಷಧವು ಶರೀರದ ಆರೋಗ್ಯ ಕಾಪಾಡಿದರೆ, ಕಲೆ ಮತ್ತು ಸಂಸ್ಕೃತಿ ಮನಸ್ಸಿನ ನೆಮ್ಮದಿಯನ್ನು ನೀಡುತ್ತದೆ ಎಂದರು.

ಇದೇ ಸಂದರ್ಭದಲ್ಲಿ ಯಕ್ಷಗಾನ ರಂಗದಲ್ಲಿ ಕಳೆದ ನಾಲ್ಕೂವರೆ ದಶಕಗಳಿಂದ ಸೇವೆ ಸಲ್ಲಿಸುತ್ತಿರುವ ಹಿರಿಯ ರಂಗ ಸಹಾಯಕ, ನೇಪಥ್ಯ ಕಲಾವಿದ ರಘು ಶೆಟ್ಟಿ ನಾಳ ಅವರಿಗೆ 'ಪಟ್ಲ ಯಕ್ಷ ಸೌರಭ ಗೌರವ' ನೀಡಿ ಸನ್ಮಾನಿಸಲಾಯಿತು. ಕರ್ಣಾಟಕ ಬ್ಯಾಂಕ್‌ನ ಜಿಎಂ ಆಗಿ ಬಡ್ತಿ ಹೊಂದಿದ ಬಸವರಾಜ್ ಎಸ್. ದೇಸಳ್ಳಿ ಅವರನ್ನು ಅಭಿನಂದಿಸಲಾಯಿತು.

ಸಭಾ ಕಾರ್ಯಕ್ರಮದ ಬಳಿಕ ಪಟ್ಲ ಸತೀಶ್ ಶೆಟ್ಟಿ ಅವರ ಸುಮಧುರ ಭಾಗವತಿಕೆಯಲ್ಲಿ ಕರಾವಳಿಯ ಪ್ರಸಿದ್ಧ ಕಲಾವಿದರಿಂದ ಮಹಾಭಾರತ ಕಥಾಧಾರಿತ 'ಜ್ವಾಲಾ ಪ್ರತಾಪ' ಯಕ್ಷಗಾನ ಪ್ರದರ್ಶನ ಸಂಪನ್ನಗೊಂಡು ಕಲಾಪ್ರೇಮಿಗಳನ್ನು ಮಂತ್ರಮುಗ್ಧರನ್ನಾಗಿಸಿತು.

ವೇದಿಕೆಯಲ್ಲಿ ಯಕ್ಷಧ್ರುವ ಪಟ್ಲ ಫೌಂಡೇಶನ್ ಗೌರವಾಧ್ಯಕ್ಷ ಟಿ. ಶಿವಪ್ರಸಾದ್ ಶೆಟ್ಟಿ, ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ರಾಧಾಕೃಷ್ಣ, ದೆಹಲಿ ಘಟಕದ ಪ್ರಧಾನ ಕಾರ್ಯದರ್ಶಿ ಪ್ರಶಾಂತ್ ಶೆಟ್ಟಿ, ಕೋಶಾಧಿಕಾರಿ ಕೃಷ್ಣರಾಜ್ ಕೆ.ಎನ್., ಸಂಚಾಲಕ ಕಾರ್ತಿಕ್ ರೈ ಉಪಸ್ಥಿತರಿದ್ದರು. ಪೂಜಾ ಪ್ರದೀಪ್ ಕಾರ್ಯಕ್ರಮ ನಿರ್ವಹಿಸಿದರು, ಪ್ರಶಾಂತ್ ಶೆಟ್ಟಿ ಅವರು ಸ್ವಾಗತಿಸಿದರು, ಅಶ್ವಿತಾ ಶೆಟ್ಟಿ ವಂದಿಸಿದರು. ❑

ಪ್ರಕಾಶ್ ಶೆಟ್ಟಿ ಉಳಿಪಾಡಿ





ಮಕ್ಕಳು ಸುಸಂಸ್ಕೃತರಾಗಲು ಪೂಜ್ಯ ಶಿವರಾತ್ರಿ ರಾಜೇಂದ್ರ ಶ್ರೀಗಳಂತಹ ಪ್ರಾತಃಸ್ಮರಣೀಯರ ಜೀವನ-ಸಾಧನೆಗಳ ಅರಿವು ಅಗತ್ಯ
-ಡಾ. ಮಹಾಂತ ಪ್ರಭು ಸ್ವಾಮೀಜಿ



ದೆಹಲಿಯ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಆಯೋಜಿಸಿದ್ದ ಕಾಯಕ ತಪಸ್ವಿ, ರಾಜಗುರು ತಿಲಕ ಡಾ. ರಾಜೇಂದ್ರ ಸ್ವಾಮೀಜಿ ಅವರ 111 ನೇ ಜಯಂತ್ಯುತ್ಸವದಲ್ಲಿ 'ಚಿಂತನ'ದ ಸಾನ್ನಿಧ್ಯ ವಹಿಸಿದ್ದ ಆಧ್ಯಾತ್ಮಿಕವಾಗಿ ಚಿಕ್ಕ ವಯಸ್ಸಿನಲ್ಲೇ ಉನ್ನತ ಸಾಧನೆ ಮಾಡಿ ಜನ ಮನ ಗೆದ್ದಿರುವ ಶ್ರೀ ಶೇಗುಣಿಸಿ ವಿರಕ್ತ ಮಠದ ಪೂಜ್ಯ ಡಾ. ಮಹಾಂತ ಪ್ರಭು ಸ್ವಾಮೀಜಿ ಅವರು ವಚನ ಸಾಹಿತ್ಯದ ಪ್ರಸಾರದಿಂದ ಕನ್ನಡಕ್ಕೆ ಎದುರಾಗ ಬಹುದಾದ ಆತಂಕಗಳನ್ನು ತಪ್ಪಿಸಲು ಸಾಧ್ಯವಿರುವುದನ್ನು ಮನಗಂಡು ಪೂಜ್ಯ ರಾಜೇಂದ್ರ ಶ್ರೀಗಳು ಹುಟ್ಟು ಹಾಕಿದ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಇಂದು ದೆಹಲಿಯಲ್ಲಿ 'ಶ್ರೀ'ಗಳ ಜಯಂತಿ ಆಚರಣೆ ಮಾಡುತ್ತಿರುವುದನ್ನು ಶ್ಲಾಘಿಸಿದರು.

ಪೂಜ್ಯ ರಾಜೇಂದ್ರ ಶ್ರೀಗಳು ಸ್ಥಾಪನೆ ಮಾಡಿದ ಶೈಕ್ಷಣಿಕ, ಸಾಹಿತ್ಯಿಕ, ಸಾಂಸ್ಕೃತಿಕ ಸಂಸ್ಥೆಗಳು ಇಂದು ನೂರಾರು ಘಟಕಗಳಾಗಿ ಕರ್ನಾಟಕ ಮಾತ್ರವಲ್ಲದೆ ದೇಶದ ವಿವಿಧ ರಾಜ್ಯಗಳು ಮತ್ತು ಸಾಗರದಾಚೆಗೂ ಸಹ ಕನ್ನಡ ನುಡಿ, ಕರ್ನಾಟಕದ ಸಂಸ್ಕೃತಿಗಳನ್ನು ಪ್ರಸರಿಸುವ ಪಾವನ ಕಾರ್ಯದಲ್ಲಿ ನಿರತರಾಗಿದ್ದು ಇಂತಹ ಸಾಧನೆ ಮಾಡಿ ಪ್ರಾತಃ ಸ್ಮರಣೀಯರಾದ ಪೂಜ್ಯರ ಕುರಿತು ನಮ್ಮ ಮಕ್ಕಳಿಗೆ ಅರಿವು ಮೂಡಿಸುವುದರ ಮೂಲಕ ಅವರನ್ನು ಸುಸಂಸ್ಕೃತರನ್ನಾಗಿ ಮಾಡಲು ಸಾಧ್ಯ ಎಂದರು.

ಭಾರತ ಭಾಗ್ಯವಿಧಾತ ಬಸವಣ್ಣ ಅವರನ್ನು ಕುರಿತು ಪ್ರಸಿದ್ಧ ಇತಿಹಾಸಕಾರ ಚಿಂತಕ Arthur Miles ಅವರು ಹೇಳಿರುವ "Whatever legend may say about Basava, the fact is pretty clear that he was the first Indian free thinker." ಎಂಬ ಘೋಷವಾಕ್ಯವನ್ನು ಉದ್ಧರಿಸಿದ ಪೂಜ್ಯರು ಭಾರತದ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಇಂಗ್ಲೆಂಡ್‌ನ ಥೇಮ್ಸ್ ನದಿ ದಂಡೆಯ ಮೇಲೆ ಬಸವಣ್ಣನವರ ಪ್ರತಿಮೆಯನ್ನು ಉದ್ಘಾಟಿಸುವ ಸಂದರ್ಭದಲ್ಲಿ "ನಾನು ಭಾರತದಂತಹ ದೊಡ್ಡ ದೇಶದ ಪ್ರಧಾನಿಯಾಗಿ ಈ ಸಮಾರಂಭಕ್ಕೆ ಬಂದಿಲ್ಲ, ಬಸವಣ್ಣನವರ ಭಕ್ತನಾಗಿ ನಾನು ಲಂಡನ್‌ಗೆ ಬಂದಿದ್ದೇವೆ ಎಂದು ಹೇಳಿದ್ದನ್ನು ಶ್ಲಾಘಿಸಿ, ಭಾರತದ ಪ್ರಥಮ ಸ್ವಾತಂತ್ರ್ಯ ಪ್ರತಿಪಾದಕ ಬಸವಣ್ಣ ಅವರಿಗೆ ನಮ್ಮ ಹೆಮ್ಮೆಯ ಪ್ರಧಾನಿ ಅವರು ಸಲ್ಲಿಸಿದ ಗೌರವವನ್ನು ಸ್ಮರಿಸಿದರು.

ಆಧುನಿಕ ಕಾಲ ಘಟ್ಟದಲ್ಲಿ ಬದುಕುತ್ತಿರುವ ನಮಗೆ ಬದುಕು ಏನೆಲ್ಲಾ ಸವಾಲುಗಳನ್ನು ಒಡ್ಡುತ್ತದೆಯೋ ಅವುಗಳನ್ನು ಎದುರಿಸಲು ಶರಣರ, ಸಾಧಕರ ವಿಚಾರಗಳನ್ನು ಅನುಕರಣೆ ಮಾಡಬೇಕೆಂದು ಕರೆ ಕೊಟ್ಟ ಪೂಜ್ಯ ಮಹಾಂತ ಸ್ವಾಮೀಜಿಯವರು ತಮ್ಮ ವಿಚಾರಗಳನ್ನು ಲಘು ಹಾಸ್ಯ ಮಿಶ್ರಿತ ಮಾತುಗಳಿಂದಾಗಿ ಹೆಚ್ಚು ಆಕರ್ಷಣೀಯಗೊಳಿಸಿದರು.

ಕಾರ್ಯಕ್ರಮದಲ್ಲಿ, ಗೌರವ ಉಪಸ್ಥಿತರಿದ್ದ ಜೆಎಸ್‌ಎಸ್ ನೋಯ್ಡಾ ವಿಶ್ವವಿದ್ಯಾನಿಲಯದ ಡೀನ್ ಅಕ್ಯಾಡೆಮಿಕ್ಸ್ ಆಗಿರುವ ಡಾ. ಮನೋಜ್ ಕುಮಾರ್ ಅವರು ಪರಮ ಪೂಜ್ಯ ರಾಜೇಂದ್ರ ಶ್ರೀಗಳ ಕುರಿತು ತಮ್ಮ ಅನುಭವಗಳನ್ನು ಹಂಚಿಕೊಂಡರು. ಕರ್ನಾಟಕ ವೀರಶೈವ ಲಿಂಗಾಯತ ಸಂಘಟನಾ ಕಾರ್ಯದರ್ಶಿ ಶ್ರೀ ಶಿವಲಿಂಗಯ್ಯ ಅಲ್ಲಯ್ಯನ ಮಠ ಅವರು ಉಪಸ್ಥಿತರಿದ್ದರು. ದೆಹಲಿ ಘಟಕದ ಪ್ರಧಾನ ಕಾರ್ಯದರ್ಶಿ ಶಿವಪ್ಪ ಅವರು ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ದೆಹಲಿ ಘಟಕದ ಅಧ್ಯಕ್ಷರಾಗಿರುವ ಡಾ. ಚಂದ್ರಶೇಖರ್ ಅವರಿಗೆ ಡಾಕ್ಟರೇಟ್ ಪದವಿ ಗಳಿಸಿದ್ದಕ್ಕಾಗಿ ದಂಪತಿಗಳಿಗೆ ಡಾ. ಮಹಾಂತ ಪ್ರಭು ಸ್ವಾಮೀಜಿ ಅವರು ಅಭಿನಂದಿಸಿ ಸನ್ಮಾನಿಸಿದರು. ಘಟಕದ ಎಲ್ಲ ಪದಾಧಿಕಾರಿಗಳು ಜೊತೆಗಿದ್ದು ತಮ್ಮ ಪ್ರೀತ್ಯಾದರಗಳಿಂದ ಈ ಅಭಿನಂದನೆಯ ಕ್ಷಣಗಳನ್ನು ಸ್ಮರಣೀಯಗೊಳಿಸಿದರು.

ದೆಹಲಿ ಎನ್‌ಸಿಆರ್ ಮಹಿಳೆಯರು ತಮ್ಮ ಸುಶ್ರಾವ್ಯವಾದ ನಾಡಗೀತೆ ಗಾಯನದ ಮೂಲಕ ಶುಭಾರಂಭ ಮಾಡಿದ ಕಾರ್ಯಕ್ರಮದಲ್ಲಿ ಶ್ರೀ ಅಶೋಕ್ ಹಣಮಸಾಗರ್ ಅವರ ಪ್ರಾರ್ಥನೆ ಹಾಗೂ ಕಲಾವಿದ ಸೋದರ ಸೋದರಿಯರು ತಮ್ಮ ಕಲಾತ್ಮಕ ಪ್ರತಿಭೆಯನ್ನು ನೃತ್ಯ, ಗಾಯನ, ನಾಟಕ, ಪುಟಾಣಿ ಮಕ್ಕಳ ವೇಷ ಭೂಷಣ, ವಚನ ವಾಚನಗಳ ಮೂಲಕ ಕಾರ್ಯಕ್ರಮದ ಆಕರ್ಷಣೆಯನ್ನು ಇಮ್ಮಡಿಗೊಳಿಸಿದರು.

ಪದಾಧಿಕಾರಿಗಳಾದ ಶ್ರೀ ರಾಜಕುಮಾರ್ ನೀಲೂರ ಹಾಗೂ ಶ್ರೀ ಪ್ರಭಾಕರ್ ಮಡ್ಡಿತೋಟ ಅವರು ಅಚ್ಚುಕಟ್ಟಾಗಿ ನಿರೂಪಣೆ ಮಾಡಿದ ಕಾರ್ಯಕ್ರಮದಲ್ಲಿ ರಾಜಶೇಖರ್ ಪಾಟೀಲ್ ಸ್ವಾಗತ, ಕೃಷ್ಣರಾಜ್ ವಂದನಾರ್ಪಣೆ, ಅತಿಥಿ ಪರಿಚಯ ಹಾಗೂ ಗೌರವ ಸಮರ್ಪಣೆಯಲ್ಲಿ ಶ್ರೀಮತಿ ಜಯಶ್ರೀ, ಶ್ರೀ ಹೆಚ್.ಎಸ್. ತೇಲಿ, ದಾಸೋಹ ಪ್ರಸಾದ ನಿರ್ವಹಣೆಯಲ್ಲಿ ಶ್ರೀ ಯು.ಎ. ಷರೀಫ್ ಅವರು ಹಾಗೆಯೇ ಕಾರ್ಯಕ್ರಮದ ಯಶಸ್ಸಿಗೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಹತ್ತು ಹಲವರು ನೆರವಾದರು. ❑

ಹೇಮಶ್ರೀ ಚಂದ್ರಶೇಖರ್





ದೆಹಲಿ ಕನ್ನಡ ಶಾಲೆಯಲ್ಲಿ ಸಂಭ್ರಮದ ವಾರ್ಷಿಕೋತ್ಸವ ಮತ್ತು ನವೀಕೃತ ಸಂಗೀತ ಕೊಠಡಿ ಶುಭಾರಂಭ



ದೆಹಲಿ ಕನ್ನಡ ಶಾಲೆಯ ವಾರ್ಷಿಕೋತ್ಸವ ಸಮಾರಂಭವನ್ನು ಅತ್ಯಂತ ಸಡಗರ, ಸಂಭ್ರಮ ಹಾಗೂ ಅರ್ಥಪೂರ್ಣವಾಗಿ ದಿನಾಂಕ 24.10.2026ರಂದು ಆಚರಿಸಲಾಯಿತು. ಈ ಸಮಾರಂಭವು ಶಾಲೆಯ ಶೈಕ್ಷಣಿಕ ಸಾಧನೆಗಳು, ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆ, ಸಾಂಸ್ಕೃತಿಕ ಪ್ರತಿಭೆ ಹಾಗೂ ಶಿಕ್ಷಕರ ಸಮರ್ಪಿತ ಸೇವೆಯನ್ನು ಪ್ರತಿಬಿಂಬಿಸುವ ಮಹತ್ವದ ವೇದಿಕೆಯಾಯಿತು. ಮುಖ್ಯ ಅತಿಥಿಗಳಾಗಿ ಡಾ. ನವೀನ್ ಬಿ. ಮಹೇಶ್ವರಪ್ಪ, ಪಶುಸಂಗೋಪನಾ ಆಯುಕ್ತರು, ಶಾಲೆಯ 2011–12ನೇ ಸಾಲಿನ ಹಳೆಯ ವಿದ್ಯಾರ್ಥಿನಿಯಾದ ಡಾ. ಪ್ರಿಯಾಂಕ ಕೌಶಿಕ್, ಪತ್ರಾಗಾರ ತಜ್ಞೆ ಹಾಗೂ ಮತ್ತು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ರೇಣುಕುಮಾರ್ ಆರ್., ಉಪಸ್ಥಿತರಿದ್ದು ತಮ್ಮ ಅಮೂಲ್ಯ ವಿಚಾರಗಳು ಹಾಗೂ ಪ್ರೇರಣಾದಾಯಕ ಸಂದೇಶಗಳ ಮೂಲಕ ವಿದ್ಯಾರ್ಥಿಗಳನ್ನು ಹುರಿದುಂಬಿಸಿದರು.

ಮುಖ್ಯ ಅತಿಥಿಗಳಾದ ಡಾ. ನವೀನ್ ಮಹೇಶ್ವರಪ್ಪ ಮಾತನಾಡುತ್ತ ವಿದ್ಯಾರ್ಥಿಗಳು ಪಠ್ಯಜ್ಞಾನದ ಜೊತೆಗೆ ವಿವಿಧ ಕೌಶಲ್ಯಗಳನ್ನು ಬೆಳೆಸಿಕೊಳ್ಳಬೇಕು ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಮೂಲಕ ತಮ್ಮ ಪ್ರತಿಭೆಯನ್ನು ಅನಾವರಣಗೊಳಿಸಬೇಕು ಎಂದು ಸಲಹೆ ನೀಡಿದರು. ಶೈಕ್ಷಣಿಕ ಸಾಧನೆಯಷ್ಟೇ ಅಲ್ಲದೇ ಆರೋಗ್ಯದ ಕಾಳಜಿಯೂ ಮುಖ್ಯವೆಂದು ತಿಳಿಸಿದ ಅವರು, ವಿದ್ಯಾರ್ಥಿಗಳು ಆರೋಗ್ಯಕರ ಜೀವನಶೈಲಿಯನ್ನು ರೂಢಿಸಿಕೊಳ್ಳಬೇಕೆಂದು ಕರೆ ನೀಡಿದರು. ಶ್ರೀಮತಿ ಪ್ರಿಯಾಂಕ ಕೌಶಿಕ್ ಅವರು ದೆಹಲಿ ಕನ್ನಡ ಶಾಲೆಯಲ್ಲಿ ತಮ್ಮ ವಿದ್ಯಾಭ್ಯಾಸದ ಅನುಭವಗಳನ್ನು ಸ್ಮರಿಸಿಕೊಂಡರು. ತಮ್ಮ ಪ್ರಥಮ ತರಗತಿಯ ಶಿಕ್ಷಕರು ಸೇರಿದಂತೆ ಎಲ್ಲ ಗುರುಗಳು ನೀಡಿದ ಮಾರ್ಗದರ್ಶನ ಮತ್ತು ಪ್ರೋತ್ಸಾಹವನ್ನು ಕೃತಜ್ಞತೆಯಿಂದ ನೆನಪಿಸಿಕೊಂಡರು. ಶಾಲೆಯಲ್ಲಿ ನಡೆಯುತ್ತಿದ್ದ ಬೆಳಗಿನ ಪ್ರಾರ್ಥನಾ ಸಭೆ, ಬಹುಮಾನ ವಿತರಣೆ, ಪತ್ರಿಕೆ ಓದುವಿಕೆ ಹಾಗೂ ಶಿಸ್ತಿನ ವಾತಾವರಣವು ತಮ್ಮ ವ್ಯಕ್ತಿತ್ವ ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಿವೆ ಎಂದು ಅಭಿಪ್ರಾಯಪಟ್ಟರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ, ಪ್ರಭಾರ ಅಧ್ಯಕ್ಷ ಡಾ. ಅವನೀಂದ್ರನಾಥ್ ರಾವ್ ಅವರು ಜೀವನದಲ್ಲಿ ಸ್ಪಷ್ಟವಾದ ಗುರಿಯನ್ನು ಹೊಂದಿರುವುದು ಹಾಗೂ ಅದನ್ನು ಸಾಧಿಸಲು ಶ್ರದ್ಧೆ, ಶಿಸ್ತು ಮತ್ತು ನಿರಂತರ ಪರಿಶ್ರಮದಿಂದ ಕಾರ್ಯನಿರ್ವಹಿಸುವುದು ಅತ್ಯಗತ್ಯ ಎಂದು ತಿಳಿಸಿದರು. ದೃಢಸಂಕಲ್ಪ ಮತ್ತು ಅವಿರತ ಪ್ರಯತ್ನಗಳ ಮೂಲಕ ಯಶಸ್ಸನ್ನು ಸಾಧಿಸಲು ಸಾಧ್ಯವೆಂದು ವಿದ್ಯಾರ್ಥಿಗಳಿಗೆ ಪ್ರೇರಣೆ ನೀಡಿದರು. ದೆಹಲಿಯ ವಲಯದ 26ರ – 28 ಶಾಲೆಗಳ ಪೈಕಿ ಐದನೇ ಸ್ಥಾನವನ್ನು ಗಳಿಸಿರುವುದು ಶಾಲೆಯ ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ಸಂಘಟಿತ ಪ್ರಯತ್ನ, ಸಮರ್ಪಣೆ ಮತ್ತು ಪರಿಶ್ರಮದ ಫಲವಾಗಿದೆ ಎಂದು ಅಭಿಪ್ರಾಯಪಟ್ಟರು. ಶಾಲೆಯು ಇದೇ ರೀತಿಯ ಪ್ರಗತಿಯನ್ನು ಮುಂದುವರಿಸಿ ಭವಿಷ್ಯದಲ್ಲಿ ಇನ್ನಷ್ಟು ಉನ್ನತ ಸಾಧನೆಗಳನ್ನು ಮಾಡಲಿ ಎಂದು ಹಾರೈಸಿದರು.

ಶ್ರೀ ರೇಣುಕುಮಾರ್ ಅವರು ಮಾತನಾಡಿ ಶಾಲೆಯ ಸ್ಥಾಪನೆ ಹಾಗೂ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಿದ ಶ್ರೀ ಕೃಷ್ಣಮೂರ್ತಿ ರಾವ್ ಅವರ ಕೊಡುಗೆಯನ್ನು ಸ್ಮರಿಸಿದರು. ಶಾಲೆಯು ನಿರಂತರವಾಗಿ ಪ್ರಗತಿಪಥದಲ್ಲಿ ಸಾಗಲು ಶಿಕ್ಷಕರು ನವೀನ ಚಿಂತನೆ, ವೃತ್ತಿಪರ ನೈಪುಣ್ಯ ಹಾಗೂ ಸಮರ್ಪಣಾ ಮನೋಭಾವವನ್ನು ಬೆಳೆಸಿಕೊಳ್ಳುವುದು ಅಗತ್ಯವೆಂದು ತಿಳಿಸಿದರು. ಶಾಲೆಯ ಶಿಕ್ಷಕರು ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ ಮತ್ತು ಸರ್ವತೋಮುಖ ಅಭಿವೃದ್ಧಿಗೆ ವಿಶೇಷ ಕಾಳಜಿ ವಹಿಸುತ್ತಿರುವುದನ್ನು ಅವರು ಪ್ರಶಂಸಿಸಿದರು.

ಶಾಲೆಯ ವಾರ್ಷಿಕ ವರದಿಯನ್ನು ಪ್ರಾಂಶುಪಾಲ ಶ್ರೀ ಪ್ರಶಾಂತ್ ಕುಮಾರ್ ಅವರು ಪ್ರಸ್ತುತಪಡಿಸಿದರು. ಶಾಲೆಯ ವಿವಿಧ ಕ್ಷೇತ್ರಗಳ ಸಾಧನೆಗಳು ಹಾಗೂ ಶೈಕ್ಷಣಿಕ ವರ್ಷದ ಪ್ರಮುಖ ಚಟುವಟಿಕೆಗಳನ್ನು ವಿವರಿಸಲಾಯಿತು. ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಗಳು, ಕ್ರೀಡಾ ಕ್ಷೇತ್ರದಲ್ಲಿನ ಪ್ರಶಸ್ತಿಗಳು ಹಾಗೂ ಸಾಧನೆಗಳು ವರದಿಯಲ್ಲಿ ಪ್ರಮುಖವಾಗಿ ಉಲ್ಲೇಖಿಸಲ್ಪಟ್ಟವು.

ಶ್ರೀಮತಿ ಸೌಮ್ಯ ಅವರು ಶೈಕ್ಷಣಿಕ ಪ್ರತಿಭಾ ವಿದ್ಯಾರ್ಥಿಗಳಿಗೆ ಪುರಸ್ಕಾರ ಮತ್ತು ಶ್ರೀಮತಿ ನೀತಾ ಪಠ್ಯೇತರ ಚಟುವಟಿಕೆಯ ಪುರಸ್ಕಾರ ಮಂಡಿಸಿದರು. ಆರಂಭದಲ್ಲಿ ಶಾಲೆಯ ನವೀಕೃತ ಸಂಗೀತ ಕೊಠಡಿಯನ್ನು ಮುಖ್ಯ ಅತಿಥಿ ಡಾ. ನವೀನ್ ಮಹೇಶ್ವರಪ್ಪ ಉದ್ಘಾಟಿಸಿದರು. ಐದು ಲಕ್ಷ ರೂಪಾಯಿ ವೆಚ್ಚದ ಸಂಗೀತ ಉಪಕರಣಗಳನ್ನು ನೀಡಿದ ದಾನಿಗಳಾದ ಆನಂದ ಮೂರ್ತಿಯವರ ಸುಪುತ್ರ, ಗಾಯಕ ಪ್ರಭಂಜನ್ ಅವರನ್ನು ಅಭಿನಂದಿಸಲಾಯಿತು.

ಸಾಂಸ್ಕೃತಿಕ ಕಾರ್ಯಕ್ರಮಗಳು ಸಮಾರಂಭದ ಪ್ರಮುಖ ಆಕರ್ಷಣೆಯಾಗಿದ್ದವು. ವಿದ್ಯಾರ್ಥಿಗಳು ತಮ್ಮ ಪ್ರತಿಭೆ, ಸೃಜನಶೀಲತೆ ಮತ್ತು ಕಲಾತ್ಮಕ ಸಾಮರ್ಥ್ಯವನ್ನು ಪ್ರದರ್ಶಿಸುವ ಮೂಲಕ ಸಭಿಕರ ಮೆಚ್ಚುಗೆಗೆ ಪಾತ್ರರಾದರು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ಪ್ರೊಮೀಳಾ, ಕುಮಾರಿ ಬಿದಿಷಾ, ಶ್ರೀಮತಿ ವಂದನಾ ಮತ್ತು ಶ್ರೀಮತಿ ರೇಖಾ ಅವರು ನಡೆಸಿಕೊಟ್ಟರು.

ಶಾಲೆಯ ಕಾರ್ಯದರ್ಶಿ ಶ್ರೀ ಕಾಶಿನಾಥ್ ಬಿರಾದಾರ್ ವಂದನಾರ್ಪಣೆ ಸಲ್ಲಿಸಿದರು. ಶಾಲೆಯ ವ್ಯವಸ್ಥಾಪಕ ಶ್ರೀ ಬಿ.ಆರ್. ಉಮೇಶ್ ಸ್ವಾಗತಿಸಿದರು. ಉಪಾಧ್ಯಕ್ಷೆ ಶ್ರೀಮತಿ ವೀಣಾ ಜಗದೀಶ್, ಉಪಪ್ರಾಂಶುಪಾಲೆ ಶ್ರೀಮತಿ ಪ್ರೇಮಲತಾ ಬಿ. ಉಪಸ್ಥಿತರಿದ್ದರು. ಆಡಳಿತ ಮಂಡಳಿಯ ಸದಸ್ಯರಾದ ವಸಂತ ಶೆಟ್ಟಿ ಬೆಳ್ಳಾರೆ, ಬಿ.ಎನ್. ಮೋಹನ್ ಕುಮಾರ್, ಗಿರೀಶ್ ಎಸ್., ಹರಿಪ್ರಿಯ ಎಸ್., ಡಾ. ಅಶೋಕ ಗೋನಾಲ್, ರಾಧಾಕೃಷ್ಣ ಭಾಗವಹಿಸಿದ್ದರು. ❑

ಎಚ್.ಎಸ್. ತೇಲಿ

ದೆಹಲಿ ಒಕ್ಕಲಿಗ ಗೌಡ ಸಂಘ, ನವದೆಹಲಿ ವತಿಯಿಂದ ನಾಡಪ್ರಭು ಶ್ರೀ ಕೆಂಪೇಗೌಡರ ಉತ್ಸವ–2026



ಬೆಗದ್ಗುರು ಪರಮಪೂಜ್ಯ ಶ್ರೀ ಶ್ರೀ ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಗಳವರ ಹಾಗೂ ಶ್ರೀ ಶ್ರೀ ಶ್ರೀ ನಂಜಾವಧೂತ ಮಹಾಸ್ವಾಮಿಗಳವರ ಆಶೀರ್ವಾದದೊಂದಿಗೆ ದೆಹಲಿ ಒಕ್ಕಲಿಗ ಗೌಡ ಸಂಘವು, ದೆಹಲಿ ಕರ್ನಾಟಕ ಸಂಘದ ಸಹಕಾರದೊಂದಿಗೆ ಆಯೋಜಿಸಿದ ನಾಡಪ್ರಭು ಶ್ರೀ ಕೆಂಪೇಗೌಡರ ಉತ್ಸವ–ಕಾರ್ಯಕ್ರಮವು 2026ರ ಅಕ್ಟೋಬರ್ 25ರಂದು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಅತ್ಯಂತ ಸಂಭ್ರಮದಿಂದ ನೆರವೇರಿತು.

ಬೆಂಗಳೂರು ನಿರ್ಮಾತೃ, ದೂರದೃಷ್ಟಿಯ ಆಡಳಿತಗಾರ, ಕನ್ನಡ ನಾಡಿನ ಹೆಮ್ಮೆಯ ಪುತ್ರ ಹಾಗೂ ಆದರ್ಶ ನಾಯಕ ನಾಡಪ್ರಭು ಶ್ರೀ ಕೆಂಪೇಗೌಡರ ಸ್ಮರಣಾರ್ಥ ಆಯೋಜಿಸಲಾದ ಈ ಉತ್ಸವವು ದೆಹಲಿಯ ಕನ್ನಡಿಗರನ್ನು ಒಂದೇ ವೇದಿಕೆಯಲ್ಲಿ ಒಗ್ಗೂಡಿಸಿ, ನಾಡು–ನುಡಿ–ಸಂಸ್ಕೃತಿಯ ಅನನ್ಯ ವೈಭವವನ್ನು ಪ್ರತಿಬಿಂಬಿಸಿತು.





ಕಾರ್ಯಕ್ರಮವನ್ನು ಭಾರತದ ಸರ್ವೋಚ್ಚ ನ್ಯಾಯಾಲಯದ ಹಿರಿಯ ನ್ಯಾಯಮೂರ್ತಿಗಳಾದ ಶ್ರೀ ಎಸ್. ವೆಂಕಟ ನಾರಾಯಣ ಭಟ್ಟಿ ಅವರು ಉದ್ಘಾಟಿಸಿದರು. ತಮ್ಮ ಉದ್ಘಾಟನಾ ಭಾಷಣದಲ್ಲಿ ದೆಹಲಿಯಲ್ಲಿ ನೆಲೆಸಿರುವ ಒಕ್ಕಲಿಗರು ಹಾಗೂ ಸಮಸ್ತ ಕನ್ನಡಿಗರು ನಾಡು, ನುಡಿ ಮತ್ತು ಸಂಸ್ಕೃತಿಯ ಸಂರಕ್ಷಣೆಗೆ ತೋರಿಸುತ್ತಿರುವ ಬದ್ಧತೆ ಶ್ಲಾಘನೀಯವಾಗಿದೆ ಎಂದು ಹೇಳಿದರು. ವಿಶೇಷವಾಗಿ ನಾಡಪ್ರಭು ಶ್ರೀ ಕೆಂಪೇಗೌಡರಂತಹ ಮಹಾನ್ ವ್ಯಕ್ತಿತ್ವವನ್ನು ಸ್ಮರಿಸಿ ಉತ್ಸವ ಆಚರಿಸುತ್ತಿರುವುದು ಸಂತಸದ ಸಂಗತಿ. ಇಂತಹ ಮಹಾನುಭಾವರ ಆದರ್ಶ, ಮೌಲ್ಯ ಮತ್ತು ಸಾಧನೆಗಳನ್ನು ಮುಂದಿನ ಪೀಳಿಗೆಗೆ ಬಳುವಳಿಯಾಗಿ ನೀಡುವುದು ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯ ಎಂದು ಅಭಿಪ್ರಾಯಪಟ್ಟರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿಗಳು ಹಾಗೂ ಹಿರಿಯ ಶಾಸಕರಾದ ಶ್ರೀ ಟಿ.ಬಿ. ಜಯಚಂದ್ರ ಅವರು ಮಾತನಾಡುತ್ತಾ, ತಾಯ್ನಾಡಿನಿಂದ ದೂರವಾಗಿ ದೆಹಲಿಯಲ್ಲಿ ನೆಲೆಸಿರುವ ಕನ್ನಡಿಗರು ತಮ್ಮ ಸಂಸ್ಕೃತಿಯನ್ನು ಉಳಿಸಿ ಬೆಳೆಸಲು ಇಂತಹ ಕಾರ್ಯಕ್ರಮಗಳನ್ನು ಆಯೋಜಿಸುತ್ತಿರುವುದು ನಿಜಕ್ಕೂ ಕರ್ನಾಟಕದ ಸಮಸ್ತ ಕನ್ನಡಿಗರಿಗೆ ಹೆಮ್ಮೆಯ ವಿಷಯವಾಗಿದೆ ಎಂದು ಹೇಳಿದರು. ದೆಹಲಿ ಒಕ್ಕಲಿಗ ಗೌಡ ಸಂಘದ ಸಮಾಜಮುಖಿ ಕಾರ್ಯಗಳನ್ನು ಶ್ಲಾಘಿಸಿ ಅಭಿನಂದನೆಗಳನ್ನು ಸಲ್ಲಿಸಿದರು.

ಗೌರವ ಅತಿಥಿಗಳಾಗಿ ಆಗಮಿಸಿದ್ದ ಡಾ. ಕೆ.ಎಸ್. ಸೋಮಶೇಖರ್, ಕಾರ್ಯದರ್ಶಿಗಳು, ರಾಜ್ಯಸಭಾ ಸಚಿವಾಲಯ, ಸಂಸದ ಭವನ, ನವದೆಹಲಿ ಅವರು ಮಾತನಾಡುತ್ತ ನಾಡಪ್ರಭು ಶ್ರೀ ಕೆಂಪೇಗೌಡರ ಜೀವನ ಮತ್ತು ಸಾಧನೆಗಳ ಕುರಿತು ಅತ್ಯಂತ ಅರ್ಥಪೂರ್ಣವಾಗಿ ವಿವರಿಸಿದರು. ಕೇವಲ ಬೆಂಗಳೂರು ನಗರ ನಿರ್ಮಾತೃಗಳಾಗಿ ಮಾತ್ರವಲ್ಲದೆ, ದೂರದೃಷ್ಟಿಯ ಆಡಳಿತಗಾರ, ಉತ್ತಮ ಯೋಜನಾಕಾರ ಹಾಗೂ ಜನಪರ ನಾಯಕನಾಗಿ ಕೆಂಪೇಗೌಡರು ಇತಿಹಾಸದಲ್ಲಿ ಅಜರಾಮರರಾಗಿದ್ದಾರೆ ಎಂದು ಹೇಳಿದರು. ನಾಲ್ಕು ದಿಕ್ಕುಗಳಲ್ಲಿ ಗೋಪುರಗಳನ್ನು ನಿರ್ಮಿಸುವ ಮೂಲಕ ಭವಿಷ್ಯದ ಬೃಹತ್ ನಗರದ ಪರಿಕಲ್ಪನೆಯನ್ನು ಶತಮಾನಗಳ ಹಿಂದೆಯೇ ರೂಪಿಸಿದ ಮಹಾನ್ ವ್ಯಕ್ತಿತ್ವ ಅವರದ್ದು ಎಂದು ಅವರು ತಿಳಿಸಿದರು. ಇಂದು ಬೆಂಗಳೂರು ವಿಶ್ವಮಟ್ಟದ ನಗರವಾಗಿ ಬೆಳೆದಿರುವುದಕ್ಕೆ ನಾಡಪ್ರಭು ಶ್ರೀ ಕೆಂಪೇಗೌಡರ ದೂರದೃಷ್ಟಿಯೇ ಪ್ರಮುಖ ಕಾರಣವಾಗಿದೆ ಎಂದು ವಿವರಿಸಿದರು.

ಕನ್ನಡ ನಾಡು, ಕನ್ನಡ ಭಾಷೆ ಮತ್ತು ಕನ್ನಡ ಸಂಸ್ಕೃತಿಯ ಬಗ್ಗೆ ಅಪಾರ ಕಾಳಜಿ ಹೊಂದಿದ್ದ ಕೆಂಪೇಗೌಡರ ಆದರ್ಶಗಳು ಇಂದಿನ ಪೀಳಿಗೆಗೆ ಮಾರ್ಗದರ್ಶಿಯಾಗಿವೆ ಎಂದು ಅವರು ತಿಳಿಸಿದರು. ಅವರ ಆಡಳಿತದಲ್ಲಿ ಸಾಮಾಜಿಕ ಸಾಮರಸ್ಯ, ಕೃಷಿಗೆ ಉತ್ತೇಜನ, ನೀರಿನ ಸಂರಕ್ಷಣೆ ಹಾಗೂ ಜನರ ಒಳಿತಿಗಾಗಿ ಕೈಗೊಂಡ ಅಭಿವೃದ್ಧಿ ಕಾರ್ಯಗಳು ಇಂದಿಗೂ ಪ್ರಸ್ತುತವಾಗಿದ್ದು, ಇಂದಿನ ಆಡಳಿತ ವ್ಯವಸ್ಥೆಗಳಿಗೂ ಮಾದರಿಯಾಗಿವೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಎಲ್ಲಾ ಕನ್ನಡಿಗರು ಒಗ್ಗಟ್ಟಿನಿಂದ ಬಾಳುವ ಅಗತ್ಯವನ್ನು ಒತ್ತಿಹೇಳಿದ ಅವರು, ಇತ್ತೀಚಿನ ದಿನಗಳಲ್ಲಿ ಬೆಂಗಳೂರಿನಲ್ಲಿ ಹೆಚ್ಚುತ್ತಿರುವ ಟ್ರಾಫಿಕ್ ಸಮಸ್ಯೆ ಹಾಗೂ ಕನ್ನಡಿಗರ ಸಂಖ್ಯೆಯು ಕಡಿಮೆಯಾಗುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿದರು. ಬೆಂಗಳೂರಿನ ಸಾಂಸ್ಕೃತಿಕ ಸ್ವರೂಪ, ಕನ್ನಡದ ಅಸ್ತಿತ್ವ ಮತ್ತು ಪರಂಪರೆಯನ್ನು ಉಳಿಸಿ ಬೆಳೆಸಲು ಪ್ರತಿಯೊಬ್ಬ ಕನ್ನಡಿಗನೂ ತನ್ನದೇ ಆದ ಕೊಡುಗೆ ನೀಡಬೇಕು ಎಂದು ಕರೆ ನೀಡಿದರು. ಅವರ ಪ್ರೇರಣಾದಾಯಕ ಮಾತುಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಎಲ್ಲರ ಮೆಚ್ಚುಗೆಗೆ ಪಾತ್ರವಾದವು.

ಸಾಂಸ್ಕೃತಿಕ ಕಾರ್ಯಕ್ರಮಗಳ ರಂಗು

ಉತ್ಸವದ ಪ್ರಮುಖ ಆಕರ್ಷಣೆಯಾಗಿ ದೆಹಲಿ ಕನ್ನಡಿಗ ಮಹಿಳೆಯರು ಹಾಗೂ ಮಕ್ಕಳಿಂದ ನಡೆದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ಸಭಿಕರ ಹೃದಯ ಗೆದ್ದವು. ಕನ್ನಡ ನಾಡಿನ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಬಿಂಬಿಸುವ ಹಲವು ನೃತ್ಯ,

ಸಂಗೀತ ಮತ್ತು ಭಾವಾಭಿನಯ ಕಾರ್ಯಕ್ರಮಗಳು ಪ್ರೇಕ್ಷಕರನ್ನು ಮನ್ಮೋಹಕ ಲೋಕಕ್ಕೆ ಕರೆದೊಯ್ದವು. ಪುಟಾಣಿ ಮಕ್ಕಳ ಆತ್ಮವಿಶ್ವಾಸಭರಿತ ವೇದಿಕೆ ಪ್ರದರ್ಶನ, ಸಾಂಪ್ರದಾಯಿಕ ಉಡುಗೆಗಳು ಹಾಗೂ ಕನ್ನಡಾಭಿಮಾನದ ಅಭಿವ್ಯಕ್ತಿ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಮಹಿಳೆಯರ ತಂಡಗಳು ಕನ್ನಡ ನಾಡಿನ ವೈವಿಧ್ಯಮಯ ಸಂಸ್ಕೃತಿ, ಆಚರಣೆ ಹಾಗೂ ಪರಂಪರೆಯನ್ನು ಅತ್ಯಂತ ಸುಂದರವಾಗಿ ಅನಾವರಣಗೊಳಿಸಿ ನೆರೆದಿದ್ದವರಿಂದ ಭಾರೀ ಕರತಾಡನೆಯನ್ನು ಪಡೆದವು.

ಕಾರ್ಯಕ್ರಮದ ಮತ್ತೊಂದು ವಿಶೇಷ ಆಕರ್ಷಣೆಯಾಗಿ ಖ್ಯಾತ ಹಾಸ್ಯ ಕಲಾವಿದರಾದ ನಯನ ಹಾಗೂ ಶಿವರಾಜ್ ಕೆ.ಆರ್. ಪೇಟೆ ಅವರು ನೀಡಿದ ಮನರಂಜನಾ ಹಾಸ್ಯ ಕಾರ್ಯಕ್ರಮ ಸಭಿಕರನ್ನು ನಗೆಗಡಲಲ್ಲಿ ತೇಲಿಸಿತು. ಅವರ ಸಹಜ ಅಭಿನಯ, ಸಮಯೋಚಿತ ಹಾಸ್ಯಪ್ರಜ್ಞೆ, ಸಾಮಾಜಿಕ ಸಂದೇಶಗಳೊಂದಿಗೆ ಬೆರೆತ ಸಂಭಾಷಣೆಗಳು ಹಾಗೂ ದಂಪತಿಗಳ ಹಾಸ್ಯಭರಿತ ನಿರೂಪಣೆ ಪ್ರೇಕ್ಷಕರನ್ನು ಆರಂಭದಿಂದ ಅಂತ್ಯದವರೆಗೆ ರಂಜಿಸಿತು. ಅವರ ಪ್ರದರ್ಶನವು ಕಾರ್ಯಕ್ರಮಕ್ಕೆ ಹೊಸ ಚೈತನ್ಯ ತುಂಬಿ, ಎಲ್ಲ ವಯೋಮಾನದ ಪ್ರೇಕ್ಷಕರಿಂದ ಭರ್ಜರಿ ಮೆಚ್ಚುಗೆಯನ್ನು ಪಡೆಯಿತು.

ಇದೇ ಸಂದರ್ಭದಲ್ಲಿ ಖ್ಯಾತ ಗಾಯಕರಾದ ಶ್ರೀ ಅರುಣ್ ವಿ.ಜಿ. ಹಾಗೂ ಶ್ರೀಮತಿ ಶೈಲಜಾ ದೇವನಹಳ್ಳಿ ಅವರು ಹಾಡಿದ ಜನಪದ ಗೀತೆಗಳು ಕಾರ್ಯಕ್ರಮದ ಸೊಬಗನ್ನು ಮತ್ತಷ್ಟು ಹೆಚ್ಚಿಸಿತು. ಅವರ ಸುಮಧುರ ಕಂಠದಿಂದ ಮೂಡಿಬಂದ ಕರ್ನಾಟಕದ ನೆಲದ ಸೊಗಡಿನ ಗೀತೆಗಳು ಕನ್ನಡ ನಾಡಿನ ಪರಂಪರೆ, ಗ್ರಾಮೀಣ ಬದುಕು ಹಾಗೂ ಜನಪದ ಸಂಸ್ಕೃತಿಯ ಸೌಂದರ್ಯವನ್ನು ಮನಮಿಡಿಯುವಂತೆ ಪ್ರತಿಬಿಂಬಿಸಿತು. ಪ್ರತಿಯೊಂದು ಹಾಡು ಕೂಡ ಪ್ರೇಕ್ಷಕರನ್ನು ಕನ್ನಡ ಮಣ್ಣಿನ ಸಾಂಸ್ಕೃತಿಕ ಬೇರುಗಳೊಂದಿಗೆ ಬೆಸೆಯುವಲ್ಲಿ ಯಶಸ್ವಿಯಾಯಿತು.

ಮನಸೂರೆಗೊಂಡ ನಾಡಪ್ರಭು ಜೀವನಕಥೆ

ಕಾರ್ಯಕ್ರಮದ ಅತ್ಯಂತ ಭಾವನಾತ್ಮಕ ಹಾಗೂ ಅರ್ಥಪೂರ್ಣ ಪ್ರದರ್ಶನವೆಂದರೆ ಶ್ರೀ ಲಕ್ಷ್ಮಣ್ ನೆಲಸೊಗಡು ಅವರ ನಿರ್ದೇಶನದಲ್ಲಿ ಮೂಡಿಬಂದ **"ನಾಡಪ್ರಭು ಶ್ರೀ ಕೆಂಪೇಗೌಡರ ಜೀವನಕಥೆ"** ಎಂಬ ನೃತ್ಯರೂಪಕ. ಕೆಂಪೇಗೌಡರ ಬಾಲ್ಯದಿಂದ ಹಿಡಿದು ಬೆಂಗಳೂರು ನಿರ್ಮಾಣದ ದೂರದೃಷ್ಟಿ, ಅವರ ಸಾಹಸಮಯ ಆಡಳಿತ, ಜನಪರ ಚಿಂತನೆ ಹಾಗೂ ಕನ್ನಡ ನಾಡಿಗೆ ಸಲ್ಲಿಸಿದ ಅಪಾರ ಸೇವೆಯನ್ನು ಕಲಾತ್ಮಕವಾಗಿ ಬಿಂಬಿಸಲಾಯಿತು. ನೃತ್ಯ, ಸಂಗೀತ, ಅಭಿನಯ, ವೇಷಭೂಷಣ ಹಾಗೂ ರಂಗವಿನ್ಯಾಸಗಳ ಸುಂದರ ಸಮನ್ವಯದಿಂದ ಮೂಡಿಬಂದ ಈ ನೃತ್ಯರೂಪಕ ಪ್ರೇಕ್ಷಕರ ಮನಸನ್ನು ಸ್ಪರ್ಶಿಸಿತು. ಅನೇಕರು ಭಾವುಕರಾಗಿ ನಾಡಪ್ರಭುಗಳ ಜೀವನದ ಆದರ್ಶಗಳನ್ನು ಮತ್ತೊಮ್ಮೆ ಸ್ಮರಿಸಿದರು. ಕಾರ್ಯಕ್ರಮದ ಅತ್ಯಂತ ಹೃದಯಸ್ಪರ್ಶಿ ಕ್ಷಣಗಳಲ್ಲಿ ಇದೂ ಒಂದಾಗಿ ಉಳಿಯಿತು.

ಗ್ಲೋಬಲ್ ಡ್ಯಾನ್ಸ್ ಅಕಾಡೆಮಿಯ ಅದ್ಭುತ ಪ್ರದರ್ಶನ

ಕಾರ್ಯಕ್ರಮಕ್ಕೆ ಮತ್ತಷ್ಟು ಮೆರುಗು ತುಂಬಿತು. ಈ ತಂಡದ ವಿಶೇಷ ನೃತ್ಯ ಪ್ರದರ್ಶನ. ಕನ್ನಡ ಸಂಸ್ಕೃತಿ, ಆಧುನಿಕ ನೃತ್ಯ ಶೈಲಿ ಹಾಗೂ ಭಾರತೀಯ ಪರಂಪರೆಯನ್ನು ಅದ್ಭುತವಾಗಿ ಸಂಯೋಜಿಸಿ ನೀಡಿದ ಪ್ರದರ್ಶನ ಪ್ರೇಕ್ಷಕರಲ್ಲಿ ಅಪಾರ ಉತ್ಸಾಹ ಮೂಡಿಸಿತು.



ನೃತ್ಯಗಾರರ ಸಮನ್ವಯತೆ, ಶಿಸ್ತು, ಕಲಾತ್ಮಕತೆ ಮತ್ತು ಉತ್ಸಾಹಭರಿತ ವೇದಿಕೆ ಉಪಸ್ಥಿತಿ ಎಲ್ಲರ ಗಮನ ಸೆಳೆಯಿತು. ಅವರ ಅದ್ಭುತ ಪ್ರದರ್ಶನಕ್ಕೆ ಸಭಾಂಗಣ ಕರತಾಡನಗಳಿಂದ ಮೊಳಗಿತು. ಅನೇಕ ಗಣ್ಯರು ಹಾಗೂ ಪ್ರೇಕ್ಷಕರು ಈ ಪ್ರದರ್ಶನವನ್ನು ಕಾರ್ಯಕ್ರಮದ ಪ್ರಮುಖ ಆಕರ್ಷಣೆಗಳಲ್ಲಿ ಒಂದೆಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಭವ್ಯ ಉತ್ಸವದಲ್ಲಿ ದೆಹಲಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಂದ ಆಗಮಿಸಿದ್ದ 750ಕ್ಕೂ ಹೆಚ್ಚು ಕನ್ನಡಿಗರು ಮತ್ತು ಒಕ್ಕಲಿಗ ಬಂಧುಗಳು ಪಾಲ್ಗೊಂಡಿದ್ದರು. ಕರ್ನಾಟಕದ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಒಕ್ಕಲಿಗ ಸಮುದಾಯದ ಹಿರಿಯ ಮುಖಂಡರು, ಸಮಾಜಸೇವಕರು ಹಾಗೂ ಗಣ್ಯರ ಉಪಸ್ಥಿತಿ ಕಾರ್ಯಕ್ರಮದ ಮೆರುಗನ್ನು ಹೆಚ್ಚಿಸಿತು. ದೆಹಲಿ ಮತ್ತು ಕರ್ನಾಟಕದ ನಡುವಿನ ಸಾಂಸ್ಕೃತಿಕ ಬಾಂಧವ್ಯವನ್ನು ಬೆಸೆಯುವ ವೇದಿಕೆಯಾಗಿ ಮೂಡಿಬಂದ ಈ ಉತ್ಸವಕ್ಕೆ ಸಭಾಂಗಣ ತುಂಬಿ ತುಳುಕುವಂತೆ ನೆರೆದಿದ್ದ ಜನರು ಭರ್ಜರಿ ಕರತಾಡನದ ಮೂಲಕ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು.

ಸಮಾರೋಪ

ಒಟ್ಟಾರೆ, ಜಗದ್ಗುರುಗಳ ಆಶೀರ್ವಾದ, ಗಣ್ಯರ ಸಾನ್ನಿಧ್ಯ, ನಾಡಪ್ರಭು ಶ್ರೀ ಕೆಂಪೇಗೌಡರ ಆದರ್ಶಗಳನ್ನು ಸಾರಿದ ಪ್ರೇರಣಾದಾಯಕ ಭಾಷಣಗಳು, ದೆಹಲಿ ಕನ್ನಡಿಗ ಮಹಿಳೆಯರು ಮತ್ತು ಮಕ್ಕಳ ಮನಮೋಹಕ ಸಾಂಸ್ಕೃತಿಕ ಕಾರ್ಯಕ್ರಮಗಳು, ನಯನ ಮತ್ತು ಶಿವರಾಜ್ ಕೆ.ಆರ್. ಪೇಟೆ ಅವರ ಹಾಸ್ಯಪ್ರದರ್ಶನ, ಅರುಣ್ ವಿ.ಜಿ. ಹಾಗೂ ಶೈಲಜಾ ದೇವನಹಳ್ಳಿ ಅವರ ಜನಪದ ಗಾಯನ, ಲಕ್ಷ್ಮಣ್ ನೆಲಸೊಗಡು ಅವರ ನಿರ್ದೇಶನದಲ್ಲಿ ಮೂಡಿಬಂದ ಕೆಂಪೇಗೌಡರ ಜೀವನಾಧಾರಿತ ಹೃದಯಸ್ಪರ್ಶಿ ನೃತ್ಯರೂಪಕ ಹಾಗೂ ಗ್ಲೋಬಲ್ ಡ್ಯಾನ್ಸ್ ಅಕಾಡೆಮಿಯ ನೃತ್ಯಪ್ರದರ್ಶನಗಳು ಉತ್ಸವಕ್ಕೆ ವಿಶೇಷ ಮೆರುಗು ನೀಡಿದವು. ಇವೆಲ್ಲದರ ಸಮ್ಮಿಲನದಿಂದ 'ನಾಡಪ್ರಭು ಶ್ರೀ ಕೆಂಪೇಗೌಡರ ಉತ್ಸವ–2026' ದೆಹಲಿಯ ಕನ್ನಡಿಗರ ಪಾಲಿಗೆ ಸ್ಮರಣೀಯ ಸಾಂಸ್ಕೃತಿಕ ಹಬ್ಬವಾಗಿ ಮೂಡಿ ಬಂದಿತು.

ಈ ಉತ್ಸವವು ದೆಹಲಿಯ ಕನ್ನಡಿಗರ ಏಕತೆ, ಕನ್ನಡಾಭಿಮಾನ, ನಾಡು–ನುಡಿಯ ಮೇಲಿನ ಪ್ರೀತಿ ಹಾಗೂ ನಮ್ಮ ಶ್ರೀಮಂತ ಪರಂಪರೆಯ ಬಗೆಗಿನ ಗೌರವವನ್ನು ಪ್ರತಿಬಿಂಬಿಸಿತು.

ನಾಡಪ್ರಭು ಕೆಂಪೇಗೌಡರ ಆದರ್ಶಗಳು ಮತ್ತು ಕನ್ನಡ ಸಂಸ್ಕೃತಿಯ ವೈಭವವನ್ನು ಮುಂದಿನ ಪೀಳಿಗೆಗೆ ಪರಿಚಯಿಸುವುದರೊಂದಿಗೆ, ಕನ್ನಡಿಗರ ಒಗ್ಗಟ್ಟಿನ ಸಂದೇಶವನ್ನೂ ಈ ಉತ್ಸವ ಸಾರಿತು. ❑

ಪ್ರಶಾಂತ್ ಕುಮಾರ್ ಬಿ.ಆರ್.
ಅಧ್ಯಕ್ಷರು
ದೆಹಲಿ ಒಕ್ಕಲಿಗ ಗೌಡ ಸಂಘ, ನವದೆಹಲಿ





ವಿಶ್ವ ಮಾನಸಿಕ ಆರೋಗ್ಯ ದಿನ 2026: ಆಲಿಸುವುದರ ಶಕ್ತಿ



ಲೇಖಕರು : ರಮ್ಯಾ ಆರ್.ಎಸ್.
ಚಿಕಿತ್ಸಕಿ
ಟ್ರಾಮಾ-ಇನ್‌ಫಾರ್ಮ್ಡ್ ಪ್ರಾಕ್ಟಿಷನರ್
ಇಮೇಲ್ : rrs2397@gmail.com

ಧ್ಯೇಯವಾಕ್ಯ: "ಅನುಭವಗಳಿಗೆ ಕಿವಿಯಾಗೋಣ: ಮನದ ಮಾತು, ಬದಲಾವಣೆಯ ಹಾದಿ

ವಿಶ್ವ ಮಾನಸಿಕ ಆರೋಗ್ಯ ದಿನವನ್ನು ಪ್ರತಿವರ್ಷ ಅಕ್ಟೋಬರ್ 10ರಂದು ಆಚರಿಸಲಾಗುತ್ತದೆ. ಮಾನಸಿಕ ಆರೋಗ್ಯದ ಮಹತ್ವದ ಕುರಿತು ಜನರಲ್ಲಿ ಅರಿವು ಮೂಡಿಸುವುದು, ಮಾನಸಿಕ ಸಮಸ್ಯೆಗಳ ಬಗ್ಗೆ ಸಮಾಜದಲ್ಲಿರುವ ತಪ್ಪು ಕಲ್ಪನೆಗಳು ಮತ್ತು ಕಳಂಕವನ್ನು ದೂರಮಾಡುವುದು, ಮಾನಸಿಕ ಸಂಕಷ್ಟದಲ್ಲಿರುವವರಿಗೆ ಮುಕ್ತವಾಗಿ ತಮ್ಮ ಅನುಭವಗಳನ್ನು ಹಂಚಿಕೊಳ್ಳಲು ಅವಕಾಶ ಕಲ್ಪಿಸುವುದು ಹಾಗೂ ಅಗತ್ಯವಿರುವವರಿಗೆ ಸೂಕ್ತ ನೆರವು ಮತ್ತು ಚಿಕಿತ್ಸೆಯನ್ನು ಪಡೆಯಲು ಪ್ರೋತ್ಸಾಹಿಸುವುದು ಈ ದಿನಾಚರಣೆಯ ಪ್ರಮುಖ ಉದ್ದೇಶಗಳಾಗಿವೆ.

ಮಾನಸಿಕ ಆರೋಗ್ಯವು ಪ್ರತಿಯೊಬ್ಬರ ಬದುಕಿನ ಅವಿಭಾಜ್ಯ ಅಂಗವಾಗಿದೆ. ಆದ್ದರಿಂದ, ಮಾನಸಿಕ ಸಮಸ್ಯೆಗಳನ್ನು ಮುಚ್ಚಿಡದೆ ಅವುಗಳ ಬಗ್ಗೆ ಮುಕ್ತವಾಗಿ ಮಾತನಾಡುವ ವಾತಾವರಣ ನಿರ್ಮಿಸುವುದು, ಸಂಕಷ್ಟದಲ್ಲಿರುವವರ ಮಾತುಗಳನ್ನು ತಾಳ್ಮೆಯಿಂದ ಆಲಿಸುವುದು ಮತ್ತು ಅವರ ಅನುಭವಗಳಿಗೆ ಗೌರವ ನೀಡಿ ಸೂಕ್ತ ಬೆಂಬಲ ಒದಗಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಜನರ ಅನುಭವಗಳಿಗೆ ಕಿವಿಗೊಟ್ಟು, ಅವರ ಅಗತ್ಯಗಳನ್ನು ಅರ್ಥಮಾಡಿಕೊಂಡು, ಅದಕ್ಕೆ ತಕ್ಕಂತೆ ಕಾರ್ಯ ನಿರ್ವಹಿಸುವ ಮೂಲಕವೇ ನಿಜವಾದ ಬದಲಾವಣೆಯನ್ನು ತರಲು ಸಾಧ್ಯ.

ನಾವು ಆಗಾಗ್ಗೆ ಜನರನ್ನು, "ಹೇಗಿದ್ದೀರಿ?" ಎಂದು ಕೇಳುತ್ತೇವೆ. ಆದರೆ ಅವರು ಕೊಡುವ ಉತ್ತರವನ್ನು ಗಮನವಿಟ್ಟು ಕೇಳುವಷ್ಟು ತಾಳ್ಮೆ ಸಮಯ ನಿಜವಾಗಿಯೂ ಇದೆಯೇ ?

ಒಂದು ನಗುವಿನ ಹಿಂದೆ, ಬಿಡುವಿಲ್ಲದ ದಿನಚರಿಯ ಹಿಂದೆ ಅಥವಾ ಸರಳವಾದ "ನಾನು ಚೆನ್ನಾಗಿದ್ದೇನೆ" ಎಂಬ ಮಾತಿನ ಹಿಂದೆ ಆತಂಕ, ಆಯಾಸ, ಮನದ ನೋವು ಇಲ್ಲವೇ ಹೇಳಿಕೊಳ್ಳಲಾಗದ ಭಾವನೆಗಳು ಅಡಗಿರಬಹುದು. ಸದಾ ಓಡುತ್ತಲೇ ಇರಬೇಕೆಂದು ಒತ್ತಾಯಿಸುವ ಈ ಜಗತ್ತಿನಲ್ಲಿ, ಒಮ್ಮೊಮ್ಮೆ ತುಸು ನಿಂತು ನಮ್ಮ ಮನಸ್ಸಿನ ಭಾವನೆಗಳನ್ನು ಅರಿತುಕೊಳ್ಳುವುದು, ಅಗತ್ಯವಿದ್ದಾಗ ನೆರವು ಕೇಳುವುದು ಕೂಡ ಅಷ್ಟೇ ಮುಖ್ಯ ಎಂಬುದನ್ನು ನಾವು ಮರೆತುಬಿಡುತ್ತೇವೆ.

ಈ ವರ್ಷದ ವಿಶ್ವ ಮಾನಸಿಕ ಆರೋಗ್ಯ ದಿನದ ಧ್ಯೇಯವಾಕ್ಯವಾದ "ಅನುಭವಗಳಿಗೆ ಕಿವಿಯಾಗೋಣ: ಮನದ ಮಾತು, ಬದಲಾವಣೆಯ ಹಾದಿ" ಎಂಬುದು ಪ್ರತಿಯೊಬ್ಬರ ಬದುಕಿನ ಕಥೆಗೂ ಕಿವಿಗೊಡಬೇಕು ಎಂಬುದನ್ನು ನೆನಪಿಸುತ್ತದೆ. ಮಾನಸಿಕ ಆರೋಗ್ಯವೆಂದರೆ ಕೇವಲ ಕಾಯಿಲೆಗಳನ್ನು ಗುರುತಿಸುವುದು ಅಥವಾ ಚಿಕಿತ್ಸೆ ಪಡೆಯುವುದಷ್ಟೇ ಅಲ್ಲ. ನಮ್ಮ ದಿನನಿತ್ಯದ ಬದುಕು, ಒಡನಾಟ, ಸಂಬಂಧಗಳು, ಎದುರಿಸುವ ಸಂಕಷ್ಟಗಳು ಮತ್ತು ಅವುಗಳನ್ನು ನಿಭಾಯಿಸುವ ರೀತಿಯೂ ಮಾನಸಿಕ ಆರೋಗ್ಯದ ಭಾಗಗಳೇ ಆಗಿವೆ.

ಮನೋವಿಜ್ಞಾನಿಯಾಗಿ, ಮತ್ತೊಬ್ಬರಿಗೆ ನಾವು ನೀಡಬಹುದಾದ ಅತ್ಯಮೂಲ್ಯ ಕೊಡುಗೆ ಎಂದರೆ, ಯಾವುದೇ ಟೀಕೆ ಅಥವಾ ತೀರ್ಪಿನ ಭಯವಿಲ್ಲದೆ ಮನಸ್ಸಿನ ಮಾತುಗಳನ್ನು ಹಂಚಿಕೊಳ್ಳಲು ಅವಕಾಶ ಮಾಡಿಕೊಡುವುದು ಎಂಬುದು ನನ್ನ ನಂಬಿಕೆ. ನಾವು ಸಾಮಾನ್ಯವಾಗಿ ತಕ್ಷಣ ಸಲಹೆ ನೀಡಲು ಮುಂದಾಗುತ್ತೇವೆ. ನಮ್ಮ ಅನುಭವಗಳನ್ನು ಅವರ ಅನುಭವಗಳೊಂದಿಗೆ ಹೋಲಿಸುತ್ತೇವೆ. ಇಲ್ಲವೇ, "ಎಲ್ಲವೂ ಸರಿಹೋಗುತ್ತದೆ" ಎಂದು ಸಮಾಧಾನ ಹೇಳುತ್ತೇವೆ. ಆದರೆ ಕೆಲವೊಮ್ಮೆ ಜನರಿಗೆ ತಕ್ಷಣದ ಪರಿಹಾರ ಬೇಕಿರುವುದಿಲ್ಲ. ತಮ್ಮ ಮಾತುಗಳನ್ನು ತಾಳ್ಮೆಯಿಂದ ಕೇಳುವ, ತಮ್ಮ ಭಾವನೆಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವ ಒಬ್ಬ ವ್ಯಕ್ತಿ ಬೇಕಿರುತ್ತಾನೆ. ಕೇಳುವ ಕಿವಿಗಳು ಬೇಕಿರುತ್ತವೆ.

ಮನಸ್ಸಿನಲ್ಲಿ ನೋವು, ಸಂಕಟ ಅನುಭವಿಸುವುದು ದೌರ್ಬಲ್ಯದ ಲಕ್ಷಣವಲ್ಲ ಎಂಬುದನ್ನು ನಾವೆಲ್ಲರೂ ಅರಿಯಬೇಕು. ದೈಹಿಕ ಅನಾರೋಗ್ಯಕ್ಕೆ ವೈದ್ಯರ ನೆರವು ಪಡೆಯುವಂತೆಯೇ, ಮನಸ್ಸಿನ ತೊಂದರೆಗಳಿಗೂ ತಜ್ಞರ ನೆರವು ಪಡೆಯುವುದು ಸಹಜವಾದ ಮತ್ತು ಧೈರ್ಯದ ಹೆಜ್ಜೆ ಎಂದು ಭಾವಿಸಬೇಕು.

ಮಾನಸಿಕವಾಗಿ ಆರೋಗ್ಯವಂತ ಸಮಾಜವನ್ನು ಕಟ್ಟುವುದು ಸಣ್ಣಪುಟ್ಟ ಬದಲಾವಣೆಗಳಿಂದಲೇ ಆರಂಭವಾಗುತ್ತದೆ. ಮಾತನಾಡುವಾಗ ಕಾಳಜಿ ತೋರುವುದು, ನಮ್ಮವರ ಯೋಗಕ್ಷೇಮವನ್ನು ವಿಚಾರಿಸುವುದು, ಮನಸ್ಸಿನ ತೊಂದರೆಗಳ ಬಗ್ಗೆ ಇರುವ ತಪ್ಪು ಕಲ್ಪನೆಗಳನ್ನು ಹೋಗಲಾಡಿಸುವುದು ಮತ್ತು ಮಾನಸಿಕ ಆರೋಗ್ಯ ತಜ್ಞರ ನೆರವು ಎಲ್ಲರಿಗೂ ಸುಲಭವಾಗಿ ದೊರೆಯುವಂತೆ ಮಾಡುವುದು ಇವೆಲ್ಲವೂ ಮುಖ್ಯ. ಎಲ್ಲಕ್ಕಿಂತ ಹೆಚ್ಚಾಗಿ, ಜನರ ಮಾತುಗಳನ್ನು ಆಲಿಸುವುದಷ್ಟೇ ಅಲ್ಲದೆ, ಅವರ ಬದುಕಿನಲ್ಲಿ ನಿಜವಾದ ಬದಲಾವಣೆ ತರಬಲ್ಲ ರೀತಿಯಲ್ಲಿ ಅವರಿಗೆ ಬೆಂಬಲ ನೀಡಬೇಕು.

ಈ ವಿಶ್ವ ಮಾನಸಿಕ ಆರೋಗ್ಯ ದಿನದಂದು, ಮನುಷ್ಯರನ್ನು ಅವರ ಹೊರನೋಟದಿಂದ ಅಳೆಯದೆ, ಅವರ ಒಳಮನಸ್ಸನ್ನು ಅರಿಯಲು ಪ್ರಯತ್ನಿಸೋಣ. ಮನದ ಮಾತುಗಳನ್ನು ಮುಕ್ತವಾಗಿ ಹಂಚಿಕೊಳ್ಳಲು ಅವಕಾಶ ಮಾಡಿಕೊಡೋಣ. ಮತ್ತೊಬ್ಬರ ಬದುಕಿನ ಪಯಣವನ್ನು ನಾವು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗದಿರಬಹುದು. ಆದರೆ ಅವರ ನೋವು, ಸಂಕಟಗಳನ್ನು ಕರುಣೆಯಿಂದ ಕಾಣುವ ಮತ್ತು ಸಹಾನುಭೂತಿಯಿಂದ ಸ್ಪಂದಿಸುವ ಮನಸ್ಸು ನಮ್ಮದಾಗಿರಲಿ.

ಏಕೆಂದರೆ, ಕೆಲವೊಮ್ಮೆ ಬದಲಾವಣೆಯ ಮೊದಲ ಹೆಜ್ಜೆ ಮತ್ತೊಬ್ಬರ ಮಾತುಗಳನ್ನು ಮನಸ್ಸಿಟ್ಟು ಕೇಳಲು ಸಿದ್ಧರಾಗಿರುವುದೇ ಆಗಿದೆ.❑ **(ಇಂಗ್ಲಿಷ್ ಲೇಖನದ ಭಾವಾನುವಾದ)**

ಪ್ರಾಚೀನ ಗ್ರೀಕ್ ಚಿಂತನೆಗೆ ಆಧುನಿಕ ಕಾವ್ಯದ ಸ್ಪರ್ಶ ನೀಡಿದ ಲೇಖಕಿ



ಕನಡಾದ ಕವಯಿತ್ರಿ, ಪ್ರಬಂಧಕಾರ್ತಿ, ಅನುವಾದಕಿ ಮತ್ತು ಶಾಸ್ತ್ರೀಯ ಗ್ರೀಕ್ ಸಾಹಿತ್ಯದ ವಿದ್ವಾಂಸರಾದ ಆನ್ ಕಾರ್ಸನ್ ಸಮಕಾಲೀನ ವಿಶ್ವ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನ ಪಡೆದವರು. ಕಾವ್ಯ, ಗದ್ಯ, ನಾಟಕ, ತತ್ವಚಿಂತನೆ ಮತ್ತು ವೈಯಕ್ತಿಕ ನೆನಪುಗಳನ್ನು ಒಂದೇ ಬರವಣಿಗೆಯಲ್ಲಿ ಬೆಸೆಯುವ ಅವರ ಸಾಹಿತ್ಯಿಕ ಪ್ರಯೋಗಗಳು ಓದುಗರನ್ನು ಹೊಸ ಅನುಭವಕ್ಕೆ ತೆರೆದಿಡುತ್ತವೆ.

ಟೊರೊಂಟೊ ವಿಶ್ವವಿದ್ಯಾಲಯದಲ್ಲಿ ಗ್ರೀಕ್ ಸಾಹಿತ್ಯವನ್ನು ಅಧ್ಯಯನ ಮಾಡಿದ ಅವರು, ಪ್ರಾಚೀನ ಗ್ರೀಕ್ ಕಾವ್ಯ ಮತ್ತು ಪುರಾಣಗಳನ್ನು ಆಧುನಿಕ ಬದುಕಿನ ಪ್ರಶ್ನೆಗಳೊಂದಿಗೆ ಮುಖಾಮುಖಿಯಾಗಿಸುತ್ತಾರೆ. ಪ್ರೇಮ, ಕಾಮನೆ, ವಿರಹ, ಏಕಾಂತ, ಸಾವು, ನೆನಪು ಮತ್ತು ಮಾನವ ಸಂಬಂಧಗಳ ಸಂಕೀರ್ಣತೆಗಳು ಅವರ ಬರಹದ ಪ್ರಮುಖ ವಸ್ತುಗಳು.

ಪ್ರಮುಖ ಕೃತಿಗಳು : Eros the Bittersweet-ಪ್ರೇಮ ಮತ್ತು ಕಾಮನೆಯ ತಾತ್ವಿಕ ಆಯಾಮಗಳ ಅನ್ವೇಷಣೆ, Autobiography of Red-ಗ್ರೀಕ್ ಪುರಾಣದ ಪಾತ್ರವೊಂದನ್ನು ಆಧರಿಸಿದ ಕಾವ್ಯಾತ್ಮಕ ಕಾದಂಬರಿ, The Beauty of the Husband-ಪ್ರೇಮ, ದಾಂಪತ್ಯ ಮತ್ತು ದ್ರೋಹದ ಕುರಿತ ಕೃತಿ, Nox-ಸಹೋದರನ ಸಾವಿನ ನಂತರದ ನೆನಪು ಮತ್ತು ಶೋಕವನ್ನು ಕಲಾತ್ಮಕವಾಗಿ ಕಟ್ಟಿಕೊಡುವ ಕೃತಿ, If Not, Winter-ಪ್ರಾಚೀನ ಗ್ರೀಕ್ ಕವಯಿತ್ರಿ ಸ್ಯಾಫೊ ಅವರ ಕವಿತೆಗಳ ಅನುವಾದ.

2026ರ ಅಕ್ಟೋಬರ್ 8ರಂದು ಅವರಿಗೆ ಸಾಹಿತ್ಯ ನೊಬೆಲ್ ಪ್ರಶಸ್ತಿ ಘೋಷಿಸಲಾಯಿತು. ಪ್ರಾಚೀನ ಸಾಹಿತ್ಯ ಪರಂಪರೆಯೊಂದಿಗೆ ಸೃಜನಶೀಲ ಸಂವಾದ ನಡೆಸುತ್ತಾ, ಸಮಕಾಲೀನ ಸಾಹಿತ್ಯಕ್ಕೆ ಹೊಸ ರೂಪಗಳನ್ನು ನೀಡಿದ ಅವರ ಸಾಧನೆಯನ್ನು ನೊಬೆಲ್ ಸಮಿತಿ ಗುರುತಿಸಿತು.

ಆನ್ ಕಾರ್ಸನ್ ಅವರ ಸಾಹಿತ್ಯದ ವಿಶೇಷತೆ ಎಂದರೆ, ಹಳೆಯ ಪುರಾಣಗಳನ್ನು ಕೇವಲ ಪುನರ್‌ಕಥನ ಮಾಡುವುದಲ್ಲ; ಅವುಗಳೊಳಗೆ ಅಡಗಿರುವ ಮನುಷ್ಯನ ಆಸೆ, ನೋವು, ಸಂಘರ್ಷ ಮತ್ತು ಅಸ್ತಿತ್ವದ ಪ್ರಶ್ನೆಗಳನ್ನು ಇಂದಿನ ಬದುಕಿನ ಬೆಳಕಿನಲ್ಲಿ ಮರುಶೋಧಿಸುವುದು. ಪ್ರಾಚೀನತೆಯ ಬೇರುಗಳಲ್ಲಿ ನಿಂತು ಆಧುನಿಕತೆಯ ಪ್ರಶ್ನೆಗಳನ್ನು ಕೇಳುವ ಆನ್ ಕಾರ್ಸನ್, ಸಾಹಿತ್ಯದ ಗಡಿಗಳನ್ನು ವಿಸ್ತರಿಸಿದ ಅಪರೂಪದ ಲೇಖಕಿ.❑

ನವದೆಹಲಿಯಲ್ಲಿ ನಡೆದ ಅಂತಾರಾಷ್ಟ್ರೀಯ ಬಹುಭಾಷಾ ಕವಿಗೋಷ್ಠಿಯಲ್ಲಿ ತುಳು ಭಾಷೆಗೆ ಅವಕಾಶ



ಕರ್ನಾಟಕ ರಾಜ್ಯದಲ್ಲಿ ದ್ವಿತೀಯ ಅಧಿಕೃತ ಭಾಷೆಯ ಸ್ಥಾನ ಪಡೆದಿರುವ ತುಳು ಭಾಷೆಗೆ ಇದೀಗ ರಾಷ್ಟ್ರೀಯ ಮಟ್ಟದ ಮತ್ತೊಂದು ಅಪರೂಪದ ಗರಿಮೆ ಲಭಿಸಿದೆ.

ದೆಹಲಿಯ ಇಂಡಿಯಾ ಇಂಟರ್‌ನ್ಯಾಷನಲ್ ಸೆಂಟರ್ (IIC) ಆಯೋಜಿಸಿದ್ದ "ದ ವರ್ಲ್ಡ್ ವಿದಿನ್ ದ ವರ್ಡ್" ಶೀರ್ಷಿಕೆಯಡಿ ಪ್ರಕೃತಿ ವಿಷಯದ ಮೇಲೆ ಅಕ್ಟೋಬರ್ 31, 2026ರ ಶನಿವಾರದಂದು ನಡೆದ ರಾಷ್ಟ್ರೀಯ ಮಟ್ಟದ ಕಾವ್ಯ ವಾಚನ ಗೋಷ್ಠಿಯಲ್ಲಿ ಒಟ್ಟು ಎಂಟು ಭಾಷೆಗಳು ಆಯ್ಕೆಯಾಗಿದ್ದು, ಅದರಲ್ಲಿ ತುಳು ಭಾಷೆಗೆ ಸ್ಥಾನ ಸಿಕ್ಕಿರುವುದು ರಾಷ್ಟ್ರೀಯ ಗರಿಮೆಯಾಗಿದೆ.

ಇಂಗ್ಲೀಷ್, ಸಂಸ್ಕೃತ, ಉರ್ದು, ಹಿಂದಿ, ಬಂಗಾಳಿ, ಮಣಿಪುರಿ, ತೆಲುಗು ಭಾಷೆಗಳ ಜೊತೆಗೆ ತುಳು ಭಾಷೆಯಲ್ಲಿ ನಡೆದ ಈ ಗೋಷ್ಠಿಯಲ್ಲಿ ಭಾರತದ ವಿವಿಧ ಭಾಗಗಳ ಪ್ರಮುಖ ಕವಿಗಳು ರಚಿಸಿದ ಪ್ರಕೃತಿ ಕುರಿತ ಕವನಗಳನ್ನು ಮೂಲ ಭಾಷೆಗಳಲ್ಲೇ ವಾಚಿಸಿದ್ದು ಈ ಕಾರ್ಯಕ್ರಮದ ವೈಶಿಷ್ಟ್ಯವಾಗಿತ್ತು. ದೇಶದ ವಿವಿಧ ಭಾಷಿಕ ವೈವಿಧ್ಯತೆ ಮತ್ತು ಸಂಸ್ಕೃತಿಯನ್ನು ಕಾವ್ಯದ ಮೂಲಕ ಒಂದೇ ವೇದಿಕೆಯಲ್ಲಿ ಬೆಸೆಯುವ ಪ್ರಯತ್ನ ಸಭಿಕರ ಮನ ಗೆದ್ದಿತು.

ಕರ್ನಾಟಕ ರಾಜ್ಯದಲ್ಲಿ ದ್ವಿತೀಯ ಅಧಿಕೃತ ಭಾಷೆಯ ಸ್ಥಾನ ಪಡೆದಿರುವ ತುಳು ಭಾಷೆಗೆ ಇದೀಗ ರಾಷ್ಟ್ರ ರಾಜಧಾನಿಯ ಪ್ರಮುಖ ಸಾಂಸ್ಕೃತಿಕ ವೇದಿಕೆಯಲ್ಲಿ ಸಿಕ್ಕ ಈ ಮನ್ನಣೆಯು, ತುಳುವನ್ನು ಸಂವಿಧಾನದ 8ನೇ ಪರಿಚ್ಛೇದಕ್ಕೆ ಸೇರಿಸಬೇಕೆಂಬ ದಶಕಗಳ ಬೇಡಿಕೆಗೆ ಮತ್ತಷ್ಟು ಶಕ್ತಿ ತುಂಬಿದೆ.

ಈ ರಾಷ್ಟ್ರೀಯ ಸಮ್ಮೇಳನದಲ್ಲಿ ಕರ್ನಾಟಕ ರಾಜ್ಯದಿಂದ ತುಳು ಭಾಷೆಯನ್ನು ಪ್ರತಿನಿಧಿಸಿದ ತುಳು ಭಾಷಾ ಚಿಂತಕ ಹಾಗೂ ವಾಗ್ಮಿ ಪ್ರಕಾಶ್ ಶೆಟ್ಟಿ ಉಳೆಪಾಡಿ ಅವರು ರಾಜ್ಯದ ಹೆಸರಾಂತ ಏಳು ತುಳು ಕವಿಗಳ ಕವನಗಳನ್ನು ಪ್ರಸ್ತುತಪಡಿಸಿ ಸಭಿಕರ ಮೆಚ್ಚುಗೆಗೆ ಪಾತ್ರರಾದರು, ಕವಿ, ಬರಹಗಾರ, ನಾಟಕಕಾರರು ಆಗಿರುವ ಇವರು ತುಳು ಮಹಾಸಭೆ ದೆಹಲಿಯ ಸಂಚಾಲಕರೂ, ದೆಹಲಿ ತುಳುಸಿರಿಯ ಸಹಕಾರ್ಯದರ್ಶಿಯೂ ಆಗಿದ್ದು ದೆಹಲಿಯ ತುಳು ಕನ್ನಡ ವಲಯದಲ್ಲಿ ಸಕ್ರಿಯರಾಗಿ ಭಾಷೆ ಮತ್ತು ಸಂಸ್ಕೃತಿಯನ್ನು ರಾಷ್ಟ್ರೀಯ ಮಟ್ಟದಲ್ಲಿ ಪಸರಿಸುತ್ತಿದ್ದಾರೆ.

ಈ ಕಾವ್ಯಗೋಷ್ಠಿಯಲ್ಲಿ ತುಳು ನಾಡಿನ ಪ್ರಸಿದ್ಧ ಕವಿಗಳಿಂದ ಒಟ್ಟು ಏಳು ಕೃತಿಗಳು ಅಂತಿಮ ಸುತ್ತಿನಲ್ಲಿ ಆಯ್ಕೆಗೊಂಡಿದ್ದವು. ಮುದ್ದು ಮೂಡುಬೆಳ್ಳೆ ಅವರ "ಬದ್‌ಕ್ ಒರಿಪುಗ ", ಅಶೋಕ್ ಎನ್. ಕಡೇಶಿವಾಲಯ ಅವರ "ಎಲ್ಲೆದ ಬಲ್ಲೆಗ್ ಪೊಗ್ಗುನಗ", ಎಚ್.ಕೆ. ನಯನಾಡು ಅವರ "ಪಸಂದ್ರನೊರಿಪುಗ", ಪಾಂಗಾಳ ಬಾಬು ಕೊರಗ ಅವರ "ಪ್ರಕೃತಿದ ಅಸ್ತಿತ್", ಉಮೇಶ್ ಶಿರಿಯ ಅವರ "ಉದಿಪುದ ಪೊರ್ಲೈಸಿರ", ಗೀತಾ ಲಕ್ಷ್ಮೀಶ್ ಅವರ "ಪಸಂದ್ರದ ಗೇನ" ಮತ್ತು ವಿಶ್ವನಾಥ ಕುಲಾಲ್ ಮಿತ್ತೂರು ಅವರ "ಪಸಂದ್ರ ಒರಿಯೊಡು" ಕವನಗಳು ಈ ಗೋಷ್ಠಿಯಲ್ಲಿ ಪ್ರಸ್ತುತಿ ಪಡೆದವು.

ಕವನಗಳನ್ನು ಮೂಲ ತುಳು ಭಾಷೆಯಲ್ಲಿ ವೇದಿಕೆಯಲ್ಲಿ ಪ್ರಸ್ತುತಪಡಿಸುವಾಗ ಪ್ರಾಜೆಕ್ಟರ್ ಪರದೆಯಲ್ಲಿ ಇಂಗ್ಲೀಷ್ ಅನುವಾದ ಮೂಡಿ ಬರುತ್ತಿದ್ದು ಲೈವ್ ಟ್ರಾನ್ಸ್‌ಲೇಟ್ ಆಗಿ ನೆರೆದ ವಿವಿಧ ಭಾಷೆಯ ಶ್ರೋತೃಗಳಿಗೆ ಅರ್ಥವಾಗುವಂತೆ ಇಂಡಿಯಾ ಇಂಟರ್‌ನ್ಯಾಷನಲ್ ಸಂಸ್ಥೆ ವ್ಯವಸ್ಥೆ ಮಾಡಿದ್ದರು.

ಈ ಎಲ್ಲಾ ಕವನಗಳು ತುಳುನಾಡಿನ ಪ್ರಕೃತಿ, ಭಾಷೆ, ಸಂಸ್ಕೃತಿ ವೈಭವ, ರೋಧನೆ ಗಳಿಂದ ಕೂಡಿ ರಾಷ್ಟ್ರೀಯ ಮಟ್ಟದ ಉನ್ನತ ಕೇಳುಗರಿಗೆ ಕರಾವಳಿಯ ಚಿತ್ರಣವನ್ನು ಕಟ್ಟಿ ಕೊಟ್ಟು ಮೆಚ್ಚುಗೆಗೆ ಪಾತ್ರವಾಯಿತು.

ಗೋಷ್ಠಿಯಲ್ಲಿ ತುಳುವಿನೊಂದಿಗೆ ಇತರ ಭಾಷೆಗಳ ಪ್ರಮುಖ ತಜ್ಞರು ತಮ್ಮ ಮೂಲ ಭಾಷೆಗಳಲ್ಲಿ ಕವನ ವಾಚಿಸಿದರು. ಇಂಗ್ಲಿಷ್‌ನಲ್ಲಿ ಸುನಿತ್ ಟಂಡನ್, ಸಂಸ್ಕೃತದಲ್ಲಿ ಸುಧಾ ಗೋಪಾಲಕೃಷ್ಣನ್, ಹಿಂದಿಯಲ್ಲಿ ಅಲ್ಕಾ ರಂಜನ್, ಪೂರ್ವಾ ಭಾರದ್ವಾಜ್ ಮತ್ತು ರಜಾ ಹೈದರ್, ಬಂಗಾಳಿಯಲ್ಲಿ ಪೂರ್ಣೇಂದು ಭಟ್ಟಾಚಾರ್ಯ, ಉರ್ದುವಿನಲ್ಲಿ ಡಾ. ಅನೀಸೂರ್ ರೆಹಮಾನ್, ಮಣಿಪುರಿಯಲ್ಲಿ ತಂಗ್‌ಜಾಮ್ ಹಿಂದೂಸ್ಥಾನಿ ದೇವಿ, ತುಳು ಭಾಷೆಯಲ್ಲಿ ಪ್ರಕಾಶ್ ಶೆಟ್ಟಿ ಉಳೆಪಾಡಿ, ಹಾಗೂ ತೆಲುಗಿನಲ್ಲಿ ಪ್ರೊ. ನಾರಾಯಣಪ್ಪ ಅವರು ಕವನಗಳನ್ನು ವಾಚಿಸಿದರು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಐಐಸಿ ಟ್ರಸ್ಟಿ ಅಶ್ವಜಿತ್ ಸಿಂಗ್ ಮಾತನಾಡಿ, "ಪ್ರಕೃತಿ ಮತ್ತು ಮಾನವನ ನಡುವಿನ ಬಾಂಧವ್ಯವನ್ನು ಸಾಹಿತ್ಯ ಹಾಗೂ ಕಾವ್ಯಗಳ ಮೂಲಕ ಮರುಚಿಂತನೆಗೆ ಒಳಪಡಿಸುವುದು ಇಂದಿನ ತುರ್ತು ಅಗತ್ಯವಾಗಿದೆ" ಎಂದು ಹೇಳಿದ ಅವರು, "ಪಂಜಾಬ್ ರಾಜ್ಯದಲ್ಲಿ ಕಳೆದ ತಮ್ಮ ಬಾಲ್ಯವನ್ನು ನೆನಪಿಸಿ ಪ್ರಕೃತಿಯು ಕಾವ್ಯದೊಂದಿಗೆ ನಮ್ಮನ್ನು ಮೂಲಕ್ಕೆ ಮತ್ತಷ್ಟು ಹತ್ತಿರಕ್ಕೆ ಎಳೆದು ತರುತ್ತದೆ" ಎಂದರು

ಐಐಸಿ ಪ್ರಕಟಣೆಗಳ ಸಂಪಾದಕರಾದ ಕೆ.ಇ. ಪ್ರಿಯಂವದಾ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು.

ನವದೆಹಲಿಯ ಕಮಲಾದೇವಿ ಕಾಂಪ್ಲೆಕ್ಸ್‌ನ ಸೆಮಿನಾರ್ ಹಾಲ್‌ನಲ್ಲಿ ನಡೆದ ಈ ಗೋಷ್ಠಿಯನ್ನು ಅತ್ಯಂತ ಅಚ್ಚುಕಟ್ಟಾಗಿ ಸಂಯೋಜಿಸಿದ್ದ ಹಿರಿಯ ಸಾಹಿತಿ ಹಾಗೂ ಚಿಂತಕರಾದ ಮಲಾಶ್ರೀ ಲಾಲ್ ಮತ್ತು ದೆಹಲಿ ಯೂನಿವರ್ಸಿಟಿಯ ಅಪೂರ್ವಾನಂದ್ ಅವರು "ಕಾವ್ಯ ಯಾವುದೇ ಭಾಷೆಯಲ್ಲಿದ್ದರೂ ಅದರ ಭಾವ ನಮ್ಮನ್ನು ಪ್ರಕೃತಿಯತ್ತ ಹೊತ್ತೊಯ್ದು ಮೂಲ ಮಣ್ಣಿನ ಪರಿಮಳವನ್ನು ಆಘ್ರಾಣಿಸುವಂತೆ ಮಾಡುತ್ತದೆ ಎಂದು ಅಭಿಪ್ರಾಯಪಟ್ಟರು. ಕಾರ್ಯಕ್ರಮದಲ್ಲಿ ಅಪಾರ ಸಂಖ್ಯೆಯ ಸಾಹಿತಿಗಳು, ಚಿಂತಕರು, ಸಾಹಿತ್ಯಾಸಕ್ತರು ಹಾಗೂ ಕಲಾಪ್ರೇಮಿಗಳು ಉಪಸ್ಥಿತರಿದ್ದು ಕಾವ್ಯ ವಾಚನವನ್ನು ಆನಂದಿಸಿದರು. ❑

ಅಭಿಮತ ವರದಿ

2026 ರ ನೋಬೆಲ್ ಶಾಂತಿ ಪ್ರಶಸ್ತಿಗೆ ಭಾಜನರಾದ ನವಿ ಪಿಳ್ಳೆ: ನ್ಯಾಯದ ಪರ ನಿಂತ ದಿಟ್ಟ ಧ್ವನಿ



ನವನೇತಮ್ 'ನವಿ' ಪಿಳ್ಳೆ (Navanethem "Navi" Pillay) ಅವರು 2026ರ ನೊಬೆಲ್ ಶಾಂತಿ ಪ್ರಶಸ್ತಿಗೆ ಭಾಜನರಾದ ದಕ್ಷಿಣ ಆಫ್ರಿಕಾದ ಖ್ಯಾತ ನ್ಯಾಯಶಾಸ್ತ್ರಜ್ಞೆ. ಭಾರತದ ಮೂಲದ ತಮಿಳು ಕುಟುಂಬದಲ್ಲಿ ಜನಿಸಿದ ಅವರು, ನ್ಯಾಯ, ಮಾನವ ಹಕ್ಕುಗಳು ಮತ್ತು ಅಂತರರಾಷ್ಟ್ರೀಯ ಕಾನೂನಿನ ಪರವಾಗಿ ದಶಕಗಳಿಂದ ದಿಟ್ಟವಾಗಿ ಧ್ವನಿ ಎತ್ತಿದವರು. ಅವರ ತಂದೆ ಬಸ್ ಚಾಲಕರಾಗಿ ದುಡಿದು ಕುಟುಂಬವನ್ನು ಸಲಹಿದವರು. ಸಾಮಾನ್ಯ ದುಡಿಯುವ ಕುಟುಂಬದಿಂದ ಬಂದ ಪಿಳ್ಳೆ, ತಮ್ಮ ಅಸಾಧಾರಣ ಹೋರಾಟ ಮತ್ತು ಕಾನೂನು ಜ್ಞಾನದ. ಮೂಲಕ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡರು.

ಅಂತರರಾಷ್ಟ್ರೀಯ ಖ್ಯಾತಿಯ ಮಾನವ ಹಕ್ಕುಗಳ ಹೋರಾಟಗಾರ್ತಿ ಮತ್ತು ನ್ಯಾಯಮೂರ್ತಿಯಾಗಿ ವರ್ಣಭೇದ ನೀತಿಯ ಕರಾಳ ದಿನಗಳಲ್ಲಿ ಶೋಷಿತರು ಮತ್ತು ರಾಜಕೀಯ ಕೈದಿಗಳ ಪರವಾಗಿ ಹೋರಾಡಿದವರು. ದಕ್ಷಿಣ ಆಫ್ರಿಕಾದ ಹೈಕೋರ್ಟ್‌ನ ಮೊದಲ ಕಪ್ಪು ಮಹಿಳಾ ನ್ಯಾಯಾಧೀಶೆಯಾದ ಹೆಗ್ಗಳಿಕೆ ಇವರದು.

ರುವಾಂಡಾ ಅಂತರರಾಷ್ಟ್ರೀಯ ಅಪರಾಧ ನ್ಯಾಯಮಂಡಳಿಯ ಅಧ್ಯಕ್ಷೆಯಾಗಿ ಹಾಗೂ ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಹೈಕಮಿಷನರ್ ಆಗಿ ಸೇವೆ ಸಲ್ಲಿಸಿದ್ದಾರೆ. ಮಹಿಳೆಯರ ಹಕ್ಕುಗಳು, ಲೈಂಗಿಕ ಹಿಂಸೆ, ನರಮೇಧ ಮತ್ತು ಯುದ್ಧಾಪರಾಧಗಳ ವಿರುದ್ಧ ನಿರಂತರವಾಗಿ ಧ್ವನಿ ಎತ್ತಿದ್ದಾರೆ. 2026ರ ನೊಬೆಲ್ ಶಾಂತಿ ಪ್ರಶಸ್ತಿಗೆ ಭಾಜನರಾದ ನವಿ ಪಿಳ್ಳೆ ಅವರ ಬದುಕು ನ್ಯಾಯ, ಮಾನವ ಘನತೆ ಮತ್ತು ಸಮಾನತೆಯ ಮೌಲ್ಯಗಳಿಗೆ ಸಮರ್ಪಿತವಾದ ಹೋರಾಟದ ಕಥೆಯಾಗಿದೆ. ಅಧಿಕಾರಕ್ಕಿಂತ ನ್ಯಾಯ ದೊಡ್ಡದು ಎಂಬ ನಂಬಿಕೆಗೆ ಅವರ ಬದುಕು ಸಾಕ್ಷಿಯಾಗಿದೆ. ❑

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ವಾರ್ಷಿಕ ಮಹಾಸಭೆ

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ವಾರ್ಷಿಕ ಮಹಾಸಭೆಯು ದಿನಾಂಕ 25.10.2026 ರಂದು ಸಂಸ್ಥೆಯ ಆವರಣದಲ್ಲಿ ಜರುಗಿತು. ಸಂಸ್ಥೆಯ ಅಧ್ಯಕ್ಷ ಡಾ. ಅವನೀಂದ್ರನಾಥ್ ರಾವ್ ವೈ. ಅವರು ಮಹಾಸಭೆಯ ಅಧ್ಯಕ್ಷತೆ ವಹಿಸಿದ್ದರು.

ವರ್ಷ 2023–24, 2024–25 ಮತ್ತು 2025–26ರ ವಾರ್ಷಿಕ ವರದಿ, ಲೆಕ್ಕಪತ್ರಗಳು ಮತ್ತು ಬಜೆಟ್ ಅನ್ನು ಸಭೆ ಅನುಮೋದಿಸಿತು.

ಈ ಮೊದಲು ನಡೆದ ವಿಶೇಷ ಸಭೆಯಲ್ಲಿ ಸಂಸ್ಥೆಗೆ ನಡೆಯುವ ಮುಂದಿನ ಚುನಾವಣೆವರೆಗೆ ಡಾ. ಅವನೀಂದ್ರನಾಥ್ ರಾವ್ ಅವರು ಅಧ್ಯಕ್ಷರಾಗಿ ಮತ್ತು ಶ್ರೀ ಕಾಶೀನಾಥ್ ಬಿರಾದಾರ್ ಅವರು ಕಾರ್ಯದರ್ಶಿಯಾಗಿ ಮುಂದುವರಿಯಬೇಕು ಎನ್ನುವ ನಿರ್ಣಯವನ್ನು ಹಿರಿಯ ಸದಸ್ಯ ಶ್ರೀ ಈಶ್ವರ ಮಡಿವಾಳ ಅವರು ಪ್ರಸ್ತಾಪಿಸಿ, ಶ್ರೀ ಕೆ.ಆರ್. ರಾಮಮೂರ್ತಿಯವರು ಅನುಮೋದಿಸಿದರು. ಆಜೀವ ಸದಸ್ಯರಾದ ಶ್ರೀ ರೇಣುಕುಮಾರ್ ಆರ್., ಶ್ರೀ ಶ್ರೀಹರಿ, ಶ್ರೀ ಶಿವಪ್ಪ ಎಂ. ಮತ್ತು ಕೃಷ್ಣರಾಜ್



ಅವರು ಚರ್ಚೆಯಲ್ಲಿ ಭಾಗವಹಿಸಿದರು.

ಉಪಾಧ್ಯಕ್ಷೆ ಶ್ರೀಮತಿ ವೀಣಾ ಜಗದೀಶ್, ಗೌರವ ಕಾರ್ಯದರ್ಶಿ ಶ್ರೀ ಕಾಶೀನಾಥ್ ಬಿರಾದಾರ್, ಶಾಲೆಯ ಪ್ರಬಂಧಕ ಶ್ರೀ ಉಮೇಶ್ ಬಿ.ಆರ್. ಉಪಸ್ಥಿತರಿದ್ದರು. ಆಡಳಿತ ಮಂಡಳಿಯ ಸದಸ್ಯರು ಮತ್ತು ಲೆಕ್ಕಪತ್ರ ಪರಿಶೋಧಕರು ಭಾಗವಹಿಸಿದ್ದರು. ವಂದನಾರ್ಪಣೆಯೊಂದಿಗೆ ಮಹಾಸಭೆ ಮುಕ್ತಾಯವಾಯಿತು. ❑

ಕಾಶೀನಾಥ್ ಬಿರಾದಾರ್

ಅವಿಭಜಿತ ವಿಜಯಪುರ ಜಿಲ್ಲೆಯ ಸ್ವಾತಂತ್ರ್ಯ ಚಳವಳಿ ಗ್ರಂಥ ಲೋಕಾರ್ಪಣೆ



ಅವಿಭಜಿತ ವಿಜಯಪುರ ಜಿಲ್ಲೆಯ ಸ್ವಾತಂತ್ರ್ಯ ಚಳವಳಿಯ ಇತಿಹಾಸ, ಹೋರಾಟಗಾರರ ಕೊಡುಗೆ ಹಾಗೂ ಅಂದಿನ ಚಳವಳಿಗಳ ಸ್ವರೂಪವನ್ನು ಸಮಗ್ರವಾಗಿ ಪರಿಚಯಿಸುವ 'ಅವಿಭಜಿತ ವಿಜಯಪುರ ಜಿಲ್ಲೆಯ ಸ್ವಾತಂತ್ರ್ಯ ಚಳವಳಿ' ಗ್ರಂಥವು ನಗರದ ವಚನಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನಾ ಕೇಂದ್ರದಲ್ಲಿ ಅಕ್ಟೋಬರ್ 26 ರಂದು ಲೋಕಾರ್ಪಣೆಗೊಂಡಿತು.

ಕಲಬುರಗಿಯ ಪಾಲಿ ಇನ್ಸ್ಟಿಟ್ಯೂಟ್‌ನ ನಿರ್ದೇಶಕ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಗ್ರಂಥವನ್ನು ಲೋಕಾರ್ಪಣೆಗೊಳಿಸಿ ಮಾತನಾಡಿ, ಸ್ವಾತಂತ್ರ್ಯ ಚಳವಳಿಯ ಇತಿಹಾಸವನ್ನು ದಾಖಲಿಸುವುದು ಅತ್ಯಂತ ಮಹತ್ವದ ಕಾರ್ಯವಾಗಿದೆ. ಈ ಕೃತಿಯ ರಚನೆಗಾಗಿ ಲೇಖಕ ದಿವಂಗತ ಜಿ.ಎ. ಬಿರಾದಾರ ಅವರು ಬಾಂಬೆ, ದೆಹಲಿ ಮತ್ತು ಬೆಂಗಳೂರು ಕೇಂದ್ರದ ಪತ್ರಾಗಾರ ಸೇರಿದಂತೆ ವಿವಿಧ ದಾಖಲೆ ಸಂಗ್ರಹಾಲಯಗಳನ್ನು ಹಾಗೂ ಅವಿಭಜಿತ ವಿಜಯಪುರ ಜಿಲ್ಲೆಯ ವಿವಿಧ ಪ್ರದೇಶಗಳನ್ನು ಸಂದರ್ಶಿಸಿ ಮಾಹಿತಿ ಸಂಗ್ರಹಿಸಿದ್ದಾರೆ. ಜಿಲ್ಲೆಯ ತಾಲೂಕುವಾರು ಸ್ಥಳೀಯ ಇತಿಹಾಸ, ಸ್ವಾತಂತ್ರ್ಯ ಹೋರಾಟಗಾರರ ಚಟುವಟಿಕೆಗಳು, ಸಮುದಾಯಗಳ ಹೋರಾಟ ಹಾಗೂ ಅಂದಿನ ಪತ್ರಿಕೆಗಳಲ್ಲಿ ಪ್ರಕಟವಾದ ವಿಷಯಗಳನ್ನು ಸಂಗ್ರಹಿಸಿ, ವಿಶ್ಲೇಷಿಸಿ, ಸುಸಂಬದ್ಧವಾಗಿ ನಿರೂಪಿಸುವುದು ಕೃತಿಯ ವಿಶೇಷತೆಯಾಗಿದೆ. ದಾಖಲೆಗಳ ಆಧಾರದಲ್ಲಿ ಇಂತಹ ಕೃತಿಯನ್ನು ರಚಿಸಿರುವುದು ಅಪರೂಪದ ಸಾಧನೆ ಎಂದರು.

ರಾಷ್ಟ್ರಮಟ್ಟದಲ್ಲಿ ನಡೆದ ಸ್ವಾತಂತ್ರ್ಯ ಚಳವಳಿಗಳು ಉತ್ತರ ಕರ್ನಾಟಕ ಹೋರಾಟದ ಮೇಲೆ ಬೀರಿದ ಪ್ರಭಾವವನ್ನು ಈ ಕೃತಿ ವಿವರಿಸುತ್ತದೆ. ವ್ಯಾಪಕ ಅಧ್ಯಯನ, ಮೂಲ ಆಕರಗಳ ಸಂಗ್ರಹ, ಸಮಗ್ರ ವಿಶ್ಲೇಷಣೆ ಹಾಗೂ ಆಧಾರಸಹಿತ ನಿರೂಪಣೆಯಿಂದ ಕೃತಿ ಮಹತ್ವ ಪಡೆದುಕೊಂಡಿದೆ. ಇಂತಹ ಸಂಶೋಧನಾತ್ಮಕ ಕೃತಿಗಳು ಸ್ವಾತಂತ್ರ್ಯ ಹೋರಾಟದ ಇತಿಹಾಸವನ್ನು ಮುಂದಿನ ಪೀಳಿಗೆಗೆ ಪರಿಚಯಿಸುವುದರ ಜೊತೆಗೆ ಪ್ರಾದೇಶಿಕ ಇತಿಹಾಸದ ಅಧ್ಯಯನಕ್ಕೂ ನೆರವಾಗಲಿದೆ ಎಂದರು.

ಕೃತಿಯ ಕನ್ನಡ ಅನುವಾದಕರಾದ ಸಂತೋಷ ಉಪಾಧ್ಯಾಯ ಮಾತನಾಡಿ, ಸ್ವಾತಂತ್ರ್ಯ ಹೋರಾಟದ ಇತಿಹಾಸವನ್ನು ಕನ್ನಡ ಓದುಗರಿಗೆ ತಲುಪಿಸಬೇಕೆಂಬ ಆಶಯದಿಂದ ಈ ಅನುವಾದ ಕಾರ್ಯ ಕೈಗೊಂಡಿದ್ದೇನೆ. ಇಂಗ್ಲೀಷ್‌ನಲ್ಲಿರುವ ಇಂತಹ ಮಹತ್ವದ ಕೃತಿಗಳು ವಿದ್ವಾಂಸರ ಅಧ್ಯಯನಕ್ಕೆ ಸೀಮಿತವಾಗದೆ, ಕನ್ನಡದ ಮೂಲಕ ಜನಸಾಮಾನ್ಯರಿಗೂ ತಲುಪಬೇಕು ಎಂಬ ಉದ್ದೇಶದಿಂದ ಮೂಲ ಕೃತಿಯ ಆಶಯಕ್ಕೆ ಧಕ್ಕೆಯಾಗದಂತೆ ಸರಳವಾಗಿ ಅನುವಾದಿಸಲಾಗಿದೆ. ಇದು ಸ್ವಾತಂತ್ರ್ಯ ಹೋರಾಟದ ಇತಿಹಾಸವನ್ನು ಜನರಿಗೆ ಪರಿಚಯಿಸುವ ನಿಟ್ಟಿನಲ್ಲಿ ನನ್ನ ಅಳಿಲು ಸೇವೆ ಎಂದರು. ಯುವ ಜನರು ಇಂತಹ ಇತಿಹಾಸದ ಕೃತಿಗಳನ್ನು ಓದಬೇಕು. ವಿದ್ಯಾರ್ಥಿಗಳಿಗೆ ಈ ಗ್ರಂಥವು ಮಹತ್ವದ ಅಧ್ಯಯನ ಸಂಪನ್ಮೂಲವಾಗಲಿದೆ ಎಂದರು.

ಬಿ.ಎಲ್.ಡಿ.ಇ. (ಡೀಮ್ಡ್) ವಿಶ್ವವಿದ್ಯಾಲಯದ ಸಮಕುಲಾಧಿಪತಿ ಡಾ. ವೈ.ಎಂ. ಜಯರಾಜ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ದಿ. ಜಿ.ಎ. ಬಿರಾದಾರ ಅವರ ಧರ್ಮಪತ್ನಿ ಗೀತಾ ಜಿ. ಬಿರಾದಾರ ಮಾತನಾಡಿದರು.

ವಚನಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನಾ ಕೇಂದ್ರದ ಕಾರ್ಯದರ್ಶಿ ಡಾ. ಎಂ.ಎಸ್. ಮದಭಾವಿ, ಸಂಶೋಧಕರ ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ ಉಪಸ್ಥಿತರಿದ್ದರು. ಸುಭಾಷ ಕನ್ನೂರ, ಡಾ. ವಿ.ಡಿ. ಐಹೊಳ್ಳಿ ಕಾರ್ಯಕ್ರಮ ನಿರ್ವಹಿಸಿದರು. ❑

ಅಭಿಮತ ವರದಿ

ಡಾ. ರೂಪಶ್ರೀಗೆ ವೈದ್ಯಕೀಯ ಸೇವೆ ಮತ್ತು ಶುಶ್ರೂಷೆಗಾಗಿ ಮನ್ನಣೆ

ದಿನಾಂಕ 23.09.2026 ರಂದು ಆಯುಷ್ ನಿರ್ದೇಶನಾಲಯ, ದೆಹಲಿ ಸರ್ಕಾರದ ವತಿಯಿಂದ ನವದೆಹಲಿಯ ಎನ್.ಡಿ.ಎಂ.ಸಿ ಕನ್ವೆನ್ಷನ್ ಸೆಂಟರ್‌ನಲ್ಲಿ ಆಯೋಜಿಸಲಾಗಿದ್ದ 11ನೇ "ಆಯುರ್ವೇದ ದಿನ" ಕಾರ್ಯಕ್ರಮದಲ್ಲಿ "Award of Recognition in Medical Service and Patient Care" ಎಂಬ ಗೌರವದೊಂದಿಗೆ ಡಾ. ರೂಪಶ್ರೀಯವರನ್ನು ಸನ್ಮಾನಿಸಲಾಯಿತು. ಮೂಲತಃ ಬೆಂಗಳೂರಿನವರಾದ ಇವರು ಬೆಂಗಳೂರಿನ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯದಲ್ಲಿ BAMS ಹಾಗೂ MS ಪದವಿಗಳನ್ನು ಪೂರ್ಣಗೊಳಿಸಿ ತದನಂತರ 2003 ರಲ್ಲಿ UPSC ಮೂಲಕ ದೆಹಲಿ ಸರ್ಕಾರದಲ್ಲಿ Medical Officer ಆಗಿ ಸೇವೆ ಆರಂಭಿಸಿದರು. ಹಂತ ಹಂತವಾಗಿ ಇವರು Senior Medical Officer, Chief Medical Officer, Chief Medical Officer (NFSG) ಹುದ್ದೆಗಳನ್ನು ನಿರ್ವಹಿಸಿ, ಪ್ರಸ್ತುತ Chief Medical Officer (SAG) ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದರ ಜೊತೆಗೆ Directorate of AYUSH ಅಡಿಯಲ್ಲಿ ಹಲವಾರು ಸಮಿತಿಗಳ ಸದಸ್ಯೆಯಾಗಿ ಸೇವೆ ಸಲ್ಲಿಸಿದ್ದಾರೆ. ಇತ್ತೀಚೆಗೆ National AYUSH Mission, Government of India ಅಡಿಯಲ್ಲಿ Medical Officer ಹಾಗೂ Pharmacists ನೇಮಕಾತಿಗಾಗಿ ನಡೆದ ಸಂದರ್ಶನ ಮಂಡಳಿಯ Chairperson ಆಗಿಯೂ ಸಮರ್ಥವಾಗಿ ಕಾರ್ಯನಿರ್ವಹಿಸಿದ್ದಾರೆ.



ಡಾ. ರೂಪಶ್ರೀಯವರನ್ನು ಗೌರವ ಸಂದ ಈ ಸಂದರ್ಭದಲ್ಲಿ ಮಾತನಾಡಿಸಿದಾಗ ಅವರು ತಮಗೆ ಈ ಗೌರವ ಅಪಾರ ಸಂತೋಷ ಮತ್ತು ಹೆಮ್ಮೆಯನ್ನು ಉಂಟುಮಾಡಿದೆ ಹಾಗೂ ತಮ್ಮ ಕರ್ತವ್ಯದ ಜವಾಬ್ದಾರಿಯನ್ನು ಹೆಚ್ಚಿಸಿ ಮುಂದಿನ ದಿನಗಳಲ್ಲಿ ಇನ್ನಷ್ಟು ಸಮರ್ಪಣೆ ಮತ್ತು ಪ್ರಾಮಾಣಿಕತೆಯಿಂದ ಕಾರ್ಯ ನಿರ್ವಹಿಸಲು ಪ್ರೇರಣೆ ನೀಡಿದೆ ಎಂದರು.

ದೆಹಲಿ ಜನಕಪುರಿ ಕನ್ನಡ ಕೂಟದ ಅಧ್ಯಕ್ಷರಾದ ಡಾ. ಅಶೋಕ ಈಟಿಯವರ ಧರ್ಮಪತ್ನಿಯಾಗಿರುವ ರೂಪಶ್ರೀಯವರು ತಮ್ಮ ವೃತ್ತಿಜೀವನದೊಂದಿಗೆ ಸಾಮಾಜಿಕ ಸೇವೆ ಹಾಗೂ ಕನ್ನಡ ಸಂಸ್ಕೃತಿಯೊಂದಿಗಿನ ನಿರಂತರ ಒಡನಾಟದ ಮೂಲಕ ಕನ್ನಡಿಗರ ಮನ ಗೆದ್ದಿದ್ದಾರೆ. ಇವರಿಗೆ ಇನ್ನಷ್ಟು ಮನ್ನಣೆಗಳು ದೊರೆಯಲೆಂದು ಸಮಸ್ತ ಕನ್ನಡಿಗರ ಪರವಾಗಿ ಅಭಿಮತ ಆಶಿಸುತ್ತದೆ. ❑

ಸಂತೋಷ ಕುಮಾರ್ ಉಪಾಧ್ಯಾಯ

ದೆಹಲಿಯ ಕನ್ನಡ ಪ್ರತಿಭೆ ರೇಶಿಕಾ ಅವರ ರಂಗಪ್ರವೇಶ

ಮೂಲತಃ ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿಯ ಕಲಾಶ್ರೀ ರೇಶಿಕಾ ದೇವಸಾ ಇವರು ಶ್ರೀಮತಿ ಚಂದ್ರಕಲಾ ಮತ್ತು ಸರ್ವೋಚ್ಚ ನ್ಯಾಯಾಲಯದ ಹಿರಿಯ ನ್ಯಾಯವಾದಿ ಶ್ರೀ ಶೇಖರ್ ಜಿ. ದೇವಸ ದಂಪತಿಗಳ ಪುತ್ರಿ. ನವದೆಹಲಿಯ ಏರ್‌ಫೋರ್ಸ್ ಬಾಲಭಾರತಿ ಶಾಲೆಯ 11ನೇ ತರಗತಿಯ ವಿದ್ಯಾರ್ಥಿನಿಯಾದ ಇವರು ಎಳವೆಯಿಂದಲೇ (ಐದನೇ ವರ್ಷದಿಂದ) ಭರತನಾಟ್ಯ ತರಬೇತಿಯನ್ನು ಪದ್ಮಶ್ರೀ, ಪದ್ಮಭೂಷಣ, ಕಲೈಮಮಣಿ ಪ್ರಶಸ್ತಿ ಮತ್ತು ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತೆ ಡಾ. ಸರೋಜ ವೈದ್ಯನಾಥನ್ ಮತ್ತು ವಿದುಷಿ ರಮಾ ವೈದ್ಯನಾಥನ್ ಅವರ ಮಾರ್ಗದರ್ಶನದಲ್ಲಿ ಆರಂಭಿಸಿದರು.

ಇತ್ತೀಚೆಗೆ ನವದೆಹಲಿಯ ಚಿನ್ಮಯ ಮಿಷನ್ ಸಭಾಂಗಣದಲ್ಲಿ ಸುಮಾರು 450ಕ್ಕೂ ಹೆಚ್ಚಿನ ಕಲಾಪ್ರೇಮಿಗಳ ಸಮ್ಮುಖದಲ್ಲಿ, ಗಣೇಶ ನಾಟ್ಯಾಲಯದ ಪ್ರಸ್ತುತಿಯಲ್ಲಿ ರೇಶಿಕಾ ಅವರ ರಂಗಪ್ರವೇಶ ಅವರ ಕಲಾತ್ಮಕ ಪ್ರಯಾಣದಲ್ಲಿ ಪ್ರಮುಖ ಮೈಲಿಗಲ್ಲಾಗಿ ಪರಿಣಮಿಸಿತು ಮತ್ತು ಭರತನಾಟ್ಯದಲ್ಲಿ ಅರ್ಥಪೂರ್ಣ ಕೃತಿಗಳನ್ನು ಸೃಷ್ಟಿಸಲು ಕಲಿಯುವಂತೆ ಮತ್ತು ಪ್ರೋತ್ಸಾಹಿಸಲು ಪ್ರೇರೇಪಿಸಿತು.

ಮುಖ್ಯ ಅತಿಥಿಗಳಾಗಿ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಶ್ರೀ ಪಿ.ಎಸ್. ನರಸಿಂಹ, ಭಾರತದ ಅಟಾರ್ನಿ ಜನರಲ್ ಶ್ರೀ ಆರ್. ವೆಂಕಟರಮಣಿ ಭಾಗವಹಿಸಿ ರೇಶಿಕಾ ಅವರ ಅಸಾಧಾರಣ ಪ್ರತಿಭೆಯನ್ನು, ಕಲೆಯಲ್ಲಿನ ಶಿಸ್ತು, ಜ್ಞಾನ, ಪರಿಪೂರ್ಣ ಅಭಿವ್ಯಕ್ತಿಯನ್ನು ಮೆಚ್ಚಿ ಶುಭಹಾರೈಸಿದರು. ನಟುವಂಗಂನಲ್ಲಿ ಕಲಾಶ್ರೀ ಶ್ರೇಯಾ ನಾರಾಯಣನ್, ಗಾಯನದಲ್ಲಿ ಶ್ರೀಮತಿ ಸುಧಾ ರಘುರಾಮನ್, ಪಿಟೀಲಿನಲ್ಲಿ ಶ್ರೀ ವಿ.ಎಸ್.ಕೆ. ಅಣ್ಣಾದೊರೈ, ಕೊಳಲಿನಲ್ಲಿ ಶ್ರೀ ಜಿ ರಘುರಾಮನ್, ಮೃದಂಗದಲ್ಲಿ ಕಲಾಶ್ರೀ ಸನ್ನಿಧಿ ವೈದ್ಯನಾಥನ್, ಛಾಯಾಗ್ರಹಣ ಮತ್ತು ವೀಡಿಯೋಗ್ರಫಿಯಲ್ಲಿ ಕಲಾಶ್ರೀ ವಿನಯ್ ತಿವಾರಿ, ಪ್ರಸಾದನದಲ್ಲಿ ಶ್ರೀ ಬ್ರಿಜ್ ಮೋಹನ್ ಗುಪ್ತಾ, ವೇಷಭೂಷಣದಲ್ಲಿ ಶ್ರೀ ಕಿಶನ್ ಕನಯ್ಯ ಲಾಲ್, ಬೆಳಕಿನಲ್ಲಿ ಕಲಾಶ್ರೀ ಪ್ರಿಯಾಂಕಾ ರಾವತ್ ಹಾಗೂ ವೇದಿಕೆ ನಿರ್ವಹಣೆಯಲ್ಲಿ ಕಲಾಶ್ರೀ ರೂಪಾಲಿ ಯಾದವ್ ಮತ್ತು ಲಕ್ಷ್ಮಿ ಸಹಕರಿಸಿದರು.

ಭರತನಾಟ್ಯದಲ್ಲಿ ಮತ್ತಷ್ಟು ಪರಿಣತಿಯನ್ನು ಪಡೆಯಬೇಕೆಂಬ ಛಲವಿರುವ ರೇಶಿಕಾ ಗುರುಗಳ ಆಶೀರ್ವಾದ, ಹೆತ್ತವರ ಅಚಲ ಪ್ರೀತಿಯೇ ತನ್ನ ಕಲಾ ಪಯಣಕ್ಕೆ ಕಾರಣ ಎನ್ನುತ್ತಾರೆ. ಕಾರ್ಯಕ್ರಮದಲ್ಲಿ ಗುರುಗಳಿಗೆ, ಅತಿಥಿಗಳಿಗೆ ಕೃತಜ್ಞತಾ ಭಾವದಿಂದ ಅರ್ಪಿಸಿದ ಗೌರವದ ಕಾಣಿಕೆಗಳು ಕಲೆಯ ಮೇಲಿನ ಪ್ರೀತಿಯನ್ನು ಸಾದರಪಡಿಸಿತು. ಕಲಾಶ್ರೀ ಅದ್ರಿಜಾ ಬ್ಯಾನರ್ಜಿ ಕಾರ್ಯಕ್ರಮ ಸಂಯೋಜಿಸಿ ನಿರೂಪಿಸಿದರು. ಶಿಕ್ಷಕರು, ಕುಟುಂಬದ ಸದಸ್ಯರು, ಸ್ನೇಹಿತರು, ಕಲಾಪ್ರೇಮಿಗಳು ಉಪಸ್ಥಿತರಿದ್ದರು. ❑

ಅರವಿಂದ ಬಿಜೈ



Delhi Karnataka Sangha Abhimata
October 2026, Vol. No.37, Issue No. 1, Price Rs.1/-
RNI Regn. No. 53405/91, DL-SW-01/4016/22-24
Date of Publication : Oct 8th / 9th, Posting Date : 10th / 11th, Total Pages-24 Monthly-Language Kannada, POSTED AT RMS DELHI-110006
Printed & Published by Radhakrishna, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press B-303, Okhla Industrial Area, Phase-I, New Delhi-110020, Tel: 40520770, Editor: Renuka Nidagundi

ಸಂಸತ್ ಭವನದ ಪ್ರೇರಣಾ ಸ್ಥಳದಲ್ಲಿ ಕಿತ್ತೂರು ರಾಣಿ ಚೆನ್ನಮ್ಮನವರ 202ನೇ ವಿಜಯೋತ್ಸವ ಆಚರಣೆ





ಬ್ರಿಟಿಷರನ್ನು ಮಣಿಸಿ ವಿಜಯದ ಕಹಳೆ ಮೊಳಗಿಸಿದ ವೀರರಾಣಿ, ಕೆಚ್ಚೆದೆಯ ಸ್ವಾತಂತ್ರ್ಯ ಹೋರಾಟಗಾರ್ತಿ ಕಿತ್ತೂರು ರಾಣಿ ಚೆನ್ನಮ್ಮನವರ ಸ್ಮರಣಾರ್ಥ, ಅಕ್ಟೋಬರ್ 23ರಂದು ನವದೆಹಲಿಯ ಸಂಸತ್ ಭವನದ ಆವರಣದಲ್ಲಿರುವ ಪ್ರೇರಣಾ ಸ್ಥಳದಲ್ಲಿ ಅವರ 202ನೇ ವಿಜಯೋತ್ಸವವನ್ನು ಅತ್ಯಂತ ಸಂಭ್ರಮದಿಂದ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಕನ್ನಡ ನಾಡಿನ ವೀರವನಿತೆ ಕಿತ್ತೂರು ರಾಣಿ ಚೆನ್ನಮ್ಮನವರ ಪ್ರತಿಮೆಗೆ ಗಣ್ಯರು ಪುಷ್ಪಾರ್ಚನೆ ಸಲ್ಲಿಸಿ ಗೌರವ ನಮನಗಳನ್ನು ಅರ್ಪಿಸಿದರು.

ಲೋಕಸಭೆಯ ಗೌರವಾನ್ವಿತ ಸಭಾಧ್ಯಕ್ಷರಾದ ಶ್ರೀ ಓಂ ಬಿರ್ಲಾ ಹಾಗೂ ಕೇಂದ್ರ ಸಚಿವರಾದ ಶ್ರೀ ಸಿ.ಆರ್. ಪಾಟೀಲ್ ಅವರು ಸಮಾರಂಭದಲ್ಲಿ ಗೌರವ ಉಪಸ್ಥಿತಿ ವಹಿಸಿ, ರಾಣಿ ಚೆನ್ನಮ್ಮನವರ ಪ್ರತಿಮೆಗೆ ಪುಷ್ಪಾರ್ಚನೆ ಸಲ್ಲಿಸಿದರು.

ಪರಮಪೂಜ್ಯ ಶ್ರೀ ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿಗಳು, ಬೀದರ್ ಜಿಲ್ಲೆಯ ಆಳೂರಿನ ಶ್ರೀ ಸಿದ್ಧಾರೂಢ ಮಠದ ಶ್ರೀ ಶಂಕರಾನಂದ ಸ್ವಾಮೀಜಿಗಳು, ಕಕ್ಕಮರಿಯ ಶ್ರೀ ಗುರುದೇವ ಆಶ್ರಮದ ಶ್ರೀ ಆತ್ಮಾರಾಮ ಸ್ವಾಮೀಜಿಗಳು ಹಾಗೂ ಚಳಕಾಪುರದ ಸಿದ್ಧಾರೂಢ ಮಠದ ಶ್ರೀ ವಿನಾಯಕ ಸ್ವಾಮೀಜಿಗಳು ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿದ್ದರು.

ಈ ಸಂದರ್ಭದಲ್ಲಿ ಸಂಸದರಾದ ಶ್ರೀ ಪಿ.ಸಿ. ಮೋಹನ್, ಡಾ. ಕೆ. ಸುಧಾಕರ್, ಮಾಜಿ ಸಚಿವರಾದ ಶ್ರೀ ಮುರುಗೇಶ್ ನಿರಾಣಿ, ಶಾಸಕರಾದ ಶ್ರೀ ಬಸವನಗೌಡ ಪಾಟೀಲ್ ಯತ್ನಾಳ್, ಕರ್ನಾಟಕ ರಾಜ್ಯದ ಮಾಜಿ ನವದೆಹಲಿ ವಿಶೇಷ ಪ್ರತಿನಿಧಿ ಶ್ರೀ ಶಂಕರಗೌಡ ಪಾಟೀಲ್ ಸೇರಿದಂತೆ ಹಲವು ಗಣ್ಯ ಜನಪ್ರತಿನಿಧಿಗಳು, ಸಮಾಜದ ಮುಖಂಡರು ಹಾಗೂ ದೆಹಲಿ ಕನ್ನಡಿಗರು ಉಪಸ್ಥಿತರಿದ್ದರು.

